ಸಂಪುಟ: 05 ಸಂಚಿಕೆ: 46 ಪುಟಗಳು: 08 ಬುಧವಾರ 30 ಏಪ್ರಿಲ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


**ಮುಂಜಾನೆ ಮಾತು**
ನೀವು ನಿಮ್ಮ ಭವಿಷ್ಯವನ್ನು ಬದಲಾಯಿಸಲು ಸಾಧ್ಯವಿಲ್ಲ, ನೀವು ನಿಮ್ಮ ಅಭ್ಯಾಸಗಳನ್ನು ಬದಲಾಯಿಸಬಹುದು. ಮತ್ತು ಖಂಡಿತವಾಗಿಯೂ ನಿಮ್ಮ ಅಭ್ಯಾಸಗಳು ನಿಮ್ಮ ಭವಿಷ್ಯವನ್ನು ಬದಲಾಯಿಸುತ್ತವೆ

## ಕಾಂಗ್ರೆಸ್ ಹಂಚಿಕೊಂಡ ಮುಖವಿಲ್ಲದ ಪಿಎಂ ಮೋದಿ ಪೋಸ್ಟರ್

• ಉದಯವಾಹಿನಿ, ಬೆಂಗಳೂರು

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮುಖವಿಲ್ಲದ, ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ಹೋಲುವ ಪೋಸ್ಟರ್ ಅನ್ನು ಬಿಡುಗಡೆ ಮಾಡಿತ್ತು. ಅದೇ, ಎಕ್ಸ್ ಪೋಸ್ಟ್ ಅನ್ನು ಕೆಪಿಸಿಸಿ ಮತ್ತೆ ರಿಟ್ವೀಟ್ ಮಾಡಿತ್ತು. ಇದು ಅಲ್ಲಲ್ಲಿ ಚರ್ಚೆಗೆ ಮತ್ತು ಆಕ್ರೋಶಕ್ಕೆ ಕಾರಣವಾಗಿದೆ.

ಕಾಂಗ್ರೆಸ್ಸಿನ ಈ ಟ್ವೀಟ್ ಅನ್ನು ಪಾಕಿಸ್ತಾನದ ಮಾಜಿ ಸಚಿವರೊಬ್ಬರು ಅದಕ್ಕೆ ಲೈಕ್ ಮಾಡಿ, ಕಾಮೆಂಟ್ ಮಾಡಿರುವುದು ಎಲ್ಲರ ಕೆಂಗಣ್ಣಿಗೆ ಗುರಿಯಾಗಿದೆ. ನಮ್ಮ ನಮ್ಮ ಸಮಸ್ಯೆಗಳನ್ನು ನಾವೇ ನಿಭಾಯಿಸಿಕೊಳ್ಳುತ್ತೇವೆ, ಮೊದಲು ನಿನ್ನ ಮನೆಯ ಉಸಾಬರಿಯನ್ನು ನೋಡಿಕೋ ಎನ್ನುವ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.




ಒಂದು ವಾರದ ಹಿಂದೆ ಏಪ್ರಿಲ್ 22ಕ್ಕೆ ಕಾಶ್ಮೀರದ ಪಹಲ್ಗಾಮ್ ನಲ್ಲಿ ಉಗ್ರರ ದಾಳಿಗೆ 26 ಪ್ರವಾಸಿಗರು ಬಲಿಯಾಗಿದ್ದರು. ದೇಶದ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ನಮ್ಮ ಬೆಂಬಲವಿದೆ ಎಂದು ಹೇಳಿದ್ದ ಕಾಂಗ್ರೆಸ್ ನಾಯಕರು, ಈಗ ಮೋದಿ ಗಾಯಬ್ ಈ ರೀತಿಯ ಸರಣಿ ಟ್ವೀಟ್ ಗಳನ್ನು ಮಾಡುತ್ತಿದ್ದಾರೆ.

**ನಮ್ಮೊಳಗಿನ ಆಂತರಿಕ ಕಲಹ ಆಹಾರವಾಗಿದ್ದು ಪಾಕಿಸ್ತಾನಕ್ಕೆ!**

ಇದಕ್ಕೆ ಬಿಜೆಪಿಯು ಅದೇ ಧಾಟಿಯಲ್ಲಿ ಉತ್ತರವನ್ನು ಕೊಡುತ್ತಿದ್ದರೂ, ಇಂತಹ ವಿಷಯಗಳಲ್ಲಿ ಎರಡು ರಾಷ್ಟ್ರೀಯ ಪಕ್ಷಗಳ ಟ್ವೀಟ್ ಸಮರ ಅಸಹ್ಯ ಹುಟ್ಟಿಸುವಂತಿದೆ. ಕಾಂಗ್ರೆಸ್ ಮಾಡಿರುವ ಟ್ವೀಟಿಗೆ, ಕತ್ತೆಯ ಮೇಲೆ ಕೊಂಬು ಎನ್ನುವ ಪದವನ್ನು ಬಳಸಿ ಆ ಪಾಕಿಸ್ತಾನದ ಮಾಜಿ ಸಚಿವ ಉದ್ದಟತನ ತೋರಿದ್ದಾನೆ. ಈತನಿಗೆ 64 ಲಕ್ಷ ಫಾಲೋವರ್ಸ್ ಇದ್ದಾರೆ. ಜವಾಬ್ದಾರಿ ತೆಗೆದುಕೊಳ್ಳಬೇಕಾದಂತಹ ಸಮಯದಲ್ಲಿ ನಾಪತ್ತೆ ಎನ್ನುವ ಶೀರ್ಷಿಕೆಯನ್ನು ಹಾಕಿ ಕಾಂಗ್ರೆಸ್ ಟ್ವೀಟ್ ಮಾಡಿದೆ. ಇದಕ್ಕೆ, ಕುರ್ತಾ, ಪೈಜಾಮ ಮತ್ತು ಪಾದರಕ್ಷೆಯ ಫೋಟೋವನ್ನು ಕಾಂಗ್ರೆಸ್ ಬಳಸಿಕೊಂಡಿದೆ. ಫೋಟೋದಲ್ಲಿ ಮುಖವಿಲ್ಲ, ಆದರೆ, ಫೋಟೋ ಶೈಲಿ ಮೋದಿಯವರನ್ನು ಹೋಲುತ್ತದೆ.

ಇದಕ್ಕೆ ನಾಟಿ ಕಾಂಗ್ರೆಸ್ ಎನ್ನುವ ಹ್ಯಾಷ್ ಟ್ಯಾಗ್ ಅನ್ನು ಬಳಸಿ, ಕತ್ತೆಯ ತಲೆಯ ಮೇಲೆ ಕೊಂಬುಗಳು ಕಾಣೆಯಾಗಿವೆ ಎಂದು ಕೇಳಿದ್ದೆ. ಆದರೆ ಇಲ್ಲಿ, ಮೋದಿ ಸಾಬ್ ಕಾಣೆಯಾಗಿದ್ದಾರೆ ಎಂದು ಪಾಕಿಸ್ತಾನದ ಮಾಜಿ ಸಚಿವ ಫವದ್ ಹುಸೇನ್ ವ್ಯಂಗ್ಯವಾಡಿದ್ದಾನೆ.

## ರೇಷನ್ ಕಾರ್ಡ್ ಇ ಕೆವೈಸಿ ಮಾಡಿಸಲು ಒಂದೇ ದಿನ ಬಾಕಿ!

• ಉದಯವಾಹಿನಿ, ಬೆಂಗಳೂರು

ಪಡಿತರ ಚೀಟಿದಾರರು ಏಪ್ರಿಲ್ 30ರೊಳಗಾಗಿ ಕಡ್ಡಾಯವಾಗಿ ಇ – ಕೆವೈಸಿ ಮಾಡಿಸಬೇಕು. ಒಂದು ವೇಳೆ ಸದಸ್ಯರ ಕೆವೈಸಿ ಆಗದಿದ್ದರೆ ಅವರ ಹೆಸರು ಕಾರ್ಡ್‌ನಿಂದ ತೆಗೆದು ಹಾಕಲಾಗುತ್ತದೆ ಎಂದು ಕರ್ನಾಟಕ ಆಹಾರ ಇಲಾಖೆ ತಿಳಿಸಿದೆ. ಈ ಬಗ್ಗೆ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ತಹಶೀಲ್ದಾರ್ ರಶ್ಮಿ ಯು ಮಹತ್ವದ ಸೂಚನೆ ನೀಡಿದ್ದಾರೆ. ಪಡಿತರ ಚೀಟಿಯಲ್ಲಿರುವ ಎಲ್ಲಾ ಸದಸ್ಯರು ತಪ್ಪದೇ ಇ – ಕೆವೈಸಿಮಾಡಿಸಬೇಕು. ಕುಣಿಗಲ್ ತಾಲ್ಲೂಕಿನ 2920 ಸದಸ್ಯರು ಇ–ಕೆವೈಸಿ ಮಾಡಿಸಿರುವುದಿಲ್ಲ. ಈವರೆಗೂ ಇ – ಕೆವೈಸಿ ಮಾಡಿಸದೇ ಇರುವ ಪಡಿತರ ಚೀಟಿಯಲ್ಲಿರುವ ಸದಸ್ಯರು ಏಪ್ರಿಲ್ ಮಾಹೆಯ ಅಂತ್ಯದೊಳಗಾಗಿ ಸಂಬಂಧಿಸಿದ ನ್ಯಾಯಬೆಲೆ ಅಂಗಡಿಗಳಲ್ಲಿಇ – ಕೆವೈಸಿ ಮಾಡಿಸಬೇಕು. ಇ – ಕೆವೈಸಿ ಮಾಡಿಸದ ಸದಸ್ಯರ ಹೆಸರನ್ನು ಪಡಿತರ ಚೀಟಿಯಿಂದ ಕೈಬಿಡಲಾಗುವುದು. ಅಲ್ಲದೆ, ಪಡಿತರ ಚೀಟಿಗಳಲ್ಲಿ ಮೃತ ಸದಸ್ಯರ ಹೆಸರುಗಳನ್ನು ಡಿಲೀಟ್ ಮಾಡಿಸದೇ ಇದ್ದಲ್ಲಿ ಮೃತರ ಮರಣ ಪ್ರಮಾಣ ಪತ್ರದೊಂದಿಗೆ ತಾಲ್ಲೂಕು ಕಚೇರಿಗೆ ಭೇಟಿ ನೀಡಿ ಮೃತ ಸದಸ್ಯರ ಹೆಸರನ್ನು ತೆಗೆಸಬೇಕು. ತಪ್ಪಿದಲ್ಲಿ ನಿಯಮಾನುಸಾರ ಕ್ರಮಕ್ಕೆಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

## ಗಲಾಟೆ ಮಾಡಿಸುವ ಬಿಜೆಪಿಯಲ್ಲಿ ಗಂಡಸರಿಲ್ಲವೇ..?

• ಉದಯವಾಹಿನಿ, ಬೆಂಗಳೂರು

ಬಿಜೆಪಿಯಲ್ಲಿ ಗಂಡಸರಿರಲಿಲ್ಲವೇ.. ಹೆಣ್ಣು ಮಕ್ಕಳನ್ನು ಬಳಸಿಕೊಂಡು ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಗಲಾಟೆ ಮಾಡಿಸಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮೂದಲಿಸಿದ್ದಾರೆ. ಸಬಿಜೆಪಿಯವರು ಸಣ್ಣತನದ ರಾಜಕೀಯ ಮಾಡುತ್ತಿದ್ದಾರೆ. ಇನ್ನು ಮುಂದೆ ನರೇಂದ್ರ ಮೋದಿಯವರ ಕಾರ್ಯಕ್ರಮಗಳಿಗೆ ನಾವು 50, 100 ಜನ ನುಗ್ಗಿ ಗಲಾಟೆ ಮಾಡುತ್ತೇವೆ. ನಮದೂ ಸರ್ಕಾರ ಇದೆ. ನಮಗೂ ಪ್ರತಿಕ್ರಿಯಿಸಲು ಗೊತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್‌ನ ಪ್ರತಿಭಟನೆಗೆ ಹೆಣ್ಣು ಮಕ್ಕಳನ್ನು ಕಳುಹಿಸಿ ಕಾರ್ಯಕ್ರಮ ಅಡ್ಡಿಪಡಿಸುವ ಅಗತ್ಯವೇನಿತ್ತು, ಏಕೆ ಬಿಜೆಪಿಯಲ್ಲಿ ಗಂಡಸಿರಲಿಲ್ಲವೇ, ಇಂತಹ ನಡವಳಿಕೆಗಳಿಗೆ ಪ್ರತಿಕ್ರಿಯೆಗಳು ವ್ಯಕ್ತವಾದರೆ ಪರಿಸ್ಥಿತಿ ಏನಾಗುತ್ತದೆ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಗೊಂದಲಗಳಾದಾಗ ಯಾರು ಅದು ಅಧಿಕಾರಿ ಎಂದು ಕೈ ಎತ್ತಿ ಕೇಳಿದರು. ಅದನ್ನು ಹೊಡೆಯಲು ಹೋಗಿದ್ದರು ಎಂದು ಬಿಂಬಿಸಲಾಗಿದೆ. ವೇದಿಕೆಯ ಮೇಲೆ ಖುದ್ದು ನಾನೇ ಇದ್ದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ನನ್ನನ್ನೇ ಕಳುಹಿಸಿ ಮುಖ್ಯಮಂತ್ರಿಯವರು ತಮ್ಮ ಪಾಡಿಗೆ ತಾವು ಮಾತನಾಡಲಿ. ಪ್ರತಿಭಟನೆ ಮಾಡುವವರಿಗೆ ಪ್ರತಿಕ್ರಿಯಿಸದಂತೆ ಸಮಾಧಾನ ಪಡಿಸಿ ಎಂದು ಹೇಳಿದರು.

## ಕಂಟೋನ್ಮೆಂಟ್ ನಿಲ್ದಾಣ ಬಳಿ 368 ಮರ ಕಡಿಯಲು ವಿರೋಧ


• ಉದಯವಾಹಿನಿ, ಬೆಂಗಳೂರು

ವಸಂತನಗರದಲ್ಲಿರುವ ದಂಡು ಪ್ರದೇಶದ ಬಳಿಯ ರೈಲ್ವೆ ಕಾಲೊನಿಯಲ್ಲಿ ವಾಣಿಜ್ಯ ಕೇಂದ್ರ ಅಭಿವೃದ್ಧಿಗೆ 368 ಮರ ತೆರವುಗೊಳಿಸಲು ರೈಲ್ವೆ ಇಲಾಖೆ ನಿರ್ಧರಿಸಿರುವುದಕ್ಕೆ ಪರಿಸರ ಕಾರ್ಯಕರ್ತರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಈ ಬೆಳವಣಿಗೆಯ ಮಧ್ಯೆ, ಬಿಬಿಎಂಪಿ ಅರಣ್ಯ ವಿಭಾಗವು ಯೋಜನೆಗೆ ಅನುಮೋದನೆ ನೀಡುವ ಮೊದಲು ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿದೆ. ಮರ ಕಡಿಯುವುದಕ್ಕೆ ವಿರೋಧ ವ್ಯಕ್ತಪಡಿಸಿರುವ ಪರಿಸರ ಕಾರ್ಯಕರ್ತರು, ಯೋಜನೆಯನ್ನು ಸ್ಥಗಿತಗೊಳಿಸಬೇಕೆಂದು ಮನವಿ ಮಾಡಿದ್ದಾರೆ. ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರು ಆಕ್ಷೇಪಣೆ, ಸಲಹೆ ಸೂಚನೆಗಳನ್ನು ಸಲ್ಲಿಸಲು 10 ದಿನಗಳ ಕಾಲಾವಕಾಶವಿದೆ. ರೈಲ್ವೆ ಸಚಿವಾಲಯದ ರೈಲ್ವೆ ಭೂ ಅಭಿವೃದ್ಧಿ ಪ್ರಾಧಿಕಾರದ ಜಂಟಿ ಜನರಲ್ ಮ್ಯಾನೇಜರ್ ವಸಂತನಗರದ ಬೆಂಗಳೂರು ಕಂಟೋನ್ಮೆಂಟ್ ರೈಲ್ವೆ ಕಾಲೋನಿ ಆವರಣದಲ್ಲಿರುವ ಮರಗಳನ್ನು 'ವಾಣಿಜ್ಯ ಅಭಿವೃದ್ಧಿ ಯೋಜನೆ'ಗಾಗಿ ತೆರವುಗೊಳಿಸಲು ಅರ್ಜಿ ಸಲ್ಲಿಸಿದ್ದಾರೆ ಎಂದು ಬಿಬಿಎಂಪಿ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ತಿಳಿಸಿದ್ದಾರೆ. ಕಂಟೋನ್ಮೆಂಟ್ ರೈಲು ನಿಲ್ದಾಣವನ್ನು 480 ಕೋಟಿ ರೂ. ವೆಚ್ಚದಲ್ಲಿ ನವೀಕರಿಸಲಾಗುತ್ತಿದೆ. ಈ ರೈಲು ನಿಲ್ದಾಣದಲ್ಲಿ 1000 ಬೈಕ್ ಹಾಗೂ 1000 ಕಾರು ಸೇರಿದಂತೆ ಒಟ್ಟು 2000 ವಾಹನಗಳ ನಿಲುಗಡೆಗೆ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣ ನಿರ್ಮಾಣ ಮಾಡಲಾಗುತ್ತಿದೆ.

# ಸೇನೆಗೆ ಮುಕ್ತ ಹಸ್ತ ಪ್ರತೀಕಾರಕ್ಕೆ ಮೋದಿ ಪ್ರತ್ಯಸ್ತ್ರ



## ಭಾರತೀಯ ಸೇನೆಯಲ್ಲಿ ನನಗೆ ಸಂಪೂರ್ಣ ನಂಬಿಕೆ ಮತ್ತು ವಿಶ್ವಾಸವಿದೆ



- ಸೇನಾ ಮುಖ್ಯಸ್ಥರ ಜತೆ ಮೋದಿ ಮಹತ್ವದ ಸಭೆ: ಗುರಿ, ಸಮಯ ನೀವೆ ನಿರ್ಧರಿಸಿ!
- ರಾಜನಾಥ್ ಸಿಂಗ್, ಅಜಿತ್ ದೋವಲ್ ಹಾಗೂ 3 ಸೇನೆಗಳ ಮುಖ್ಯಸ್ಥರ ಜತೆ ಪ್ರಧಾನಿ ಮೋದಿ ಮಹತ್ವದ ಸಭೆ.
- ಇಂದು ಸಚಿವ ಸಂಪುಟ ಸಭೆಯಲ್ಲಿ ಇನ್ನಷ್ಟು ಮಹತ್ವದ ನಿರ್ಧಾರ ಸಾಧ್ಯತೆ.

**ಭಯೋತ್ಪಾದನೆಯನ್ನು ಸಂಪೂರ್ಣ ತೊಡೆದು ಹಾಕುವುದು ನಮ್ಮ ರಾಷ್ಟ್ರೀಯ ಸಂಕಲ್ಪ, ಭಾರತೀಯ ಸೇನೆಯ ವೃತ್ತಿಪರ ಸಾಮರ್ಥ್ಯದ ಬಗ್ಗೆ ನನಗೆ ಸಂಪೂರ್ಣ ನಂಬಿಕೆ ಮತ್ತು ವಿಶ್ವಾಸವಿದೆ. ಪಹಲ್ಗಾಮ್ ದಾಳಿಯ ಸಂತ್ರಸ್ತರು ದುಃಖಿಸುತ್ತಿರುವ ದೃಶ್ಯಗಳನ್ನು ನೋಡಿದರೆ ಪ್ರತಿಯೊಬ್ಬ ಭಾರತೀಯನ ರಕ್ತ ಕುದಿಯುತ್ತಿದೆ. ಪಹಲ್ಗಾಮ್ ದಾಳಿಯಿಂದ ನನಗೆ ತುಂಬಾ ನೋವಾಗಿದೆ. ಇದು ಭಯೋತ್ಪಾದನೆಯ ಬೆಂಬಲಿಗರ ಹತಾಶೆ ಅವರ ಹೇಡಿತನವನ್ನು ತೋರಿಸುತ್ತದೆ. ಸಂತ್ರಸ್ತರ ಕುಟುಂಬಕ್ಕೆ ನ್ಯಾಯ ಸಿಗಲಿದೆ. ಅಪರಾಧ ಎಸಗಿದವರಿಗೆ, ಬೆಂಬಲಿಗರಿಗೆ, ಸೂತ್ರಧಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು**

-ನರೇಂದ್ರ ಮೋದಿ, ಪ್ರಧಾನಿ



• ಉದಯವಾಹಿನಿ, ಹೊಸದಿಲ್ಲಿ

ಜಮ್ಮು ಕಾಶ್ಮೀರದ ಪಹಲ್ಗಾಮ್ ದಾಳಿಗೆ ಭಾರತ ಪ್ರತ್ಯುತ್ತರ ಕೊಡಲು ಸಿದ್ಧತೆ ನಡೆಸುತ್ತಿದ್ದು, ಪ್ರಧಾನಿ ನರೇಂದ್ರ ಮೋದಿಯವರು ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಹಾಗೂ ಮೂರು ಸೇನೆಗಳ ಮುಖ್ಯಸ್ಥರ ಜತೆ ಸಭೆ ನಡೆಸಿದ್ದಾರೆ.

ದೆಹಲಿಯ 7 ಲೋಕ ಕಲ್ಯಾಣ ಮಾರ್ಗದಲ್ಲಿರೋ ಪ್ರಧಾನಿಗಳ ಅಧಿಕೃತ ನಿವಾಸದಲ್ಲಿಈ ಮಹತ್ವದ ಸಭೆ ನಡೆದಿದೆ.ಇಂದು ನಡೆಯಲಿರುವ ಕೇಂದ್ರ ಸರ್ಕಾರದ ಭದ್ರತಾ ಸಚಿವ ಸಂಪುಟ ಸಭೆಯ ಪೂರ್ವಭಾವಿ ಸಭೆ ಇದಾಗಿತ್ತು.

ಈ ಸಭೆಯಲ್ಲಿ ಏನೆಲ್ಲಾ ಚರ್ಚೆಯಾಗಿದೆ? ಭಾರತದ ಮುಂದಿನ ನಡೆಯೇನು? ಎಂಬ ಬಗ್ಗೆ ಅಧಿಕಾರಿಗಳಾಗಲಿ, ಪ್ರಧಾನಿ, ಸಚಿವರಾಗಲಿ ಮಾಹಿತಿಯನ್ನು ಬಿಟ್ಟುಕೊಟ್ಟಿಲ್ಲ.

ಇನ್ನು ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಭಾರತವು ಬುದ್ಧಿ ಕಲಿಸಬೇಕು ಎಂಬ ಒತ್ತಾಯವು ದೇಶದೆಲ್ಲಾ ನಾಗರೀಕರಿಂದ ಕೇಳಿಬಂದಿತ್ತು. ಈ ಸಭೆ ಕುತೂಹಲ ಕೆರಳಿಸಿದ್ದು, ಪಾಕಿಸ್ತಾನದ ವಿರುದ್ಧ ಸೇನಾ ಕ್ರಮಕ್ಕೆ ಭಾರತ ಮುಂದಾಗಿರುವುದು ಸ್ಪಷ್ಟವಾಗಿದೆ. ಈ ಸಭೆ ಪಾಕಿಸ್ತಾನಕ್ಕೆ ದಿಗಿಲು ಹುಟ್ಟಿಸಿದ್ದು, ಭಾರತ ಏನು ಕ್ರಮ ಕೈಗೊಳ್ಳುತ್ತದೆಯೋ ಎಂಬ ಆತಂಕದಲ್ಲಿ ಪಾಕಿಸ್ತಾನ ಇದೆ.

**ಮೋದಿ ಅಧ್ಯಕ್ಷತೆಯಲ್ಲಿ ಮಹತ್ವದ ಸಭೆ**

ಭಾರತ ಸರ್ಕಾರವು ರಾಷ್ಟ್ರೀಯ ಭದ್ರತೆಯ ಕುರಿತು ದೇಶದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಯಾದ ಭದ್ರತಾ ಸಂಪುಟ ಸಮಿತಿಯ ಸಭೆಯನ್ನು ಇಂದು ಬೆಳಗ್ಗೆ 11 ಗಂಟೆ ನಡೆಸಲಿದೆ. ನಂತರ ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿ, ಕೇಂದ್ರ ಸಂಪುಟ ಸಮಿತಿ ಸಭೆಗಳು ಮೋದಿ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಿವೆ. ಈ ಮೂರು ಸಭೆ ಮುಕ್ತಾಯಗೊಳ್ಳುವಷ್ಟರಲ್ಲೇ ಭಾರತ ಸರ್ಕಾರ ಪಾಕಿಸ್ತಾನ ವಿರುದ್ಧ ಪ್ರತೀಕಾರಕ್ಕೆ ಅಂತಿಮ ತೀರ್ಮಾನ ಕೈಗೊಳ್ಳಲಿದೆ.

1 ಏಪ್ರಿಲ್ 22ರಂದು ಕಾಶ್ಮೀರದ ಪಹಲ್ಗಾಮ್ ನಲ್ಲಿ ಉಗ್ರರ ದಾಳಿಯಲ್ಲಿ 26 ಜನ ಮೃತಪಟ್ಟಿದ್ದರು

2 ಫೆಬ್ರವರಿ 2019ರ ಪುಲ್ವಾಮಾ ದಾಳಿಯಲ್ಲಿ 40 ಸೈನಿಕರು ಸಾವನ್ನಪ್ಪಿದ್ದರು.

3 ಭಾರತ ಪಾಕಿಸ್ತಾನದ ಬಾಲಕೋಟ್‌ನಲ್ಲಿರುವ ಭಯೋತ್ಪಾದಕ ಶಿಬಿರಗಳ ಮೇಲೆ ವಾಯುದಾಳಿ ನಡೆಸಿತ್ತು.

**ಸೇನೆಗೆ ಮೋದಿ ಮುಕ್ತ ಅಧಿಕಾರ?**

ಈ ಸಭೆಯಲ್ಲಿ ಭಯೋತ್ಪಾದನೆಯನ್ನು ಹತ್ತಿಕ್ಕುವ ಸಂಕಲ್ಪವನ್ನು ಪ್ರಧಾನಿ ಮೋದಿ ದೃಢಪಡಿಸಿದ್ದು, ಸಶಸ್ತ್ರ ಪಡೆಗಳಿಗೆ ಮುಕ್ತ ಹಸ್ತ ನೀಡಿದ್ದಾರೆ. ಜತೆಗೆ ಭಯೋತ್ಪಾದನೆಯ ವಿರುದ್ಧ ಪೂರ್ಣ ಬಲದಿಂದ ಹೋರಾಡುವ ಬದ್ಧತೆಯನ್ನು ಮೋದಿ ಪುನರುಚ್ಚರಿಸಿದ್ದಾರೆ ಎನ್ನಲಾಗಿದೆ. ಭಯೋತ್ಪಾದನೆ ಮಟ್ಟಹಾಕುವುದು ನಮ್ಮ ರಾಷ್ಟ್ರೀಯ ಸಂಕಲ್ಪ ಎಂದು ಹೇಳಿರುವ ಪ್ರಧಾನಿ ಮೋದಿ, ಭಯೋತ್ಪಾದನೆಯ ವಿರುದ್ಧದ ಹೋರಾಟವು ಪ್ರಮುಖ ರಾಷ್ಟ್ರೀಯ ಆದ್ಯತೆಯಾಗಿದೆ. ಭಾರತೀಯ ಸಶಸ್ತ್ರ ಪಡೆಗಳ ವೃತ್ತಿಪರ ಸಾಮರ್ಥ್ಯದ ಬಗ್ಗೆ ಸಂಪೂರ್ಣ ನಂಬಿಕೆ ಮತ್ತು ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಸೇನೆಗೆ ನಮ್ಮ ಸಂಪೂರ್ಣ ಬೆಂಬಲ ಇದೆ ಎಂದು ಹೇಳಿದ್ದಾರೆ.



**ದಾಳಿಯ ಗುರಿ, ಸಮಯ ನೀವೇ ನಿರ್ಧರಿಸಿ**

ಮುಂದಿನ ಗುರಿಗಳು, ಸಮಯವನ್ನು ನಿರ್ಧರಿಸಲು ಸಂಪೂರ್ಣ ಕಾರ್ಯಾಚರಣೆಯ ಸ್ವಾತಂತ್ರ್ಯವನ್ನು ನಿಮಗೆ ನೀಡಲಾಗಿದೆ ಎಂದು ಸಭೆಯಲ್ಲಿ ಉಪಸ್ಥಿತರಿದ್ದ ಸೇನಾ ಮುಖ್ಯಸ್ಥರಿಗೆ ಪ್ರಧಾನಿ ಮೋದಿ ತಿಳಿಸಿದ್ದಾರೆ.

## ಬಿಬಿಎಂಪಿ ಆಸ್ತಿ ತೆರಿಗೆ ರಿಯಾಯಿತಿ ಅವಧಿ ಮತ್ತೆ ವಿಸ್ತರಣೆ

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ 2025 – 26ನೇ ಸಾಲಿನ ಆಸ್ತಿ ತೆರಿಗೆಯನ್ನು ಸಂಪೂರ್ಣವಾಗಿ ಪಾವತಿಸುವ ತೆರಿಗೆದಾರರಿಗೆ ಶೇಕಡಾ 5 ರಷ್ಟು ರಿಯಾಯಿತಿ ನೀಡುವ ಅವಧಿಯನ್ನು ಮೇ 31 ರವರೆಗೆ ವಿಸ್ತರಿಸಿ ಆದೇಶಿಸಲಾಗಿದೆ. ಆಸ್ತಿ ಮಾಲೀಕರು ಏಪ್ರಿಲ್ 30ರೊಳಗೆ ಪೂರ್ಣ ತೆರಿಗೆ ಪಾವತಿಸಿ ಶೇಕಡಾ 5 ರಷ್ಟು ರಿಯಾಯಿತಿ ಪಡೆಯಲು ಅವಕಾಶ ಕಲ್ಪಿಸಲಾಗಿತ್ತು. ಶೇಕಡಾ 5 ರಷ್ಟು ರಿಯಾಯಿತಿ ಸೌಲಭ್ಯ ಪಡೆಯಲು ಒಂದು ದಿನವಷ್ಟೇ ಬಾಕಿ ಇದೆ.

ಹೀಗಾಗಿ, ರಿಯಾಯಿತಿ ಅವಧಿಯನ್ನು ಮೇ 31 ವರೆಗೆ ವಿಸ್ತರಿಸಲಾಗಿದೆ. ಅಂದೇ ರಿಯಾಯಿತಿಗೆ ಕಡೆಯ ದಿನವಾಗಿದೆ.

**ಬಿಬಿಎಂಪಿ ಆಸ್ತಿ ತೆರಿಗೆ ಸಂಗ್ರಹವಾಗಿದ್ದೆಷ್ಟು?**: ಪಾಲಿಕೆ ವ್ಯಾಪ್ತಿಯಲ್ಲಿ 20 ಲಕ್ಷಕ್ಕೂ ಅಧಿಕ ಸ್ವತ್ತುಗಳಿದ್ದು, ಪ್ರಸಕ್ತ ಹಣಕಾಸು ವರ್ಷದ ಕಳೆದ 28 ದಿನಗಳಲ್ಲಿ 5 ಲಕ್ಷ ಆಸ್ತಿ ಮಾಲೀಕರು ಪೂರ್ಣತೆರಿಗೆ ಪಾವತಿಮಾಡಿ ಶೇ.5ರಷ್ಟು ರಿಯಾಯಿತಿ ಪಡೆದಿದ್ದಾರೆ. ಇದರಿಂದ ಪಾಲಿಕೆಗೆ 1200 ಕೋಟಿ ರೂ. ವರಮಾನ ಸಂಗ್ರಹವಾಗಿದೆ.



**ಹೆಚ್ಚು ಆಸ್ತಿ ಸಂಗ್ರಹ** : 2023 – 24 ನೇ ಸಾಲಿಗಿಂತ 2024 – 25ನೇ ಸಾಲಿನಲ್ಲಿ ರೂ.1,000 ಕೋಟಿಗಳಿಗಿಂತ ಹೆಚ್ಚಿನ ಮೊತ್ತದ ಆಸ್ತಿ ತೆರಿಗೆ ಸಂಗ್ರಹಣೆಯಾಗಿದೆ. 2023–24 ನೇ ಸಾಲಿನಲ್ಲಿ ರೂ. 3,918 ಕೋಟಿ ಆಸ್ತಿ ತೆರಿಗೆ ಸಂಗ್ರಹಣೆಯಾಗಿತ್ತು. 2025 – 26ನೇ ಹಣಕಾಸು ವರ್ಷದಲ್ಲಿ ಪಾಲಿಕೆಯು ರೂ. 6,000 ಕೋಟಿ ಮೊತ್ತದ ಆಸ್ತಿ ತೆರಿಗೆ ಸಂಗ್ರಹಣೆಯನ್ನು ಮೀರಲಿದೆ.

**ಒಂದು ಬಾರಿ ಪರಿಹಾರ ಯೋಜನೆ:** ಬಾಕಿ ಮತ್ತು ಪ್ರಸ್ತುತ ತೆರಿಗೆ ಬಾಕಿಗಳ ಮೇಲೆ ಬಹಳ ವ್ಯವಸ್ಥಿತ ಕೆಲಸ ನಿರ್ವಹಣೆ ಮತ್ತು ತಂತ್ರಜ್ಞಾನ ಆಧಾರಿತ ಅನುಸರಣೆ. ಬಾಕಿ ಆಸ್ತಿ ತೆರಿಗೆಗಳನ್ನು ವಸೂಲಿ ಮಾಡಲು ಸಂಪೂರ್ಣವಾಗಿ ಪರಿಣಾಮಕಾರಿ ಪ್ರಮಾಣಿತ ಕಾರ್ಯಾಚರಣೆ ವಿಧಾನಗಳು ಮತ್ತು ನಿಯಮಗಳನ್ನು ಹೊರಡಿಸಲಾಗಿತ್ತು.

ಬಾಕಿ ಹಾಗೂ ಪ್ರಸ್ತುತ ಸಾಲಿನ ಆಸ್ತಿ ತೆರಿಗೆಯ ವಸೂಲಾತಿಗೆ ಮನೆ– ಮನೆಗಳಿಗೆ ನಿರಂತರವಾಗಿ ಭೇಟಿ ನೀಡಿ ವಸೂಲಿ ಮಾಡಲಾಗಿರುತ್ತದೆ.

**ಬಿಬಿಎಂಪಿಗೆ ನೂತನ ಆಡಳಿತಾಧಿಕಾರಿ**

ಬಿಬಿಎಂಪಿಯ ನೂತನ ಆಡಳಿತಾಧಿಕಾರಿಯಾಗಿ ತುಷಾರ್ ಗಿರಿನಾಥ್ ನೇಮಕಗೊಂಡಿದ್ದು, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಮಹೇಶ್ವರರಾವ್ ಅವರಿಗೆ ಪಾಲಿಕೆಯ ಮುಖ್ಯ ಆಯುಕ್ತರ ಹುದ್ದೆಯ ಹೆಚ್ಚುವರಿ ಜವಾಬ್ದಾರಿ ನೀಡಲಾಗಿದೆ. ಬಿಬಿಎಂಪಿ ಆಡಳಿತಾಧಿಕಾರಿಯಾಗಿರುವ ಎಸ್.ಆರ್.ಉಮಾಶಂಕರ್ ಸೇವಾ ನಿವೃತ್ತಿ ಹೊಂದಲಿರುವ ಹಿನ್ನೆಲೆಯಲ್ಲಿ ಸರಕಾರ ತುಷಾರ್ ಗಿರಿನಾಥ್ ಅವರನ್ನು ಪಾಲಿಕೆಯ ಆಡಳಿತಾಧಿಕಾರಿಯಾಗಿ ನೇಮಿಸಿದೆ. ಉಮಾಶಂಕರ್ ಅವರು ನಿಭಾಯಿಸುತ್ತಿದ್ದ ನಗರಾಭಿವೃದ್ಧಿ ಹಾಗೂ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ಹುದ್ದೆಯ ಜವಾಬ್ದಾರಿಯನ್ನು ತುಷಾರ್ ಗಿರಿನಾಥ್ ಅವರಿಗೆ ಹೆಚ್ಚುವರಿಯಾಗಿ ವಹಿಸಲಾಗಿದೆ.

# ನಮ್ಮ ಹೆಣಗಳ ಮೇಲೆ ಬೆಂಗಳೂರು 2ನೇ ವಿಮಾನ ನಿಲ್ದಾಣ ನಿರ್ಮಿಸಿ

## ■ ಸೋಲೂರು, ನೆಲಮಂಗಲ ರೈತರಿಂದ ಭಾರಿ ವಿರೋಧ ■ ಸಾವಿರಾರು ರೈತರಿಂದ ಪ್ರತಿಭಟನಾ ಸಭೆ; ಶಾಸಕರ ಸಭೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ 2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಮ್ಮ ಹೆಣಗಳ ಮೇಲೆ ಸರಕಾರಗಳು ಮಾಡಬೇಕೆಂದು ನೆಲಮಂಗಲ–ಸೋಲೂರು ರೈತರು ಹಾಗೂ ರೈತ ಮಹಿಳೆಯರು ಆಕ್ರೋಶ ವ್ಯಕ್ತಪಡಿಸಿ, ಪ್ರತಿಭಟನಾ ಸಭೆ ನಡೆಸಿದ್ದಾರೆ.

ನೆಲಮಂಗಲ ವಿಧಾನಸಭಾ ಕ್ಷೇತ್ರದ ದಾಸೇಗೌಡನ ಪಾಳ್ಯದಲ್ಲಿ ಮಂಗಳವಾರ ನಡೆದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ವಿರೋಧಿಸಿ ನಡೆದ ಪ್ರತಿಭಟನಾ ಸಭೆಯಲ್ಲಿರೈತರು, ಮಹಿಳೆಯರು, ನಾನಾ ಪಕ್ಷಗಳ ಮುಖಂಡರು ಒಗ್ಗಟ್ಟನ್ನು ಪ್ರದರ್ಶಿಸಿದರು.

**ಊಟ, ನಿದ್ದೆ ಬಿಟ್ಟಿದ್ದಾರೆ:** ಸೋಲೂರು ಹೋಬಳಿಯ 3 ಗ್ರಾಪಂ ಅನೇಕ ಹಿರಿಯರು, ಮಹಿಳೆಯರು, ರೈತರು ಈ ಭಾಗದಲ್ಲಿ ವಿಮಾನ ನಿಲ್ದಾಣಕ್ಕೆ ಸ್ಥಳ ಗುರುತು ಮಾಡಿದ ನಂತರ ಭೂಸ್ವಾಧೀನವಾದರೆ ಭವಿಷ್ಯದ ಬಗ್ಗೆ ಚಿಂತಿಸಿ, ಊಟ, ನಿದ್ದೆ ಬಿಟ್ಟಿದ್ದು, ಕೆಲವರು ಸುಸ್ತಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ವಿಚಾರ ತಿಳಿದ ಶಾಸಕರು, ನಿಮ್ಮ ಜತೆ ನಾನಿದ್ದೇನೆ, ಯಾರೂ ಊಟ, ನಿದ್ದೆಬಿಟ್ಟು ಆರೋಗ್ಯ ಹಾಳುಕೊಳ್ಳಬೇಡಿ ಎಂದು ಧೈರ್ಯ ತುಂಬಿದ್ದಾರೆ ಎಂದರು.



**ರೈತರನ್ನು ಒಕ್ಕಲೆಬ್ಬಿಸುವ ಕೆಲಸ**

**ಶಾಸಕ ಸ್ಥಾನ ಪಣಕ್ಕಿಟ್ಟು ನಿಮ್ಮ ಜತೆ ಹೋರಾಟ:** ಮೋಟಗಾನಹಳ್ಳಿ, ಗುಡೇಮಾರನಹಳ್ಳಿ ಭಾಗ ಫಲವತ್ತಾದ ಕೃಷಿ ಭೂಮಿಯಾಗಿದೆ. ಇಂತಹ ಸ್ಥಳದಲ್ಲಿರುವ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡುವುದು ಸರಿಯಲ್ಲ, ಜನರಿಂದ ನಾನು ಶಾಸಕನಾಗಿದ್ದೇನೆ, ಅವರಿಗಾಗಿ, ಅವರ ಭೂಮಿಗಾಗಿ ನನ್ನ ಶಾಸಕ ಸ್ಥಾನ ಪಣಕ್ಕಿಟ್ಟಾದರೂ ಈ ಭಾಗದಲ್ಲಿವಿಮಾನ ನಿಲ್ದಾಣ ಆಗದಂತೆ ನೋಡಿಕೊಳ್ಳುವೆ. ನಿಮ್ಮಲ್ಲಿ ಕೆಲ ಮುಖಂಡರು ಬಂದರೆ, ಸಿಎಂ, ಡಿಸಿಎಂ, ಸಚಿವರನ್ನು ಭೇಟಿ ಮಾಡಿಸಿ, ಮನವಿ ಸಲ್ಲಿಸೋಣ ಎಂದು ನೆಲಮಂಗಲ ಶಾಸಕ ಎನ್. ಶ್ರೀನಿವಾಸ್ ಭರವಸೆ ನೀಡಿದರು.

ಶ್ರೀ ಚನ್ನಬಸವ ಆರಾಧ್ಯ ಸ್ವಾಮೀಜಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಆರ್.ಗೌಡ, ಎನ್‌ಪಿಎ ಅಧ್ಯಕ್ಷ ನಾರಾಯಣಗೌಡ, ಮುಖಂಡರಾದ ರಾಮಣ್ಣ, ರಾಮೇಗೌಡ, ಮಂಜುನಾಥ್, ರಂಗಸ್ವಾಮಿ, ಬಿಜೆಪಿ ಮುಖಂಡ ಬೃಂಗೇಶ್, ವಿನೋದ್ ಭಾಗವಹಿಸಿದ್ದರು.

**2ನೇ ಏರ್‌ಪೋರ್ಟ್ ಎಎಐ ಅಧ್ಯಯನ**

ರಾಜಧಾನಿಯ ಸಮೀಪ ನಿರ್ಮಿಸಲು ಉದ್ದೇಶಿಸಿರುವ ಎರಡನೇ ಏರ್ಪೋರ್ಟ್ ಸಂಬಂಧ ಮೂರೂ ಸ್ಥಳಗಳ ಪರಿಶೀಲನೆ ನಡೆಸಿರುವ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (ಎಎಐ) ಉನ್ನತ ಮಟ್ಟದ ತಂಡವು ಇನ್ನು ಒಂದು ತಿಂಗಳಲ್ಲಿ ತನ್ನ ಅಭಿಪ್ರಾಯ ತಿಳಿಸುವ ಸಾಧ್ಯತೆ ಇದೆ. ಬಳಿಕ ಇದನ್ನು ವಿಸ್ತೃತ ಅಧ್ಯಯನಕ್ಕೆ ವಿಮಾನ ನಿಲ್ದಾಣಗಳ ಅಭಿವೃದ್ಧಿಪಡಿಸುವಂತಹ ಪರಿಣತ ಕಂಪನಿಗಳ ಮುಂದೆ ಕೊಂಡೊಯ್ಯಲಾಗುವುದು. ಬಳಿಕ ಸರಕಾರವು ವಿಮಾನ ನಿಲ್ದಾಣಕ್ಕೆ ಸ್ಥಳವನ್ನು ಅಂತಿಮಗೊಳಿಸಲಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ ಬಿ ಪಾಟೀಲ ಹೇಳಿದ್ದರು. ಎಎಐ ತಂಡ ಬಂದು ಹೋಗಿರುವುದು ನಿಜ. ವಿಮಾನ ನಿಲ್ದಾಣವನ್ನು ಎಲ್ಲಿ ಮಾಡಿದರೆ ಸೂಕ್ತವೆನ್ನುವುದು ಪ್ರಯಾಣಿಕರ ದಟ್ಟಣೆ, ಕಾರ್ಗೋ ದಟ್ಟಣೆ ಮತ್ತು ಕೈಗಾರಿಕಾ ಅಗತ್ಯ ಮುಂತಾದ ಅಂಶಗಳನ್ನು ಅವಲಂಬಿಸಿದೆ ಎಂದು ಅವರು ತಿಳಿಸಿದ್ದರು. ಈಗ ದೇವನಹಳ್ಳಿ ಬಳಿ ವಿಮಾನ ನಿಲ್ದಾಣವಿದೆ. 2033ರವರೆಗೂ ಇಲ್ಲಿಂದ 150 ಕಿ.ಮೀ. ಅಂತರದಲ್ಲಿ ಇನ್ನೊಂದು ಏರ್ಪೋರ್ಟ್ ಮಾಡಬಾರದು ಎನ್ನುವ ಷರತ್ತಿದೆ. ನಾವು ಈಗಿನಿಂದಲೇ ಪ್ರಾರಂಭಿಸಿದರೆ, 2030ರ ವೇಳೆಗೆ ಎರಡನೇ ಏರ್ಪೋರ್ಟ್ ಅಭಿವೃದ್ಧಿ ಪ್ರಾರಂಭಿಸಬಹುದು. ಇಲ್ಲದೆ ಹೋದರೆ 2040ನೇ ಇಸವಿ ಬಂದರೂ ವಿಮಾನ ನಿಲ್ದಾಣ ಆಗುವುದಿಲ್ಲ ಎಂದು ಅವರು ವಿವರಿಸಿದ್ದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,797/Gram24ct ₹8,980/Gram22ct ಬೆಳ್ಳಿ: ₹100.50/Gram

## ಹೊತ್ತಿ ಉರಿದ ಬಣ್ಣದ ಕಾರ್ಖಾನೆ

• ಉದಯವಾಹಿನಿ, ಮಾಲೂರು

ಇಲ್ಲಿಯ ಕೂರಂಡಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಬಣ್ಣ ತಯಾರಿಕಾ ಕಾರ್ಖಾನೆಯಲ್ಲಿ ಬೆಳಗ್ಗೆ ಕಾಣಿಸಿಕೊಂಡ ಬೆಂಕಿಯಿಂದ ಕಾರ್ಖಾನೆ ಏಳು ತಾಸು ಹೊತ್ತಿ ಉರಿದಿದೆ. ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆಯೇ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ 90ಕ್ಕೂ ಹೆಚ್ಚು ಕಾರ್ಮಿಕರು ಹೊರಗೆ ಓಡಿ ಬಂದು ಪ್ರಾಣ ಉಳಿಸಿಕೊಂಡಿದ್ದಾರೆ. ಸೌತ್ ಫೀಲ್ಡ್ ಪೇಂಟ್ಸ್ ಪ್ರೈವೇಟ್ ಲಿಮಿಟೆಡ್ ಕಾರ್ಖಾನೆಯಲ್ಲಿ ಬಣ್ಣ ತಯಾರಿಸಲು ಬಳಸಲು ಇಟ್ಟಿದ್ದ ಕಚ್ಚಾ ರಾಸಾಯನಿಕ ವಸ್ತುಗಳಿಗೆ ಬೆಳಗ್ಗೆ 10ಕ್ಕೆ ಬೆಂಕಿ ತಗುಲಿದೆ. ಸಂಜೆ 5ರವರೆಗೆ ಹೊತ್ತಿ ಉರಿದಿದೆ. ಬೇಸಿಗೆಯಾದ್ದರಿಂದ ನೋಡ ನೋಡುತ್ತಿದ್ದಂತೆಯೇ ಬೆಂಕಿ ಇಡೀ ಕಾರ್ಖಾನೆಗೆ ಆವರಿಸಿಕೊಂಡಿತು. ಕಾರ್ಖಾನೆ ಸುತ್ತಲೂ ದಟ್ಟವಾದ ಹೊಗೆ ಆವರಿಸಿತ್ತು. ಏಳು ತಾಸು ಹೊತ್ತಿ ಉರಿದ ಕಾರ್ಖಾನೆಯಲ್ಲಿಯ ಎಲ್ಲಾ ವಸ್ತುಗಳು ಸಂಪೂರ್ಣ ಸುಟ್ಟು ಭಸ್ಮವಾಗಿವೆ. ಮಾಲೂರು, ಬಂಗಾರಪೇಟೆ ಅಗ್ನಿ ಶಾಮಕ ದಳದ ಸಿಬ್ಬಂದಿ ಸಂಜೆ 5ಕ್ಕೆ ಬೆಂಕಿಯನ್ನು ಹತೋಟಿಗೆ ತಂದರು.

ವಿದ್ಯಾ ರೈ ಮತ್ತು ಶಿವರಾಮ ಶೇಷಪ್ಪ ಹೆಗ್ಡೆ ಪಾಲುದಾರಿಕೆಯ ಈ ಕಾರ್ಖಾನೆ 20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, 90ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ತಹಶೀಲ್ದಾರ್ ಎಂ.ವಿ.ರೂಪಾ, ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿ ವರಲಕ್ಷ್ಮಿ, ಮಾಲೂರು ಕಾರ್ಮಿಕ ಇಲಾಖೆಯ ನಿರೀಕ್ಷಕ ರೇಣುಕಾ ಪ್ರಸನ್ನ, ಇನ್ಸ್ಪೆಕ್ಟರ್ ವಸಂತ್ ಸ್ಥಳಕ್ಕೆ ಭೇಟಿ ನೀಡಿದ್ದರು.


ಉದಯವಾಹಿನಿ ಚಿತ್ರ

## ಕೇಂದ್ರ ಸರ್ಕಾರದ ಜೊತೆ ನಾವು ಸದಾ ಇದ್ದೇವೆ: ದೇವೇಗೌಡ

### ಪೊಲೀಸ್ ಅಧಿಕಾರಿ ಮೇಲೆ ಸಿಎಂ ಸಿದ್ದರಾಮಯ್ಯ ಕೈ : ದೇವೇಗೌಡರ ಟಾಂಗ್

• ಉದಯವಾಹಿನಿ, ಮೈಸೂರು


ಉದಯವಾಹಿನಿ ಚಿತ್ರ

ಕಾಶ್ಮೀರದಲ್ಲಿ ಪ್ರವಾಸಿಗರ ಮೇಲೆ ದಾಳಿ ಮಾಡಲಾಗಿದೆ. ಈ ವಿಷಯದಲ್ಲಿ ಕಾಂಗ್ರೆಸ್, ಮಲ್ಲಿಕಾರ್ಜುನ ಖರ್ಗೆ ಪ್ರಬುದ್ಧ ಸ್ಟೇಟ್ ಮೆಂಟ್ ಮಾಡಿದ್ದಾರೆ. ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರಾಗಿ ಖರ್ಗೆಯವರು ಒಳ್ಳೆಯ ನಿರ್ಧಾರ ಕೈಗೊಂಡಿದ್ದಾರೆ. ಮೋದಿ ನಿರ್ಧಾರಕ್ಕೆ ನಮ್ಮ ಐಕ್ಯತೆ ತೋರಬೇಕು ಎಂದಿದ್ದಾರೆ. ಪಕ್ಷದ ಎಲ್ಲರೂ ಶತ್ರುಗಳನ್ನು ಗುರುತಿಸಿ ಅವರನ್ನು ಸರ್ವನಾಶ ಮಾಡಬೇಕು ಎಂದಿದ್ದಾರೆ. ದೇಶದ ಜನತೆ ಕೂಡ ಈ ಘಟನೆಯನ್ನು ಖಂಡಿಸಿದ್ದಾರೆ. ಮೋದಿ ಅವರು ವಿಶ್ವದ ನಾಯಕನಾಗಿ ಬೆಳೆದಿದ್ದಾರೆ. ಅನೇಕ ರಾಷ್ಟ್ರಗಳು ಭಾರತವನ್ನು ಬೆಂಬಲಿಸಿವೆ. ಯಾವುದೇ ಸಂದರ್ಭದಲ್ಲಿಯೂ ನಿಮ್ಮ ಜೊತೆ ಇರುತ್ತೇವೆ ಎಂದು ಹೇಳಿವೆ ಎಂದು ಮಾಜಿ ಪ್ರಧಾನಿ ದೇವೇಗೌಡರು ಹೇಳಿದ್ದಾರೆ.

■ ಸರ್ಕಾರ ಕೂಡ ಉಗ್ರಗಾಮಿಗಳ ಶೋಧ ಕಾರ್ಯ ಮುಂದುವರೆಸಿದೆ

■ ಸಿಎಂ ಬಗ್ಗೆ ಆಗಲಿ, ಡಿಸಿಎಂ ಬಗ್ಗೆ ಆಗಲಿ ನಾನು ಕಮೆಂಟ್ ಮಾಡಲು ಹೋಗುವುದಿಲ್ಲ

**ಪ್ರಧಾನಿಯವರಿಗೆ ಪತ್ರ ಬರೆಯುತ್ತೇನೆ:** ಭಾರತದ ಜೊತೆ ಅನೇಕ ದೇಶಗಳು ಬೆಂಬಲಕ್ಕೆ ನಿಂತಿವೆ. ಸರ್ಕಾರ ಕೂಡ ಉಗ್ರಗಾಮಿಗಳ ಶೋಧ ಕಾರ್ಯ ಮುಂದುವರೆಸಿದೆ. ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ. ಪಹಲ್ಗಾಮ್ ಘಟನೆ ಅತ್ಯಂತ ಹೀನವಾದ ಕೃತ್ಯ. ನಾನು ಆ ಘಟನೆ ನಡೆದ ತಕ್ಷಣ ನನ್ನ ಅಭಿಪ್ರಾಯ ಹೇಳಿದ್ದೇನೆ. ನನಗೆ ಬುದ್ಧಿಯ ಕೊರತೆ ಇಲ್ಲ, ಆದರೆ ಆರೋಗ್ಯದ ಸಮಸ್ಯೆ ಇದೆ. ಇಂತಹ ಘಟನೆಗಳು ನಡೆದಾಗ ಪ್ರಧಾನಿಗಳಿಗೆ ಪತ್ರ ಬರೆಯುತ್ತೇನೆ ಎಂದು ಹೆಚ್ ಡಿ ದೇವೇಗೌಡ ಮೈಸೂರಿನಲ್ಲಿ ಹೇಳಿದ್ದಾರೆ.

**ರಾಜ್ಯ ಪ್ರವಾಸ:** ಕುಮಾರಣ್ಣನ ನಾಯಕತ್ವಕ್ಕೆ ಬಲ ತುಂಬಬೇಕಿದೆ. ಭಗವಂತ ಎಷ್ಟು ದಿನ ಆಯಸ್ಸು ಕೊಡ್ತಾನೋ ಗೊತ್ತಿಲ್ಲ, ಮುಂದಿನ ದಿನಗಳಲ್ಲಿ ನಾನು ರಾಜ್ಯ ಪ್ರವಾಸ ಮಾಡುತ್ತೇನೆ. ಕೆಲಸ ಮಾಡಿದ್ದೇನೆ, ಹೀಗಾಗಿ ಪ್ರವಾಸ ಮಾಡುತ್ತೇನೆ. ನಮ್ಮ ಪಕ್ಷಕ್ಕೆ ಅವರು ನಾಯಕರು ಅವರಿಗೆ ಶಕ್ತಿ ತುಂಬುವ ಕೆಲಸ ಮಾಡಬೇಕು. ನನ್ನ ಶಕ್ತಿ ಮೀರಿ ಅವರ ಕೈ ಬಲಪಡಿಸುತ್ತೇನೆ ನಿಖಿಲ್ ಕುಮಾರಸ್ವಾಮಿ ನಾಯಕತ್ವದಲ್ಲಿ ಯುವಕರ ಗುಂಪಿನ ಜೊತೆ ಚರ್ಚೆ ಮಾಡುತ್ತೇವೆ. ನಾನು ಮತ್ತೆ ಮೈಸೂರಿಗೆ ಬರುತ್ತೇನೆ ಎಂದರು.

ಸಾ ರಾ ಮಹೇಶ್ ಮಗನ ಮದುವೆಗೆ ನಾನು ಬರುವುದಕ್ಕೆ ಆಗಿರಲಿಲ್ಲ. ಆಗ ನನ್ನ ಆರೋಗ್ಯ ಅಷ್ಟೊಂದು ಚೆನ್ನಾಗಿರಲಿಲ್ಲ.

**ಪೊಲೀಸ್ ಅಧಿಕಾರಿ ಮೇಲೆ ಕೈ ಎತ್ತಿದ ಸಿಎಂ ಸಿದ್ದರಾಮಯ್ಯ**

**ನಾನು ಈ ರಾಜ್ಯದ ರಾಜಕಾರಣಿಗಳ ಬಗ್ಗೆ ಸಿಎಂ, ಡಿಸಿಎಂ ಕಾಂಗ್ರೆಸ್ ಅಧ್ಯಕ್ಷರ ಬಗ್ಗೆ ಆಗಲಿ ಮಾತನಾಡುವುದಿಲ್ಲ. ನಮ್ಮದು ಒಂದು ಪ್ರಾದೇಶಿಕ ಪಕ್ಷ, ಬಿಜೆಪಿ ಜೊತೆ ನಮ್ಮ ಸಂಬಂಧವನ್ನು ಬೆಳೆಸಿಕೊಂಡಿದ್ದೇವೆ. ಕುಮಾರಸ್ವಾಮಿಗೂ ಆರೋಗ್ಯ ಸರಿ ಇರಲಿಲ್ಲ. ಈಗ ಸರಿ ಆಗಿದೆ ಮಂಗಳವಾರ ಬೆಳಗಿನ ಉಪಹಾರ ನನ್ನ ಜೊತೆಗೆ ಸೇವಿಸಿದ್ದಾರೆ. ಪಕ್ಷದ ಸಂಘಟನೆ ವಿಚಾರವಾಗಿಯೂ ಮಾತನಾಡಿದ್ದಾರೆ. ರಾಜ್ಯದ ಆಡಳಿತದ ಬಗ್ಗೆ ಪ್ರತಿನಿತ್ಯ ಪತ್ರಿಕೆ ಓದಿ ತಿಳಿದುಕೊಂಡಿದ್ದೇನೆ ಅಸತ್ಯ ಹೇಳಲಿಕ್ಕೆ ಹೋಗುವುದಿಲ್ಲ ಪ್ರತಿಕ್ರಿಯೆಯನ್ನು ನೀಡುವುದಿಲ್ಲ ಎಂದರು.**

ಮದುವೆಗೆ ಬರುವ ಶಕ್ತಿ ಇರಲಿಲ್ಲ, ಮುಂದೆ ಒಂದು ದಿನ ಬಂದು ಆಶೀರ್ವಾದ ಮಾಡುತ್ತೇನೆ ಎಂದು ಹೇಳಿದ್ದೆ. ಹೀಗಾಗಿ ಇವತ್ತು ಆ ಸಮಯ ಕೂಡಿ ಬಂತು. ಪ್ರತಿ ಮಂಗಳವಾರ ನಾನು ವಿಷ್ಣುವಿನ ದೇವಸ್ಥಾನದಲ್ಲಿ ಪೂಜೆ ಮಾಡಿಸ್ತೀನಿ. ನನ್ನ ಆರೋಗ್ಯಕ್ಕೆ ಆ ದೇವಸ್ಥಾನದಿಂದ ಪ್ರಸಾದ ಬರುತ್ತದೆ. ಅಲ್ಲಿಂದ ನೇರವಾಗಿ ಬಂದು ಮಹೇಶ್ ಮಗ ಸೊಸೆಗೆ ಆಶೀರ್ವಾದ ಮಾಡಿದ್ದೇನೆ ಎಂದರು.

## ಮಿನಿ ನ್ಯೂಸ್

### ಮಹಿಳೆಯ ಸರ ಕದ್ದಿದ್ದ ಆರೋಪಿ ಬಂಧನ

• ಉದಯವಾಹಿನಿ, ಗುಡಿಬಂಡೆ

ತಾಲ್ಲೂಕಿನ ಹಂಪಸಂದ್ರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಓಬನ್ನಗಾರಹಳ್ಳಿ ಗ್ರಾಮದಲ್ಲಿ ಒಂದು ವರ್ಷದ ಹಿಂದೆ ನಡೆದಿದ್ದ ಸರಗಳ್ಳತನ ಪ್ರಕರಣದಲ್ಲಿ ಆರೋಪಿಯನ್ನು ಗುಡಿಬಂಡೆ ಪೊಲೀಸರು ಬಂಧಿಸಿದ್ದಾರೆ. ಮಹಾರಾಷ್ಟ್ರ ಮೂಲದ ಪುಣೆಯ ಶಿವಾಜಿನಗರ ನಿವಾಸಿ ಕನ್ನಡಕ ವ್ಯಾಪಾರಿ ಸಾಧಿಕ್ ರಫೀಕ್ ಖಾನ್ (40) ಬಂಧಿತ ಆರೋಪಿ. ಬಂಧಿತನಿಂದ1.85 ಲಕ್ಷ ಬೆಲೆ ಬಾಳುವ ಮಾಂಗಲ್ಯ ಸರವನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಗುಡಿಬಂಡೆ ತಾಲ್ಲೂಕು ಓಬನ್ನಗಾರಹಳ್ಳಿ ಗ್ರಾಮದ ಚೌಡಮ್ಮ ಎಂಬುವವರು 2024ರ ಜನವರಿಯಲ್ಲಿ ಬಾಗೇಪಲ್ಲಿ-ಗುಡಿಬಂಡೆ ರಸ್ತೆಯ ತಮ್ಮ ಜಮೀನಿನಲ್ಲಿ ಕುರಿಗಳಿಗೆ ಹುಲ್ಲು ಕಟಾವು ಮಾಡುತ್ತಿದ್ದಾಗ ಹಂಪಸಂದ್ರ ಕಡೆಯಿಂದ ದ್ವಿಚಕ್ರ ವಾಹನದಲ್ಲಿ ಇಬ್ಬರು ಬಂದು ಚೌಡಮ್ಮನ ಅವರ 33 ಗ್ರಾಂ ಮಾಂಗಲ್ಯ ಕದ್ದು ಪರಾರಿಯಾಗಿದ್ದರು. ಈ ಬಗ್ಗೆ ಗುಡಿಬಂಡೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಚಿಕ್ಕಬಳ್ಳಾಪುರ ಎಸ್.ಪಿ ಕುಶಾಲ್ ಚೌಕ್ಸೆ, ಡಿವೈಎಸ್ಪಿ ಶಿವಕುಮಾರ್, ಗುಡಿಬಂಡೆ ಸರ್ಕಲ್ ಇನ್ಸ್ಪೆಕ್ಟರ್ ನಯಾಜ್ ಬೇಗ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿದೆ.

### ಅಂಬ್ಲಿಕಲ್ ಸೊಸೈಟಿ ಚುನಾವಣೆ ಅಕ್ರಮ: ಶಾಸಕ ಆರೋಪ

• ಉದಯವಾಹಿನಿ, ಕೋಲಾರ

ಮುಳಬಾಗಿಲು ತಾಲ್ಲೂಕಿನ ಅಂಬ್ಲಿಕಲ್ ಗ್ರಾಮದ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ನಿಯಮ ಉಲ್ಲಂಘಿಸಿ ಚುನಾವಣೆ ಪ್ರಕ್ರಿಯೆ ಆರಂಭಿಸಿರುವ ಅಧಿಕಾರಿ ವಿರುದ್ಧ ಕ್ರಮ ಜರುಗಿಸಬೇಕು ಎಂದು ಜಿಲ್ಲಾ ಸಹಕಾರ ಇಲಾಖೆ ಅಧಿಕಾರಿಗಳನ್ನು ಮುಳಬಾಗಿಲು ಕ್ಷೇತ್ರದ ಜೆಡಿಎಸ್ ಶಾಸಕ ಸಮೃದ್ಧಿ ಮಂಜುನಾಥ ಮತ್ತು ಬೆಂಬಲಿಗರು ಒತ್ತಾಯಿಸಿದರು. ಇಲಾಖೆಯ ಉಪ ನಿಬಂಧಕರ ಕಚೇರಿಗೆ ಈ ವಿಚಾರವಾಗಿ ಘೇರಾವ್ ಹಾಕಿದ ಘಟನೆಯೂ ನಡೆಯಿತು. ಅಂಬ್ಲಿಕಲ್ ಗ್ರಾಮದ ಸಹಕಾರ ಸಂಘಕ್ಕೆ ಅಕ್ರಮವಾಗಿ ಚುನಾವಣೆ ಪ್ರಕ್ರಿಯೆ ಆರಂಭಿಸಲಾಗಿದೆ. ಕಾಂಗ್ರೆಸ್ ನಾಯಕರ ಆಣತಿಯಂತೆ ಸಹಕಾರ ಇಲಾಖೆಯ ಅಧಿಕಾರಿಗಳು ನಿಯಮಬಾಹಿರವಾಗಿ ಕ್ರಮ ಜರುಗಿಸಿದ್ದಾರೆ.

ಚುನಾವಣಾ ಸೂಚನಾ ಪತ್ರ ತಲುಪುವುದಕ್ಕೆ ಮುನ್ನವೇ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. ಜೆಡಿಎಸ್ ಪ್ರಾಬಲ್ಯ ಇರುವ ಬಗ್ಗೆ ಮಾಹಿತಿ ಇದ್ದ ಕಾರಣ ಕಾಂಗ್ರೆಸ್ ಮುಖಂಡರು ಈ ಕೆಲಸವನ್ನು ಅಧಿಕಾರಿಗಳ ಮೂಲಕ ಮಾಡಿಸಿದ್ದಾರೆ. ತಕ್ಷಣವೇ ಚುನಾವಣಾ ಪ್ರಕ್ರಿಯೆ ರದ್ದುಪಡಿಸಿ, ತಪ್ಪಿತಸ್ಥ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು ಎಂದು ಶಾಸಕರು ಒತ್ತಾಯಿಸಿದರು.

ಈ ಸಹಕಾರ ಸಂಘದಲ್ಲಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳ 1960ರ ನಿಯಮ 13 ಡಿ ರೀತ್ಯಾ ಮತದಾರರ ಪಟ್ಟಿ ತಯಾರಿಸುವ ಮುನ್ನ ಸದಸ್ಯರಿಗೆ ಅವಕಾಶ ನೀಡದೇ ಚುನಾವಣಾ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ದೂರಿದರು. ಮನವಿ ಪತ್ರ ಸ್ವೀಕರಿಸಿದ ಇಲಾಖೆಯ ಅಧಿಕಾರಿ ಕಿಶೋರ್ ಜೋಷಿ ಕ್ರಮ ಜರುಗಿಸುವ ಭರವಸೆ ನೀಡಿದರು. ಪಾಕಿಸ್ತಾನದಲ್ಲಿ ಡಾಕ್ಟರೇಟ್ ಪದವಿ ಕೊಟ್ಟರೆ ಅದು ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾತ್ರ ಕೊಡುತ್ತಾರೆ. ದಾಳಿಯ ಘಟನೆಗಳು ಮರುಕಳಿಸಬಾರದು ಎಂದರೆ ಯುದ್ಧ ನಡೆಯಲೇಬೇಕು ಪಾಕಿಸ್ತಾನಕ್ಕೆ ಬಿಸಿ ಮುಟ್ಟಿಸಬೇಕು ಎಂದು ಹೇಳಿದರು.

### ಶ್ರವಣದೋಷವುಳ್ಳ ಮಕ್ಕಳ ಶಾಲೆ ಉಚಿತ ಪ್ರವೇಶ

• ಉದಯವಾಹಿನಿ, ಮೈಸೂರು

ಇಲ್ಲಿನ ತಿಲಕ್‌ನಗರದ ಶ್ರವಣದೋಷವುಳ್ಳ ಮಕ್ಕಳ ಸರ್ಕಾರಿ ಪಾಠಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಬಾಲಕರಿಗೆ ವಸತಿಯುತ, ಬಾಲಕಿಯರಿಗೆ ಬಾಹ್ಯ ಕಲಿಕೆಗೆ (1ರಿಂದ 10ನೇ ತರಗತಿಯವರೆಗೆ) ಕಲಿಯಲು ಅವಕಾಶವಿದೆ. ಶಾಲಾ ಶಿಕ್ಷಣ ಇಲಾಖೆಯಿಂದ ಸಾಮಾನ್ಯ ಮಕ್ಕಳಿಗೆ ನೀಡುತ್ತಿರುವ ಶಿಕ್ಷಣವನ್ನೇ ಇಲ್ಲೂ ನೀಡಲಾಗುತ್ತದೆ. ವಿಶೇಷ ಮಕ್ಕಳಿಗೆ ಭಾಷಾ ಕಲಿಕೆಯಲ್ಲಿ ವಿನಾಯಿತಿ ಇದ್ದು, ಒಟ್ಟಾರೆ ಕನ್ನಡ ಭಾಷೆಯೊಂದಿಗೆ ಗಣಿತ ವಿಜ್ಞಾನ ಹಾಗೂ ಸಮಾಜವಿಜ್ಞಾನ ವಿಷಯವನ್ನು ಕಲಿಯಬೇಕು. ಮೇ 29ರಂದು 2025-26ನೇ ಶೈಕ್ಷಣಿಕ ಸಾಲಿಗೆ 1ನೇ ತರಗತಿಗೆ 5 ವರ್ಷ 5 ತಿಂಗಳು ವಯಸ್ಸಿನಿಂದ 9 ವರ್ಷದೊಳಗಿನ ಬಾಲಕ, ಬಾಲಕಿಯರು ಹಾಗೂ ಅಂಗವಿಕಲತೆ ಕಾರಣದಿಂದ ಇದುವರೆಗೂ ಶಾಲೆಗೆ ದಾಖಲಾಗದವರಿಗೆ ಪ್ರವೇಶ ನೀಡಲಾಗುವುದು.

ಇತರ ಶಿಕ್ಷಣ ಸಂಸ್ಥೆಗಳಲ್ಲಿರುವ ಬಾಲಕರು ಬಯಸಿದರೆ ದಾಖಲಿಸಿಕೊಳ್ಳಲಾಗುವುದು. ಬಾಲಕರಿಗೆ ಉಚಿತ ಊಟ, ವಸತಿ, ಹಾಸಿಗೆ, ಹೊದಿಕೆ, ಪಠ್ಯ ಪುಸ್ತಕಗಳು, ವೈದ್ಯಕೀಯ ಸೇವೆ ಒದಗಿಸಲಾಗುವುದು. ಸ್ಮಾರ್ಟ್ ಕ್ಲಾಸ್ ಸೌಲಭ್ಯ ಸೇರಿದಂತೆ ಎಲ್ಲವೂ ಉಚಿತ. ಪೋಷಕರು ಅರ್ಜಿಯನ್ನು ಶಾಲೆಯಲ್ಲಿ ಉಚಿತವಾಗಿ ಪಡೆದು ಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ. 0821-2494104/.. 94490 10499 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇಗೆ ಹೊಸ ಎಂಟ್ರಿ-ಎಕ್ಸಿಟ್

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇಗೆ ಹೊಸ ಎಂಟ್ರಿ-ಎಕ್ಸಿಟ್ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿದ್ದು, ರಾಮನಗರ-ಚನ್ನಪಟ್ಟಣ ನಡುವಿನ ಕಣ್ವ ಡ್ಯಾಂ ಜಂಕ್ಷನ್‌ನಲ್ಲಿ ಎಂಟ್ರಿ-ಎಕ್ಸಿಟ್ ನಿರ್ಮಾಣಕ್ಕೆ ಪ್ಲ್ಯಾನ್ ಮಾಡಲಾಗಿದೆ. ಈ ಹಿನ್ನೆಲೆ ಮಂಗಳವಾರ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಮಂಜುನಾಥ್, ಶಾಸಕ ಸಿ.ಪಿ.ಯೋಗೇಶ್ವರ್ ಸ್ಥಳ ಪರಿಶೀಲನೆ ನಡೆಸಿದರು.

ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಜೊತೆ ಸ್ಥಳ ವೀಕ್ಷಣೆ ಮಾಡಿ ಹೊಸ ಎಂಟ್ರಿ-ಎಕ್ಸಿಟ್ ನಿಂದಾಗುವ ಅನುಕೂಲಗಳ ಬಗ್ಗೆ ಚರ್ಚೆ ನಡೆಸಿದರು. ಈ ವೇಳೆ ಮಾಧ್ಯಮಗಳ ಜೊತೆ ಮಾತನಾಡಿದ ಡಾ.ಮಂಜುನಾಥ್ , ಪ್ರವಾಸಿಗರು ವಾಹನ ಸವಾರರ ಅನುಕೂಲಕ್ಕಾಗಿ ಹೊಸ ಎಂಟ್ರಿ ಹಾಗೂ ಎಕ್ಸಿಟ್‌ಗೆ ಹೆದ್ದಾರಿ ಪ್ರಾಧಿಕಾರ ಅನುಮತಿ ನೀಡಿದೆ. ಚನ್ನಪಟ್ಟಣದ ರಾಂಪುರದ ಬಳಿ ಇದಕ್ಕೆ ಜಾಗ ಗುರುತಿಸಲಾಗಿತ್ತು. ಆದರೆ ಅಲ್ಲಿ ಸೂಕ್ತ ಜಾಗ ಇಲ್ಲದ್ದಕ್ಕೆ ಕಣ್ವ ಜಂಕ್ಷನ್ ಬಳಿ ಜಾಗ ಗುರುತು ಮಾಡಲಾಗಿದೆ. ಹಾಗಾಗಿ ಸ್ಥಳೀಯ ಶಾಸಕರು ಹಾಗೂ ಎನ್‌ಹೆಚ್‌ಎಐ ಅಧಿಕಾರಿಗಳ ಜೊತೆ ಸ್ಥಳ ಪರಿಶೀಲನೆ ಮಾಡಲಾಗಿದೆ. ಕಣ್ವ ಜಂಕ್ಷನ್‌ನಲ್ಲಿ ಎಕ್ಸಿಟ್-ಎಂಟ್ರಿ ನಿರ್ಮಾಣ ಆದರೆ ಪ್ರವಾಸೋದ್ಯಮಕ್ಕೂ ಅನುಕೂಲ. ಕಣ್ವ ಡ್ಯಾಂ, ಕೆಂಗಲ್ ಆಂಜನೇಯನ ದೇವಾಲಯ, ಬೆಂ-ಮೈ ಹಳೇ ಹೆದ್ದಾರಿಗೆ ನೇರ ಸಂಪರ್ಕ ಕಲ್ಪಿಸುತ್ತದೆ. ಶೀಘ್ರದಲ್ಲೇ ಮೂರು ಕಡೆಗಳಲ್ಲಿ ಸ್ಕೈವಾಕ್ ಕಾಮಗಾರಿ ಸಂಪೂರ್ಣ ಆಗಲಿದೆ. ಚನ್ನಪಟ್ಟಣದ ಬಳಿ ಟಾಯ್ಸ್ ಪಾರ್ಕ್ ಕೂಡಾ ಬರಲಿದೆ. ಅದಕ್ಕೂ ಈಗಾಗಲೇ ಜಾಗ ಗುರುತು ಮಾಡಲಾಗಿದೆ. ಎಕ್ಸ್‌ಪ್ರೆಸ್ ಹೈವೇಯ ಎಲ್ಲಾ ಸಮಸ್ಯೆಗಳನ್ನ ಹಂತ ಹಂತವಾಗಿ ಬಗೆಹರಿಸಲಾಗುವುದು ಎಂದರು.

**ಇನ್ನೂ ಇದೇವೇಳೆ ಪಹಲ್ಗಾಮ್ ದಾಳಿಗೆ ಕೇಂದ್ರದ ಭದ್ರತಾ ವೈಫಲ್ಯ ಕಾರಣ ಎಂಬ ವಿಪಕ್ಷಗಳ ಆರೋಪ ವಿಚಾರ ಕುರಿತು ಮಾತನಾಡಿ, ಈ ಸಂದರ್ಭದಲ್ಲಿ ಘಟನೆಗೆ ಯಾವ ರೀತಿ ಪ್ರತಿಕ್ರಿಯೆ ನೀಡಬೇಕು ಎಂಬುದು ಮುಖ್ಯ. ಈ ಕ್ಷಣಕ್ಕೆ ಭಯೋತ್ಪಾದನೆ ಹಾಗೂ ಭಯೋತ್ಪಾದಕರಿಗೆ ತಕ್ಕಪಾಠ ಕಲಿಸುವ ಬಗ್ಗೆ ಯೋಚನೆ ಮಾಡಬೇಕು. ಮಿಕ್ಕಿದ್ದೆಲ್ಲ ಆಮೇಲೆ ಮಾತನಾಡಬಹುದು. ಯುದ್ಧ ಎಂಬುದು ಸೂಕ್ಷ್ಮವಾದ ವಿಚಾರ. ಅದರ ಬಗ್ಗೆ ಎಲ್ಲೆಂದರಲ್ಲಿ ಚರ್ಚೆ ಮಾಡೋದು ಸೂಕ್ತ ಅಲ್ಲ ಎಂದರು.**

## ಅತಿ ದೊಡ್ಡ ಮೊಬೈಲ್ ಕಳ್ಳತನ ಪ್ರಕರಣ ಭೇದಿಸಿದ ಪೊಲೀಸರು

• ಉದಯವಾಹಿನಿ, ಚಿಕ್ಕಬಳ್ಳಾಪುರ


ಉದಯವಾಹಿನಿ ಚಿತ್ರ

ಚಿಕ್ಕಬಳ್ಳಾಪುರ ಸಿಇಎನ್ ಪೊಲೀಸರು ಹರಿಯಾಣ ಮತ್ತು ರಾಜಸ್ಥಾನದ ಮೇವಾತ್ ಪ್ರದೇಶದ ನಿವಾಸಿಗಳಾದ ಏಳು ಜನರನ್ನು ಬಂಧಿಸುವ ಮೂಲಕ ಪ್ರಮುಖ ಮೊಬೈಲ್ ಕಳ್ಳತನ ಪ್ರಕರಣವನ್ನು ಭೇದಿಸಿದ್ದಾರೆ. ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ನೊಂದಿಗೆ ಮಾತನಾಡಿದ ಚಿಕ್ಕಬಳ್ಳಾಪುರ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ, ನವೆಂಬರ್ 22, 2024 ರಂದು ಸೇಫ್ ಸೀಡ್ ಕ್ಯಾರಿಯರ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ವ್ಯವಸ್ಥಾಪಕ ಪದ್ಮನಾಬ್ ಪೆರೇಸಂದ್ರ ಅವರು ಮೊಬೈಲ್ ಕಳ್ಳತನದ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು ಎಂದರು. ದೆಹಲಿಯ ನೋಯ್ಡಾದಿಂದ ಹೋಲ್ ಸೇಲ್ ಡೀಲರ್‌ಗಳಿಗೆ ಸಾಗಿಸಲಾಗಿದ್ದ ಸುಮಾರು ಮೂರು ಕೋಟಿ ರೂ. ಮೌಲ್ಯದ ರೆಡ್‌ಮಿ ಮೊಬೈಲ್ ಗಳ 170 ಬಾಕ್ಸ್‌ಗಳು, 163 ಬಾಕ್ಸ್‌ಗಳ ಪೊಕೊ ಮೊಬೈಲ್‌ಗಳನ್ನು ಹೊತ್ತ ಟ್ರಕ್ ವೊಂದು ರಾಷ್ಟ್ರೀಯ ಹೆದ್ದಾರಿ-44ರ ಮೂಲಕ ಬೆಂಗಳೂರಿಗೆ ಬರುತ್ತಿತ್ತು. ಇದರಲ್ಲಿದ್ದ ಎಲ್ಲಾ ಮೊಬೈಲ್‌ಗಳನ್ನು ಕಳ್ಳತನ ಮಾಡಲಾಗಿದ್ದು, ಚಿಕ್ಕಬಳ್ಳಾಪುರ ತಾಲ್ಲೂಕಿನ ಪೇರೇಸಂದ್ರ ಪೊಲೀಸ್ ಠಾಣಾ ವ್ಯಾಪ್ತಿಯ ರೆಡ್ಡಿಗೊಲ್ಲವಾರಹಳ್ಳಿಯ ಡಾಬಾ ವೊಂದರ ಬಳಿ ಖಾಲಿ ಕಂಟೇನರ್ ಪತ್ತೆಯಾಗಿದೆ ಎಂದು ತಿಳಿಸಿದ್ದಾರೆ. ಚಿಕ್ಕಬಳ್ಳಾಪುರ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ, ಡಿವೈ ಎಸ್‌ಪಿ ರವಿ ಕುಮಾರ್, ವೃತ್ತ ನಿರೀಕ್ಷಕ ಸೂರ್ಯ ಪ್ರಕಾಶ್ ಮೊಬೈಲ್ ಕಳ್ಳತನ ಜಾಲವನ್ನು ಭೇದಿಸಿದ ಪೊಲೀಸರು 1,037 ಮೊಬೈಲ್ ಗಳು ವಶಕ್ಕೆ

ಈ ಸಂಬಂಧ ಪೆರೆಸಂದ್ರದಲ್ಲಿ ಪ್ರಕರಣ ದಾಖಲಾಗಿದ್ದು, ಇನ್ಸ್‌ಪೆಕ್ಟರ್ ನಯಾಜ್ ಬೇಗ್ ನೇತೃತ್ವದ ಪೊಲೀಸ್ ತಂಡವು ಪ್ರಮುಖ ಆರೋಪಿ, ವಾಹನ ಚಾಲಕ ರಾಹುಲ್ ಹಾಗೂ ಇತರ ಆರೋಪಿಗಳಾದ ಇಮ್ರಾನ್, ಮೊಹಮ್ಮದ್ ಮುಸ್ತಫಾ, ಅನೂಪ್ ರಾಯ್, ಅಭಿಜಿತ್ ಪೌಲ್, ಸಕ್ರುಲ್ಲಾ ಹಾಗೂ ಯೂಸುಫ್ ಖಾನ್ ನನ್ನು ಬಂಧಿಸಲಾಗಿದೆ ಎಂದು ಕುಶಾಲ್ ಚೌಕ್ಸೆ ತಿಳಿಸಿದ್ದಾರೆ.

## ಸಹಕಾರಿ ಚೌಕಟ್ಟಿನಲ್ಲಿ ಕೆಲಸ ಮಾಡಿ: ಮಂಜು


• ಉದಯವಾಹಿನಿ, ಕೆ.ಆರ್.ಪೇಟೆ.

ಸಹಕಾರ ಸಂಘಗಳ ಚುನಾಯಿತ ಸದಸ್ಯರು ಸಹಕಾರ ನಿಯಮಗಳ ಬಗ್ಗೆ ಅರಿತು ಸಹಕಾರಿ ಚೌಕಟ್ಟಿನಲ್ಲಿ ಕೆಲಸ ಮಾಡಿದರೆ ಯಾರಿಗೂ ಭಯ ಪಡಬೇಕಾದ ಅಗತ್ಯವಿರುವುದಿಲ್ಲ ಎಂದು ಶಾಸಕ ಎಚ್.ಟಿ.ಮಂಜು ಹೇಳಿದರು. ಅವರು ತಾಲ್ಲೂಕಿನ ಕೂಡಲಕುಪ್ಪೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾಯಿತ ಜೆಡಿಎಸ್ ಬೆಂಬಲಿತರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿ, ನಾನು ವಿಪಕ್ಷ ಶಾಸಕನಾಗಿದ್ದರೂ ಕ್ಷೇತ್ರದ ಅಭಿವೃದ್ಧಿಗೆ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದೇನೆ ಎಂದರು. ನಾನು ತಳಮಟ್ಟದಿಂದ ರಾಜಕೀಯವಾಗಿ ಬೆಳೆದು ಬಂದವನು. ಸ್ವಗ್ರಾಮ ಹರಳಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕನಾಗಿ, ಡೇರಿ ನಿರ್ದೇಶಕ, ಜಿ.ಪಂ ಸದಸ್ಯನಾಗಿ ನಿಮ್ಮೆಲ್ಲರ ಆಶೀರ್ವಾದದಿಂದ ಇಂದು ಶಾಸಕನಾಗಿದ್ದೇನೆ ಎಂದು ತಿಳಿಸಿದರು.

ನನ್ನ ರಾಜಕೀಯ ಪ್ರವೇಶಕ್ಕೆ ಸಹಕಾರ ಸಂಘದ ಕಾರ್ಯಚಟುವಟಿಕೆಗಳೇ ಮೂಲ ತಳಪಾಯ ಚುನಾಯಿತ ಸದಸ್ಯರು ಸಹಕಾರ ತತ್ವಗಳ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು. ಸಹಕಾರಿ ನಿಯಮಗಳ ಅರಿವಿಲ್ಲದಿದ್ದರೆ ಸಂಘದ ಕಾರ್ಯದರ್ಶಿಗಳು ನಿಮ್ಮನ್ನು ನಿಯಂತ್ರಿಸುತ್ತಾರೆ. ಕಾರ್ಯದರ್ಶಿಗಳ ಕೈಗೆ ನಿಮ್ಮ ಜುಟ್ಟು ಕೊಡಬೇಡಿ ಎಂದು ಹೇಳಿದರು. ಕೆಲವರು ನಿಮ್ಮ ಸೊಸೈಟಿಯ ಹಾಲನ್ನು ಗುಣಮಟ್ಟದ ಹೆಸರಿನಲ್ಲಿ ಫೇಲ್ ಮಾಡಿಸುವುದಾಗಿ ಭಯ ಪಡಿಸುವ ಅಥವಾ ರೈತರ ಹಾಲಿನ ಪೇಮೆಂಟ್ ನಿಲ್ಲಿಸುವುದಾಗಿ ಬೆದರಿಸಬಹುದು. ರೈತರ ಪೇಮೆಂಟ್ ತಡೆಯುವ ಶಕ್ತಿ ಯಾರಿಗೂ ಇಲ್ಲ. ಹಾಲಿನ ಗುಣಮಟ್ಟದಲ್ಲಿ ವ್ಯತ್ಯಾಸವಾಗದಂತೆ ನಿರ್ದೇಶಕರು ಎಚ್ಚರಿಕೆ ವಹಿಸಬೇಕು. ಹಾಲು ಉತ್ಪಾದಕರು ಉಳಿದರೆ ಮಾತ್ರ ಮನ್ಮುಲ್ ಉಳಿಯಲು ಸಾಧ್ಯ ಎಂದರು.

## ಕಸಾಪ ಉಳಿಸಿ ಆಂದೋಲನ: ಮಂಡ್ಯದಲ್ಲಿ ಸಮಾವೇಶ ಮೇ 17ರಂದು

• ಉದಯವಾಹಿನಿ, ಮಂಡ್ಯ



ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರನ್ನು ಅಮಾನತು ಮಾಡಿ, ಕನ್ನಡ ಸಾಹಿತ್ಯ ಪರಿಷತ್ತು ಉಳಿಸಿ ಆಂದೋಲನದ ಅಂಗವಾಗಿ ಸಮಾನ ಮನಸ್ಕರ ಒಕ್ಕೂಟದ ತೀರ್ಮಾನದಂತೆ ಮೊದಲ ಹಂತದಲ್ಲಿ ಮಂಡ್ಯದಲ್ಲಿ ಮೇ 17ರಂದು ಸಮಾವೇಶ ನಡೆಸಲು ತೀರ್ಮಾನಿಸಲಾಗಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶಗೌಡ ತಿಳಿಸಿದರು. ಸಮಾವೇಶದ ಸಂಬಂಧ ಮೇ 4ರಂದು ಸಂಜೆ 4 ಗಂಟೆಗೆ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಸಭಾಂಗಣದಲ್ಲಿ ಮಂಡ್ಯ ಜಿಲ್ಲೆಯ ಹಿರಿಯ ಸಾಹಿತಿಗಳು, ಕನ್ನಡಪರ, ರೈತಪರ ಹೋರಾಟಗಾರರು, ಎಲ್ಲಾ ಪ್ರಗತಿಪರ ಸಂಘಟನೆಯ ಮುಖಂಡರ ಸಭೆಯನ್ನು ಕರೆಯಲಾಗಿದೆ ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಮಾವೇಶದಲ್ಲಿ ಮುಖ್ಯಮಂತ್ರಿ ಚಂದ್ರು, ಮುದ್ದುಕೃಷ್ಣ, ಹಂಪಾ ನಾಗರಾಜಯ್ಯ, ಪ್ರೊ.ಎಸ್.ಜಿ. ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ಜನವಾದಿ ಸಂಘಟನೆಯ ವಿಮಲಾ, ಮಾವಳ್ಳಿ ಶಂಕರ್, ಸಾಮಾಜಿಕ ಚಿಂತಕರಾದ ಜಿ.ಕಪ್ಪಣ್ಣ, ಡಾ.ವಸುಂಧರಾ ಭೂಪತಿ, ಡಾ.ಕೆ.ಮರುಳಸಿದ್ದಪ್ಪ, ಮೈಸೂರು, ಹಾಸನ, ರಾಮನಗರ, ಚಾಮರಾಜನಗರ, ಕೊಡಗು ಜಿಲ್ಲೆಯ ಹಿರಿಯ ಸಾಹಿತಿಗಳು, ಕನ್ನಡಪರ ಹೋರಾಟಗಾರರು, ರೈತ ಹೋರಾಟಗಾರರು, ಪ್ರಗತಿಪರ ಸಂಘಟನೆಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತನ್ನು ಸರ್ವಾಧಿಕಾರದತ್ತ ಕೊಂಡೊಯ್ಯುತ್ತಿರುವ, ಆರ್ಥಿಕ ಅಶಿಸ್ತಿನ ಮೂಲಕ ದಿವಾಳಿ ಮಾಡುತ್ತಿರುವ, ಅಧಿಕಾರ ಕೇಂದ್ರೀಕರಣಕ್ಕಾಗಿ ಮನಸೋ ಇಚ್ಛೆ ಬೈಲಾ ತಿದ್ದುಪಡಿ ಮಾಡುತ್ತಿರುವ, ಪ್ರಶ್ನಿಸಿದವರಿಗೆ ನೋಟೀಸ್ ಮೊಕದ್ದಮೆಗಳಿಂದ ಕಿರುಕುಳ ನೀಡುತ್ತಿರುವ, ಸಾಹಿತ್ಯ ಚಟುವಟಿಕೆಗಳಿಂದ ಪರಿಷತ್ತನ್ನು ದೂರವಾಗಿಸುತ್ತಿರುವ ಅಧ್ಯಕ್ಷ ಮಹೇಶ್ ಜೋಶಿ ಅವರನ್ನು ಅಮಾನತ್ತಿನಲ್ಲಿಡಬೇಕು. ಕಸಾಪಕ್ಕೆ ಕೂಡಲೇ ಆಡಳಿತಾಧಿಕಾರಿಯನ್ನು ನೇಮಿಸಬೇಕು' ಎಂದು ಒತ್ತಾಯಿಸಿದರು. ಅಧ್ಯಕ್ಷರಿಗೆ ಹಿಂದಿನ ಸರ್ಕಾರ ಕೊಟ್ಟಿರುವ ಸಂಪುಟ ದರ್ಜೆ ಸ್ಥಾನಮಾನ ತಕ್ಷಣ ಸರ್ಕಾರ ಹಿಂಪಡೆಯಬೇಕು, 2022 ಮತ್ತು 2023ನೇ ಸಾಲಿನಲ್ಲಿ ತಿದ್ದುಪಡಿಯಾಗಿರುವ ಬೈಲಾವನ್ನು ರದ್ದುಪಡಿಸಬೇಕು. ಸಕಾರಣವಿಲ್ಲದೆ ಕೆಲವು ಆಜೀವ ಸದಸ್ಯರ ಸದಸ್ಯತ್ವವನ್ನು ಅಮಾನತ್ತಿನಲ್ಲಿಟ್ಟಿರುವ ಆದೇಶವನ್ನು ಕೂಡಲೇ ಹಿಂಪಡೆಯಬೇಕು' ಎಂದು ಆಗ್ರಹಿಸಿದರು.

## ಕೊಡಗು ವಿವಿ ಉಳಿಸಲು ಆಗ್ರಹ

• ಉದಯವಾಹಿನಿ, ಸೋಮವಾರಪೇಟೆ


ಉದಯವಾಹಿನಿ ಚಿತ್ರ

ಜಿಲ್ಲೆಯಲ್ಲಿ ಪ್ರಾರಂಭಿಸಿರುವ ಕೊಡಗು ವಿಶ್ವವಿದ್ಯಾಲಯವನ್ನು ರದ್ದುಪಡಿಸುವುದು ಅಥವಾ ವಿಲೀನಗೊಳಿಸುವುದಕ್ಕೆ ಮುಂದಾದರೆ ಸರ್ಕಾರವು ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ರಾಜ್ಯ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಕೆ.ಎನ್.ದೀಪಕ್ ಎಚ್ಚರಿಸಿದರು. ಕರ್ನಾಟಕ ರಕ್ಷಣಾ ವೇದಿಕೆಯ ಕೊಡಗು ಜಿಲ್ಲಾ ಘಟಕದಿಂದ ಜೇಸಿ ವೇದಿಕೆಯಲ್ಲಿ ಆಯೋಜಿಸಿದ್ದ ಕೊಡಗು ವಿಶ್ವವಿದ್ಯಾಲಯವನ್ನು ಉಳಿಸಬೇಕೆಂಬ ಹಕ್ಕೊತ್ತಾಯ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ವಿಶ್ವವಿದ್ಯಾಲಯವನ್ನು ವಿಲೀನ ಮಾಡುವುದಿಲ್ಲ ಎಂದು ಇದೂವರೆಗೆ ಸರ್ಕಾರ ಅಧಿಕೃತ ಹೇಳಿಕೆ ನೀಡಿಲ್ಲ. ಇದರಿಂದ ವಿದ್ಯಾರ್ಥಿಗಳು ಗೊಂದಲದಲ್ಲಿದ್ದು, ವಿಶ್ವವಿದ್ಯಾಲಯಕ್ಕೆ ಸೇರಲು ಭಯಪಡುತ್ತಿದ್ದಾರೆ. ಜನಪ್ರತಿನಿಧಿಗಳು, ಅಧಿಕಾರಿಗಳು ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ. ಜಿಲ್ಲೆಯ ಶಾಸಕರುಗಳು ಕೂಡ ಇದರ ಕುರಿತು ಸ್ಪಷ್ಟ ನಿಲುವು ವ್ಯಕ್ತಪಡಿಸುತ್ತಿಲ್ಲ ಎಂದು ದೂರಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ತಾಲ್ಲೂಕು ಅಭಿವೃದ್ಧಿ ಹೋರಾಟ ಸಮಿತಿಯ ಅಧ್ಯಕ್ಷ ಅರುಣ್ ಕೊತ್ನಳ್ಳಿ ಮಾತನಾಡಿ, ಜಿಲ್ಲೆಯ ಇಬ್ಬರು ಶಾಸಕರು ವಿಶ್ವವಿದ್ಯಾಲಯವನ್ನು ಉಳಿಸಲು ಹೆಚ್ಚಿನ ಪ್ರಯತ್ನ ಮಾಡಬೇಕು. ರೈತರು, ಬಡವರು, ಕೂಲಿ ಕಾರ್ಮಿಕರು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ-ಪಂಗಡದವರು ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿದ್ದಾರೆ. ಕೊಡಗಿನಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿದ್ದು, ಆರ್ಥಿಕ ಮುಗ್ಗಟ್ಟಿನಿಂದ ನಗರ ಪ್ರದೇಶಗಳಿಗೆ ಹೋಗಿ ಸ್ನಾತಕೋತ್ತರ ಪದವಿ ಪಡೆಯಲು ಸಾಧ್ಯವಾಗುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿನ ವಿಶ್ವವಿದ್ಯಾಲಯ ಮುಂದುವರಿದರೆ, ವಿದ್ಯಾರ್ಥಿಗಳು ಉತ್ತಮ ಭವಿಷ್ಯ ಕಟ್ಟಿಕೊಳ್ಳಲು ಅವಕಾಶವಾಗುವುದು ಎಂದರು.

**ಮನವಿ ಸಲ್ಲಿಕೆ:** ಸಭೆಗೂ ಮುನ್ನ ಪ್ರತಿಭಟನಾಕಾರರು ಪುಟ್ಟಪ್ಪ ವೃತ್ತದಲ್ಲಿ ಮಾನವ ಸರಪಳಿ ರಚಿಸಿ, ನಂತರ ಮೆರವಣಿಗೆಯಲ್ಲಿ ಸಾಗಿದರು. ತಹಶೀಲ್ದಾರ್ ಕೃಷ್ಣಮೂರ್ತಿ ಅವರ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಲಾಯಿತು.

ಪ್ರತಿಭಟನಾ ಸಭೆಯಲ್ಲಿ ಕಾರ್ಯದರ್ಶಿ ಮಂಜುನಾಥ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಸಂಧ್ಯಾ ಗಣೇಶ್, ನಗರಾಧ್ಯಕ್ಷ ಮಂಜುನಾಥ್, ಸೋಮವಾರಪೇಟೆ, ಕುಶಾಲನಗರ ತಾಲ್ಲೂಕು ಅಧ್ಯಕ್ಷರು, ತಾಲ್ಲೂಕು, ಹೋಬಳಿ ಘಟಕದ ಪದಾಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಇದ್ದರು.

## ಮಾದಕ ವ್ಯಸನ ಮುಕ್ತ ಸಮಾಜ ಜಾಗೃತಿ

• ಉದಯವಾಹಿನಿ, ಕನಕಪುರ


ಉದಯವಾಹಿನಿ ಚಿತ್ರ

ಇಲ್ಲಿನ ರೂರಲ್ ಪದವಿ ಪೂರ್ವ ಕಾಲೇಜಿನಲ್ಲಿ ಗ್ರಾಮಾಂತರ ಪೊಲೀಸ್ ಠಾಣಾ ವತಿಯಿಂದ ಮಾದಕ ವ್ಯಸನ ಮುಕ್ತ ಸಮಾಜ ಮತ್ತು ಕಾನೂನು ಅರಿವು ಜಾಗೃತಿ ಕಾರ್ಯಕ್ರಮ ನಡೆಯಿತು. ಈ ವೇಳೆ ಗ್ರಾಮಾಂತರ ಠಾಣೆ ಪಿಎಸ್‌ಐ ಆಕಾಶ್ ಮಾತನಾಡಿ, ಕ್ಷಣಿಕ ಸುಖಕ್ಕಾಗಿ ಮಾದಕ ವಸ್ತುಗಳ ದಾಸರಾಗಿ ಸುಂದರವಾದ ಆರೋಗ್ಯವನ್ನು ಜೀವನ ನಾಶ ಮಾಡಿಕೊಳ್ಳಬೇಡಿ ಎಂದು ತಿಳಿಸಿದರು. ಇತ್ತೀಚಿನ ದಿನಗಳಲ್ಲಿ ಯುವ ಸಮೂಹ ಮಾದಕ ವ್ಯಸನಕ್ಕೆ ಬಲಿಯಾಗುತ್ತಿದ್ದಾರೆ. ನಶೆ ಇರುವ ಯಾವುದೇ ಮಾದಕ ವಸ್ತುಗಳನ್ನು ಸೇವಿಸುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಮದ್ಯ, ತಂಬಾಕು, ಗಾಂಜಾ, ಸಿಗರೇಟ್, ಬೀಡಿ ಮುಂತಾದ ಮಾದಕ ವಸ್ತುಗಳನ್ನು ಸೇವಿಸುವುದರಿಂದ ಮೆದುಳಿನ ಮೇಲೆ ದೀರ್ಘಕಾಲದ ಪರಿಣಾಮ ಬೀರುತ್ತವೆ ಎಂದರು. ಮಾದಕ ವ್ಯಸನದ ದುಷ್ಪರಿಣಾಮಗಳ ಅಭ್ಯಾಸದಿಂದ ದೂರವಿದ್ದು, ವಿದ್ಯಾರ್ಥಿಗಳು ಉತ್ತಮ ಭವಿಷ್ಯ ರೂಪಿಸಿ ಕೊಳ್ಳಬೇಕೆಂದು ಸಲಹೆ ನೀಡಿದರು. ಗ್ರಾಮಾಂತರ ಠಾಣೆ ಸಿಬ್ಬಂದಿ ಕೊಟ್ರೇಶ್ ಐನಳ್ಳಿ ಮಾತನಾಡಿ, ಗಂಡು-ಹೆಣ್ಣು, ಬಡವ ಶ್ರೀಮಂತ ಎನ್ನುವ ಭೇದವಿಲ್ಲದೆ ಯಾರು ಬೇಕಾದರೂ ಮಾದಕ ವ್ಯಸನಕ್ಕೆ ದಾಸರಾಗುತ್ತಾರೆ ಎಂದು ತಿಳಿಸಿದರು. ಮಾದಕ ವ್ಯಸನ ಕುಟುಂಬವನ್ನು ನಾಶ ಮಾಡುತ್ತದೆ. ಹಾಗಾಗಿ ವಿದ್ಯಾರ್ಥಿ ಜೀವನ ತುಂಬಾ ಅಮೂಲ್ಯವಾದದ್ದು, ಅದನ್ನು ದುಷ್ಚಟಗಳಿಗೆ ಬಲಿಯಾಗದಂತೆ ಪ್ರತಿಜ್ಞಾವಿಧಿ ಭೋದಿಸಿದರು. ಜೊತೆಗೆ ಸೈಬರ್ ಕ್ರೈಂ, ಟ್ರಾಫಿಕ್ ರೂಲ್ಸ್ ಹಾಗೂ ಅಪರಾಧ ಚಟುವಟಿಕೆಗಳಿಂದ ದೂರವಿರುವಂತೆ ಜಾಗೃತಿ ಮೂಡಿಸಿದರು.

## ತುಮಕೂರು, ಚಿತ್ರದುರ್ಗ, ದಾವಣಗೆರೆಗೆ ನೀರುಣಿಸುವ ಭದ್ರಾ, ಯೋಜನೆ ಇನ್ನೂ ಅಭದ್ರ

## ಆಮೆಗತಿಯಲ್ಲಿ ಕಾಮಗಾರಿ, 2028 ಕ್ಕೆ ಪೂರ್ಣವಾಗೋದೆ ಅನುಮಾನ

• ಉದಯವಾಹಿನಿ, ತುಮಕೂರು


ಉದಯವಾಹಿನಿ ಚಿತ್ರ

ಐದು ದಶಕದ ಕನಸು ಇನ್ನು ಮೂರು ವರ್ಷಕ್ಕೆ ನನಸಾಗುವುದು ಕೂಡ ಅನುಮಾನ ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿ ನಿರೀಕ್ಷಿತ ಮಟ್ಟದಲ್ಲಿ ವೇಗ ಪಡೆದಿಲ್ಲ. ಜತೆಗೆ ಕೇಂದ್ರ ಸರಕಾರ ಘೋಷಿಸಿದ್ದ 5,300 ಕೋಟಿ ರೂ. ಅನುದಾನ ನೀಡಿಲ್ಲ. ಆಮೆಗತಿ ಕಾಮಗಾರಿ, ಕೇಂದ್ರದ ಅನುದಾನ ವಿಳಂಬ, ಭೂಸ್ವಾಧೀನ ಪ್ರಕ್ರಿಯೆ ಅಡೆತಡೆ ಸೇರಿದಂತೆ ನಾನಾ ಕಾರಣಗಳಿಂದ ಭದ್ರಾ ಇನ್ನೂ ಅಭದ್ರವಾಗಿದೆ. 2028ರ ಮಾರ್ಚ್ ಅಂತ್ಯಕ್ಕೆ ಭದ್ರಾ ಮೇಲ್ದಂಡೆ ಯೋಜನೆ ಪೂರ್ಣ ಗೊಳ್ಳಲಿದೆ ಎಂದು ಸ್ವತಃ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಕೇಂದ್ರದ ಅನುದಾನ ಬರದೇ ಕಾಮಗಾರಿ ವೇಗ ಕಷ್ಟ. ಜತೆಗೆ ರಾಜ್ಯ ಸರಕಾರ ಅನುದಾನ ಹಾಕಿಕೊಂಡು ಅಷ್ಟಷ್ಟೇ ಕಾಮಗಾರಿ ಮುಗಿಸಿದರೂ ಬಾಕಿ ಕಾಮಗಾರಿಗೆ ಕೇಂದ್ರ ತನ್ನ ಪಾಲು ಕೊಡುತ್ತದೆ ಅಷ್ಟೇ. ಹೀಗೆ ತಡವಾದಷ್ಟು ಕೇಂದ್ರದ ಅನುದಾನವೂ ಕಡಿಮೆಯಾಗುವ ಸಾಧ್ಯತೆಯಿದೆ. 16,125.48 ಕೋಟಿ ರೂ. ಯೋಜನಾ ವೆಚ್ಚದ ಯೋಜನೆ ಇದಾಗಿದ್ದು, ಈಗಾಗಲೇ 10,121.75 ಕೋಟಿ ರೂ. ಬಳಕೆಯಾಗಿದೆ. ಯೋಜನೆ ವಿಳಂಬವಾದಷ್ಟೂ ವೆಚ್ಚ ಕೂಡ ಹೆಚ್ಚಾಗುತ್ತದೆ. ಹೆಚ್ಚುವರಿ ಅನುದಾನದ ಅವಶ್ಯಕತೆಯೂ ತಲೆದೋರುತ್ತದೆ. ಇದೇ ಆಮೆಗತಿ ನಡೆ ಹಾಗೂ ಅನುದಾನ ನೀಡಿಕೆಗೆ ಕೇಂದ್ರ, ರಾಜ್ಯ ಸರಕಾರದ ಮೀನಮೇಷ ಮುಂದುವರಿದರೆ ಇನ್ನೂ ಮೂರು ವರ್ಷವಲ್ಲ 10 ವರ್ಷವಾದರೂ ಯೋಜನೆ ಪೂರ್ಣಗೊಳ್ಳುವುದು ಅನುಮಾನ. ತುಮಕೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲೆಯ ಕೆಲವು ತಾಲ್ಲೂಕುಗಳಿಗೆ ಭದ್ರಾ ಜಲಾಶಯದಿಂದ ನೀರು ಹರಿಸುವ ಯೋಜನೆ ಇದಾಗಿದ್ದು, ಭದ್ರೆ ಜಿಲ್ಲೆಗೆ ಹರಿಯುವ ಕನಸು ಐದು ದಶಕಗಳದ್ದು. 2022-23ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರಕಾರ 5,300 ಕೋಟಿ ರೂ. ಘೋಷಣೆ ಮಾಡಿದಾಗ ಯೋಜನೆಗೆ ವೇಗ ಸಿಗುವ ಭರವಸೆ ಸಿಕ್ಕಿತ್ತು. ಆದರೆ ಅದು ಆ ಕ್ಷಣಕ್ಕಷ್ಟೇ ಸೀಮಿತವಾಗಿದ್ದು, ಇನ್ನೂ ಕೇಂದ್ರದ ಅನುದಾನ ಬಂದಿಲ್ಲ. ಯೋಜನೆಯೂ ನಿರೀಕ್ಷಿತ ವೇಗ ಪಡೆದಿಲ್ಲ.

**ಎಷ್ಟು ಟಿಎಂಸಿ ನೀರು?**

**ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ತುಮಕೂರು ಜಿಲ್ಲೆಯ 367 ಕೆರೆಗಳಿಗೆ ಶೇ.50ರಷ್ಟು ನೀರನ್ನು ತುಂಬಿಸಲಾಗುತ್ತದೆ. ಒಟ್ಟು 5.57 ಎಕರೆ ಪ್ರದೇಶಕ್ಕೆ 29.9 ಟಿಎಂಸಿ ನೀರನ್ನು ಬಿಡುವ ಯೋಜನೆಯಾಗಿದೆ. ತುಂಗಾ ಜಲಾಶಯದಿಂದ 17.4 ಟಿಎಂಸಿ ಅಡಿ ನೀರನ್ನು ಭದ್ರಾ ಜಲಾಶಯಕ್ಕೆ ಹರಿಸಿ, ಭದ್ರಾ ಜಲಾಶಯದ 12.5 ಟಿಎಂಸಿ ನೀರನ್ನು ಸೇರಿಸಿ ಭದ್ರಾ ಮೇಲ್ದಂಡೆಗೆ ಹಂಚಿಕೆ ಮಾಡಲಾಗುತ್ತಿದೆ.**

**ಏನಿದು ಭದ್ರಾ, ಮೇಲ್ದಂಡೆ ಯೋಜನೆ?:** ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿಯಲ್ಲಿರುವ ಭದ್ರಾ ಜಲಾಶಯದಿಂದ ಚಿಕ್ಕಮಗಳೂರು ಅಲ್ಲದೆ ದಾವಣಗೆರೆ, ಚಿತ್ರದುರ್ಗ, ತುಮಕೂರಿಗೆ ನೀರು ಹರಿಸುವ ಯೋಜನೆ ಭದ್ರಾ ಮೇಲ್ದಂಡೆ ಯೋಜನೆಯಾಗಿದೆ. ಚಿತ್ರದುರ್ಗ ಶಾಖಾ ನಾಲೆ ಹಾಗೂ ತುಮಕೂರು ಶಾಖಾ ನಾಲೆ ಸೇರಿದಂತೆ ಎರಡೂ ನಾಲೆಗಳ ಮೂಲಕ ಯೋಜನೆ ನೀರು ವ್ಯಾಪ್ತಿಯ ಜಿಲ್ಲೆಗಳಿಗೆ ಹರಿಯುತ್ತದೆ.

**ಎರಡು ನಾಲೆಗಳು ಮೂಲಕ ನೀರು ಹಂಚಿಕೆ:** ತರೀಕೆರೆ ತಾಲ್ಲೂಕಿನ ಅಜ್ಜಂಪುರ ದಾಟಿದ ಬಳಿಕ ತುಮಕೂರು, ಚಿತ್ರದುರ್ಗ ನಾಲೆಗಳಾಗಿ ಕವಲೊಡೆಯುತ್ತದೆ. ಚಿತ್ರದುರ್ಗ ನಾಲೆಗೆ 11.96 ಟಿಎಂಸಿ, ತುಮಕೂರು ನಾಲೆಗೆ 9.4 ಟಿಎಂಸಿ ನೀರು ಹಂಚಿಕೆಯಾಗಿದೆ. ಭದ್ರಾ ಮೇಲ್ದಂಡೆ ಯೋಜನೆಯಿಂದ ಜಿಲ್ಲೆಯ ಮೂರು ತಾಲ್ಲೂಕುಗಳ ಕೆರೆಗಳು ತುಂಬಲಿವೆ. ತರಿಕೆರೆ, ಕಡೂರು, ಹೊಸದುರ್ಗ, ಹಿರಿಯೂರು ಭಾಗಕ್ಕೂ ನೀರುಣಿಸುತ್ತದೆ. ಚಿತ್ರದುರ್ಗ ಶಾಖಾ ನಾಲೆ ಮೂಲಕ ತುಮಕೂರು ಜಿಲ್ಲೆಪಾವಗಡ ತಾಲ್ಲೂಕಿಗೆ ನೀರು ಹರಿಸಲಾಗುತ್ತದೆ.

**ರಾಜ್ಯ ಸರಕಾರದ ಹೊಸದಿಲ್ಲಿ ವಿಶೇಷ ಪ್ರತಿನಿಧಿ. ತಾಲ್ಲೂಕಿನ 38 ಕೆರೆಗಳಿಗೆ ನೀರು ತುಂಬಿಸಲು ಭದ್ರಾ ಮೇಲ್ದಂಡೆ ಯೋಜನೆ ವರದಾನವಾಗಿದೆ. ಸಣ್ಣಪುಟ್ಟ ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಕೇಂದ್ರ ಸರಕಾರ ಬಜೆಟ್ ನಲ್ಲಿ ಘೋಷಿಸಿರುವ 5,300 ಕೋಟಿ ರೂ. ಅನುದಾನ ತಕ್ಷಣ ಬಿಡುಗಡೆ ಮಾಡಿ ಯೋಜನೆ ಪೂರ್ಣಗೊಳ್ಳಲು ಸಹಕರಿಸಬೇಕು**

**-ಎಚ್.ವಿ.ವೆಂಕಟೇಶ್, ಶಾಸಕ, ಪಾವಗಡ**

## ವಿಮಾನ ನಿಲ್ದಾಣ ನಿರ್ಮಾಣಕ್ಕೆ ವಿರೋಧ

• ಉದಯವಾಹಿನಿ, ಮಾಗಡಿ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಸೋಲೂರು ಹೋಬಳಿ ದಾಸೇಗೌಡನಪಾಳ್ಯ ಗ್ರಾಮದ ಕೆಂಪೇಗೌಡ ವೃತ್ತದಲ್ಲಿ ಸೋಲೂರು ಹೋಬಳಿಯ 25 ಗ್ರಾಮಗಳ ರೈತರ ಸಭೆ ನಡೆಯಿತು. ಸಭೆಯಲ್ಲಿ ನೆಲಮಂಗಲ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀನಿವಾಸ್ ಮಾತನಾಡಿ, ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವಿರುದ್ಧ ನನ್ನ ಶಾಸಕ ಸ್ಥಾನವನ್ನು ಪಣಕ್ಕಿಟ್ಟು ಹೋರಾಟ ನಡೆಸಲು ಸಿದ್ದನಿದ್ದೇನೆ. ಯಾವುದೇ ಕಾರಣಕ್ಕೂ ಈ ಭಾಗದಲ್ಲಿ ವಿಮಾನ ನಿಲ್ದಾಣ ಆಗಲು ಬಿಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸೋಲೂರು ಹೋಬಳಿಯಲ್ಲಿ ಬೆಂಗಳೂರಿನ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಮಾಡುವುದು ಬೇಡ. ರೈತರು ತಮ್ಮ ಭೂಮಿಯನ್ನು ವಿಮಾನ ನಿಲ್ದಾಣಕ್ಕೆ ಬಿಟ್ಟು ಕೊಡಲು ತಯಾರಿಲ್ಲ ಎಂದು ಸರ್ಕಾರಕ್ಕೆ ತಿಳಿಸಲಾಗಿದೆ. ಸೊಲದೇವನಹಳ್ಳಿಯಲ್ಲಿ ಈ ವಿಚಾರ ಚರ್ಚೆಗೆ ಬಂದಾಗ ನಿಮ್ಮ ಜೊತೆ ನಾನು ಇರುತ್ತೇನೆ ಎಂದು ತಿಳಿಸಿದ್ದೆ. ಈಗಲೂ ಅದೇ ಮಾತನ್ನು ಹೇಳುತ್ತೇನೆ ಎಂದು ಭರವಸೆ ನೀಡಿದರು.

ಈಗಾಗಲೇ ಈ ವಿಷಯವನ್ನು ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ. ಯಾವುದೇ ಕಾರಣಕ್ಕೂ ನನ್ನ ಕ್ಷೇತ್ರದ ಭೂಮಿಯನ್ನು ಬಿಟ್ಟುಕೊಡುವುದಿಲ್ಲ ಎಂದರು.

ಜಗಣ್ಣಯ್ಯನ ಮಠದ ಪೀಠಾಧ್ಯಕ್ಷ ಚನ್ನಬಸವ ಸ್ವಾಮೀಜಿ ಮಾತನಾಡಿ, ಸೋಲೂರು ಹೋಬಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ವಿಚಾರ ಕುರಿತು ನನಗೆ ದಿನಕ್ಕೆ ನೂರಾರು ಸಂದೇಶಗಳು ಬರುತ್ತವೆ. ಈ ಭಾಗದ ರೈತರು ಆತಂಕಕ್ಕೆ ಒಳಗಾಗಿದ್ದಾರೆ ಎಂದು ತಿಳಿಸಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಆರ್.ಗೌಡ ಮಾತನಾಡಿ, ಈಗಿರುವ ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಕೇವಲ ಎರಡು ಟರ್ಮಿನಲ್‌ಗಳಿದ್ದು, ಇನ್ನೂ 4 ಟರ್ಮಿನಲ್‌ಗಳನ್ನು ನಿರ್ಮಿಸಿ ಸಂಚಾರಿ ಒತ್ತಡ ಕಡಿಮೆ ಮಾಡಬಹುದು. ಅಲ್ಲದೆ ಎಚ್‌ಎಎಲ್ ವಿಮಾನ ನಿಲ್ದಾಣ ಖಾಲಿ ಇದ್ದು, ಅಲ್ಲೂ ವಿಮಾನ ನಿಲ್ದಾಣ ನಿರ್ಮಿಸಬಹುದು. ಅದನ್ನು ಬಿಟ್ಟು ರೈತರ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಂಡು 2 ನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾಡುವುದು ಸರಿಯಾದ ಕ್ರಮವಲ್ಲ ಎಂದು ಹೇಳಿದರು.

ಹೊಸಪಾಳ್ಯ ಲೋಕೇಶ್, ಶಂಕರಪ್ಪ, ಶೃಂಗೇಶ್, ಮರಿಕುಪ್ಪೆ ಕಾಂತರಾಜು, ವರಲಕ್ಷ್ಮಿ ದಾಸಪ್ಪ, ನಾರಾಯಣ್, ಕುಮಾರ್, ಮಂಟಪ ಗಿರೀಶ್, ರಾಮೇಗೌಡ, ಕೋಡಿಹಳ್ಳಿ ರೇಣುಕಾರಾಧ್ಯ, ವೆಂಕಟಪ್ಪ, ಲಲಿತಾದಾಸ್, ಲೋಕೇಶ್, ಮೋಹನ್, ಶಿವಣ್ಣ, ಶ್ರೀನಿವಾಸ್, ಮರಿಯಣ್ಣ, ತಿಮ್ಮೇಗೌಡ ಸೇರದಂತೆ ಸೋಲೂರು ಹೋಬಳಿಯ ನೂರಾರು ರೈತರು ಭಾಗವಹಿಸಿದ್ದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ನಕ್ಷತ್ರ ಪುಂಜಗಳ ಚಾಲನೆ ನಿಮಗಾಗಿ ಉತ್ತಮವಾಗಿಲ್ಲ. ಇಂದಿನ ದಿನ ನಿಮ್ಮ ಹಣವನ್ನು ತುಂಬಾ ಸುರಕ್ಷಿತವಾಗಿಡಬೇಕು.

**ವೃಷಭ** ಸಾಧ್ಯವಾದರೆ ದೀರ್ಘ ಪ್ರಯಾಣವನ್ನು ತಪ್ಪಿಸಿ. ಏಕೆಂದರೆ ನೀವು ಪ್ರಯಾಣಿಸು ತುಂಬಾ ದುರ್ಬಲರಾಗಿದ್ದೀರಿ ಹಾಗೂ ಇದು ಮತ್ತಷ್ಟು ನಿಮ್ಮನ್ನು ದುರ್ಬಲಗೊಳಿಸುತ್ತದೆ.

**ಮಿಥುನ** ಆರೋಗ್ಯ ಚೆನ್ನಾಗಿರುತ್ತದೆ. ರಿಯಲ್ ಎಸ್ಟೇಟ್ ಮತ್ತು ಆರ್ಥಿಕ ವ್ಯವಹಾರಗಳಿಗೆ ಒಳ್ಳೆಯ ದಿನ. ನಿಮ್ಮ ಪೋಷಕರಿಗೆ ಮಹತ್ವಾ ಕಾಂಕ್ಷೆಯನ್ನು ಬಹಿರಂಗಪಡಿಸಲು ಸರಿಯಾದ ಸಮಯ.

**ಕರ್ಕಾಟಕ** ನಿಮ್ಮ ಸಂಪೂರ್ಣ ಹಾಗೂ ಪ್ರಶ್ನಾತೀತ ಪ್ರೀತಿ ಒಂದು ಜಾದುವಿನಂಥ ಸೃಜನಶೀಲ ಶಕ್ತಿಯನ್ನು ಹೊಂದಿದೆ. ಕೆಲಸದ ಸ್ಥಳದಲ್ಲಿ ಹಿರಿಯರು, ಸಹೋದ್ಯೋಗಿಗಳಿಂದ ಬೆಂಬಲ ನಿಮ್ಮ ಸ್ಥೈರ್ಯವನ್ನು ಹೆಚ್ಚಿಸುತ್ತದೆ.

**ಸಿಂಹ** ನಿಮ್ಮ ತೂಕದ ಮೇಲೆ ಒಂದು ಕಣ್ಣಿಟ್ಟಿರಿ ಮತ್ತು ಅತಿಯಾಗಿ ತಿನ್ನಬೇಡಿ. ಹಣಕಾಸು ಖಂಡಿತವಾಗಿಯೂ ವೃದ್ಧಿಯಾಗುತ್ತದೆ– ಆದರೆ ಅದೇ ಸಮಯದಲ್ಲಿ ಖರ್ಚೂ ತುಂಬಾ ಹೆಚ್ಚಾಗುತ್ತದೆ.

**ಕನ್ಯಾ** ಯಶಸ್ಸು ಹತ್ತಿರವಿರುವಂತೆ ತೋರಿದರೂ ಸಹ ಶಕ್ತಿ ಕುಂಠಿತವಾಗುತ್ತದೆ. ನಿಮ್ಮ ಹಣವನ್ನು ಸಂಗ್ರಹಿಸಿದಾಗ ಮಾತ್ರ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ. ಇದನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಿ

**ತುಲಾ** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು ಅಥವಾ ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು.

**ವೃಶ್ಚಿಕ** ಮನರಂಜನೆ ಮತ್ತು ಮೋಜಿನ ಒಂದು ದಿನ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ.

**ಧನಸ್ಸು** ಇಂದು ನೀವು ಲಾಭ ಪಡೆಯುತ್ತೀರಿ – ಕುಟುಂಬದ ಸದಸ್ಯರು ಸಕಾರಾತ್ಮಕ ರೀತಿಯಲ್ಲಿ ನಿಮಗೆ ಪ್ರತಿಕ್ರಿಯಿಸುತ್ತಾರೆ. ಹರ್ಷಚಿತ್ತದಿಂದಿರಿ ಹಾಗೂ ಪ್ರೀತಿಯಲ್ಲಿನ ಏಳುಬೀಳುಗಳನ್ನು ಎದುರಿಸುವ ಧೈರ್ಯ ಹೊಂದಿರಿ.

**ಮಕರ** ನಿಮ್ಮ ಸಂತೋಷದ ಪ್ರಕೃತಿ ಇತರರಿಗೆ ಸಂತೋಷ ತರುತ್ತದೆ. ನಿಮ್ಮ ತಾಯಿ ಅಥವಾ ತಂದೆಯ ಆರೋಗ್ಯಕ್ಕಾಗಿ ನೀವು ಇಂದು ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗಬಹುದು.

**ಕುಂಭ** ನೀವು ಚೈತನ್ಯದಿಂದ ತುಂಬಿರುತ್ತೀರಿ ಮತ್ತು ಇಂದು ಅಸಾಮಾನ್ಯವಾದದ್ದೇನಾದರೂ ಸಾಧಿಸುತ್ತೀರಿ. ಇಂದು ಸಾಲಗಾರನು ನಿಮ್ಮ ಮನೆ ಬಾಗಿಲಿಗೆ ಬರಬಹುದು ಮತ್ತು ನಿಮ್ಮ ಹತ್ತಿರ ಸಾಲ ಕೇಳಬಹುದು.

**ಮೀನ** ವಿಶೇಷವಾಗಿ ಹೊರಗಿಟ್ಟ ಆಹಾರ ತಿನ್ನುವಾಗ ವಿಶೇಷ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಆದರೆ ಅನಗತ್ಯ ಒತ್ತಡ ಕೇವಲ ನಿಮಗೆ ಮಾನಸಿಕ ಉದ್ವೇಗ ಉಂಟುಮಾಡುತ್ತದೆ. ಬ್ಯಾಂಕ್ ವ್ಯವಹರಗಳಲ್ಲಿ ಕಾಳಜಿ ವಹಿಸಬೇಕು.

## ಪ.ಜಾ, ಪ ಪಂ ದೌರ್ಜನ್ಯ ನಿಯಂತ್ರಣ ಸಭೆ

• ಉದಯವಾಹಿನಿ ಇಂಡಿ

ಇಂಡಿ ಪಟ್ಟಣದ ಮಿನಿ ಆಡಳಿತಸೌಧ ಸಭಾಭವನದಲ್ಲಿ ಉಪ ವಿಭಾಗದಂಡಾಧಿಕಾರಿ ಅನುರಾಧಾ ವಸ್ತ್ರದ ಅಧ್ಯಕ್ಷತೆಯಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ದೌರ್ಜನ್ಯ ನಿಯಂತ್ರಣ ಸಭೆ ಜರುಗಿತ್ತು. ಎಸಿ ಅನುರಾಧಾ ವಸ್ತ್ರದ ಮಾತನಾಡಿ ಪರಿಶಿಷ್ಠ ಜಾತಿ ಪರಿಶಿಷ್ಠ ಪಂಗಡದವರು ಸಾಮಾಜಿಕ ,ಆರ್ಥಿಕ, ಶೈಕ್ಷಣಿಕ ಮೇಲ್ಪಂಕ್ತಿಗೆ ಬರಬೇಕು ಇಂದು ಗ್ರಾಮೀಣ ಭಾಗಗಳಲ್ಲಿ ಸಮಸ್ಯೆಗಳು ಇದ್ದರೆ ಅಧಿಕಾರಿಗಳು ಕೂಡಲೆ ಸ್ಪಂದಿಸಬೇಕು. ದೌರ್ಜನ್ಯ ತಡೆಗೆ ಸರಕಾರಿ ಇಲಾಖೆಯೊಂದಿಗೆ ದೌರ್ಜನ್ಯ


ಉದಯವಾಹಿನಿ ಚಿತ್ರ

ತಡೆ ಸಮಿತಿ ಇರುವದರಿಂದ ಅಧ್ಯಕ್ಷರು ಹಾಗೂ ದೌರ್ಜನ್ಯ ಸಮಿತಿ ಎಲ್ಲಾ ಪದಾಧಿಕಾರಿಗಳು ನಮ್ಮೊಂದಿಗೆ ಸಹಕರಿಸಿ ಎಂದು ಸಭೆಯಲ್ಲಿ ತಿಳಿಸಿದರು. ದೌರ್ಜನ್ಯ ಸಮಿತಿ ಅಧ್ಯಕ್ಷ ಬಾಬು ಗುಡಮಿ ಮಾತನಾಡಿ ಎಸ್ಸಿ .ಎಸ್ಟಿ ಕುಂದು ಕೊರತೆ ಸಾಕಷ್ಟು ಇವೆ ತಾಲ್ಲೂಕಿನಾದ್ಯಂತ ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಅಸ್ಪ್ರಶ್ಯತೆ ಆಚರಣೆ ಜೀವಂತ ಇದೆ. ಅಧಿಕಾರಿಗಳು ಆತ್ಮಸಾಕ್ಷಿ ಕೆಲಸಮಾಡಲು ವಿನಂತಿಸಿದರು. ದೌರ್ಜನ್ಯ ಸಮಿತಿ ಸದಸ್ಯ ಶಿವಾನಂದ ಮೂರಮನ್ ಮಾತನಾಡಿ ಅಥರ್ಗಾ ಗ್ರಾಮದಲ್ಲಿ ಡಾ.ಬಿ.ಆರ್ ಅಂಬೇಡ್ಕರವರ ಸಮುದಾಯ ಭವನಕ್ಕೆ ನಿವೇಶನ ಹಸ್ತಾಂತರಿಸಲು ಪಿಡಿಒರವರಿಗೆ ಹಿಂದಿನ ಸಭೆಯಲ್ಲಿ ಚರ್ಚಿಲಾಗಿತ್ತು. ಸಹಾಯಕ ನಿರ್ದೇಶಕರು ತಕ್ಷಣ ನಿವೇಶನ ಇಲಾಖೆಯ ಹೆಸರಿಗೆ ಹಸ್ತಾಂತರಿಸಲು ಕೋರಿದರು ಹಾಗೂ ಅಥರ್ಗಾ ಪರಿಶಿಷ್ಠ ಜಾತಿಯವರಿಗೆ ಸ್ಮಶಾನ ಭೂಮಿ ಇಲ್ಲ ಇದನ್ನು ಕೂಡಾ ಕೂಡಲೆ ಮಂಜೂರಿಗೆ ಕೋರಲಾಗಿದೆ ಎಂದರು. ತಹಶೀಲ್ದಾರ ಕಡಕಭಾವಿ, ಇಒ ಅಧಿಕಾರಿ ನಂದೀಪ ರಾಠೋಡ, ಡಿವಾಯ್ ಎಸ್ಪಿ ಜಗದೀಶ,ಸಮಾಜ ಕಲ್ಯಾಣ ತಾಲ್ಲೂಕಾಧಿಕಾರಿ ಉಮೇಶ ಲಮಾಣಿ ಮತ್ತಿತರಿದ್ದರು.

### ಮೇಲ್ಸೇತುವೆ, ಎಲಿವೇಟೆರ್ ರಸ್ತೆ ನಿರ್ಮಾಣ ಕಾಮಗಾರಿ ಪೂರ್ಣಗೊಂಡ ಭಾಗಗಳಲ್ಲಿ ಧಾರಣ ಸಾಮರ್ಥ್ಯ ಪರಿಶೀಲನೆ

## ಬಿ.ಸಿ. ರೋಡ್-ಅಡ್ಡಹೊಳೆ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ಚುರುಕು

• ಉದಯವಾಹಿನಿ ಬಂಟ್ವಾಳ

ಬಿ.ಸಿ. ರೋಡ್-ಅಡ್ಡಹೊಳೆ ಹೆದ್ದಾರಿ ಅಭಿವೃದ್ಧಿ ಕಾಮಗಾರಿಯ ಭಾಗವಾಗಿ ಹಲವು ಕಡೆ ನೂತನ ಸೇತುವೆಗಳು, ಎಲಿವೇಟೆಡ್ ರೋಡ್(ಓವರ್ ಪಾಸ್), ಕಲ್ಲಡ್ಕದಲ್ಲಿ ಮೇಲ್ಸೇತುವೆ ನಿರ್ಮಿಸಲಾಗಿದ್ದು, ಅದರ ಧಾರಣ ಸಾಮರ್ಥ್ಯ (ಲೋಡ್ ಟೆಸ್ಟ್ ಫಾರ್ ಬ್ರಿಡ್ಜ್) ದ ಪ್ರಮಾಣ ಪತ್ರವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ)ಕ್ಕೆ ಸಲ್ಲಿಸುವ ಹಿನ್ನೆಲೆಯಲ್ಲಿ ಧಾರಣ ಸಾಮರ್ಥ್ಯವನ್ನು ಪರಿಶೀಲಿಸುವ ಕಾರ್ಯ ನಡೆಯುತ್ತಿದೆ.

ಕಾಮಗಾರಿಯಲ್ಲಿ ಪಾಣೆಮಂಗಳೂರು, ಉಪ್ಪಿನಂಗಡಿಯಲ್ಲಿ ನದಿ ದೊಡ್ಡ ಸೇತುವೆಗಳು, ಉಳಿದಂತೆ ಸಣ್ಣಪುಟ್ಟ ಸೇತುವೆಗಳು, ಕಲ್ಲಡ್ಕದಲ್ಲಿ ಮೇಲ್ಸೇತುವೆ, ಪಾಣೆಮಂಗಳೂರು, ಮೆಲ್ಕಾರ್, ಮಾಣಿ, ನೆಕ್ಕಿಲಾಡಿ, ಉಪ್ಪಿನಂಗಡಿ, ಸುಬ್ರಹ್ಮಣ್ಯ ಕ್ರಾಸ್ ಹಾಗೂ ನೆಲ್ಯಾಡಿಯಲ್ಲಿ ಎಲಿವೇಟೆಡ್ ರಸ್ತೆಗಳನ್ನು ನಿರ್ಮಿಸಲಾಗಿದ್ದು, ಅಂತಹ ಎಲ್ಲಾ ನಿರ್ಮಾಣಗಳು ಎಷ್ಟು ಭಾರವನ್ನು ಹೊರುತ್ತವೆ ಎಂದು ಖಚಿತ ಪಡಿಸಿಕೊಳ್ಳುವುದು ಅಗತ್ಯವಾಗಿದೆ. ಹೀಗಾಗಿ ಸದ್ಯಕ್ಕೆ ಕಾಮಗಾರಿ ಪೂರ್ಣಗೊಂಡ ಭಾಗಗಳಲ್ಲಿ


ಉದಯವಾಹಿನಿ ಚಿತ್ರ

**ಮರಗಳ ತೆರವು ಕಾರ್ಯ ನಿರೀಕ್ಷೆಯಂತೆ ನಡೆದರೆ ಅಕ್ಟೋಬರ್ ವೇಳೆಗೆ ಚಾರ್ಮಾಡಿ ದ್ವಿಪಥ ರಸ್ತೆ ಕಾಮಗಾರಿ ಆರಂಭವಾಗುವ ಸಾಧ್ಯತೆಯಿದೆ. ಚಾರ್ಮಾಡಿ ಘಾಟಿ ರಸ್ತೆ ವಿಸ್ತರಣೆ ತೀರಾ ಕ್ಲಿಷ್ಟಕರವಾಗಿದ್ದು, ಈ ಕಾರಣದಿಂದ ಕಾಮಗಾರಿಗೆ ಕನಿಷ್ಠ 1 ವರ್ಷಗಳ ವರೆಗೆ ಹೆದ್ದಾರಿ ಸಂಚಾರ ಬಂದ್ ಮಾಡಬೇಕಾದ ಅನಿವಾರ್ಯತೆಯಿದೆ. 1984ರಲ್ಲೂ ರಸ್ತೆ ಕಾಮಗಾರಿ ನಡೆಯುವ ವೇಳೆ ರಸ್ತೆ ಬಂದ್ ಮಾಡಲಾಗಿತ್ತು.**

ಧಾರಣ ಸಾಮರ್ಥ್ಯ ಪರಿಶೀಲಿಸಲಾಗುತ್ತಿದೆ. ಈ ನಿರ್ಮಾಣಗಳು ಮುಂದೆ ಪೂರ್ಣ ಪ್ರಮಾಣದಲ್ಲಿ ಸಂಚಾರಕ್ಕೆ ತೆರೆದುಕೊಂಡ ಬಳಿಕ ಹೆದ್ದಾರಿಯಲ್ಲಿ ಯಾವುದೇ ವಾಹನಗಳು ಸಂಚರಿಸಿದರೂ ಅದರ ಭಾರವನ್ನು ರಸ್ತೆ ಹೊರಬೇಕಿದೆ. ಈ ದೃಷ್ಟಿಯಿಂದ ಹೆದ್ದಾರಿ ಕಾಮಗಾರಿ ಗುತ್ತಿಗೆ ನಿರ್ವಹಿಸುವ ಕಂಪನಿ ಕೆಎನ್‌ಆರ್ ಕನ್ಸ್ಟ್ರಕ್ಷನ್ ನ ನವರು ತಮ್ಮ ಬೃಹತ್ ಗಾತ್ರದ 4 ಲಾರಿಗಳನ್ನು ಪೂರ್ತಿ ಲೋಡ್ ಮಾಡಿ ಸೇತುವೆಯಲ್ಲಿ ನಿಲ್ಲಿಸಿ ಧಾರಣಾ ಸಾಮರ್ಥ್ಯವನ್ನು ಪರಿಶೀಲಿಸಲಾಗುತ್ತದೆ. ಕಂಪನಿಯ ಮಾಹಿತಿ ಪ್ರಕಾರ ಅವುಗಳು 2 ಸಾವಿರ ಟನ್ ಭಾರವನ್ನು ಹೊರಬೇಕಿದೆ. ಪ್ರಸ್ತುತ ಧಾರಣಾ ಸಾಮರ್ಥ್ಯವನ್ನು ಪರಿಶೀಲಿಸುವ ಕಾರ್ಯ ನಡೆಯುತ್ತಿದ್ದು, ಎನ್‌ಎಚ್‌ಎಐನ ಯೋಜನಾ ನಿರ್ದೇಶಕ ಅಬ್ದುಲ್ ಜಾವೇದ್ ಅಜ್ಮಿ ಅವರು ಕೆಎನ್‌ಆರ್ ಕಂಪನಿಯ ಪ್ರಾಜೆಕ್ಟ್ ಮ್ಯಾನೇಜರ್ ಮಹೇಂದರ್ ರೆಡ್ಡಿ ಸೇರಿದಂತೆ ಪ್ರಾಧಿಕಾರ ಹಾಗೂ ಕಂಪನಿಯ ಅಧಿಕಾರಿಗಳ ಜತೆ ಪರಿಶೀಲನೆಯನ್ನು ನಡೆಸಿದ್ದಾರೆ.

### ಮರ ತೆರವು ನಡೆದ ಬಳಿಕ ಫಿಲ್ಲಿಂಗ್ ಕಾರ್ಯ ಆರಂಭ

**ಅರಣ್ಯ ಇಲಾಖೆ ಗ್ರೀನ್ ಸಿಗ್ನಲ್**

ಮಂಗಳೂರು- ವಿಲ್ಲುಪುರಂ ರಾಷ್ಟ್ರೀಯ ಹೆದ್ದಾರಿ ಭಾಗವಾದ, ಬೆಂಗಳೂರು-ಮಂಗಳೂರು ಸಂಪರ್ಕಿಸುವ ಚಾರ್ಮಾಡಿ ಘಾಟಿಯ ವಿಸ್ತರಣೆ ಕಾಮಗಾರಿ ನಡೆಯಲಿದೆ. ಎಸ್ ಎಲ್‌ವಿ ಅರ್ಥ್ ಮೂವರ್ಸ್ ಕನ್‌ಸ್ಟ್ರಕ್ಷನ್ ಕಂಪನಿ 141 ಕೋಟಿ ರೂ. ಮೊತ್ತಕ್ಕೆ ಗುತ್ತಿಗೆ ವಹಿಸಿಕೊಂಡಿದ್ದು, ರಸ್ತೆಯ ಮಧ್ಯಭಾಗದಿಂದ ಇಕ್ಕೆಲಗಳಲ್ಲಿಯೂ 15ಮೀಟರ್‌ನಷ್ಟು ರಸ್ತೆ ಅಗಲೀಕರಣವಾಗಲಿದೆ. ರಸ್ತೆ ಅಗಲೀಕರಣದಿಂದ ತೆರವು ಮಾಡಬೇಕಾದ ಮರಗಳ ಲೆಕ್ಕಾಚಾರಗಳು ಮುಗಿದಿದ್ದು, ಇದಕ್ಕೆ ಅರಣ್ಯ ಇಲಾಖೆ ಗ್ರೀನ್ ಸಿಗ್ನಲ್ ನೀಡಿದೆ. ರಸ್ತೆಯ ಇಕ್ಕೆಲಗಳಲ್ಲಿಮರ ತೆರವಿನ ಬಗ್ಗೆ ಈಗಾಗಲೇ ಮಾರ್ಕಿಂಗ್ ಕೆಲಸ ಮುಗಿದಿದ್ದು, ಸರಕಾರ ಅರಣ್ಯ ಇಲಾಖೆಗೆ ಮರಗಳ ಮೊತ್ತ ಕಟ್ಟಬೇಕಾಗಿದೆ. ಇದಾದ ಬಳಿಕ ಮರಗಳ ತೆರವಿಗೆ ಟೆಂಡರ್ ಕರೆದ ಬಳಿಕ ಮರಗಳ ತೆರವು ಕಾರ್ಯ ಆರಂಭವಾಗಲಿದೆ. ಇದೆಲ್ಲ ಪ್ರಕ್ರಿಯೆ ಜೂನ್‌ನೊಳಗೆ ಮುಗಿಯುವ ಸಾಧ್ಯತೆಯಿದೆ. ಮರ ತೆರವು ನಡೆದ ಬಳಿಕ ಫಿಲ್ಲಿಂಗ್ ಕಾರ್ಯ ಆರಂಭವಾಗಲಿದೆ.

## ಕಾವೇರಿ ಸೀಡ್ಸ್ ಹತ್ತಿ ಬೀಜ ರೈತರ ನಂಬಿಕೆಗೆ ಅರ್ಹವಾಗಿವೆ: ದೇವೇಂದ್ರಪ್ಪ

• ಉದಯವಾಹಿನಿ ವಡಗೇರಾ

ರೈತ ಬಾಂಧವರು ಕಡ್ಡಾಯವಾಗಿ ಭಾರತೀಯ ಗುಣಮಟ್ಟದ ಸಂಸ್ಥೆಯ ಮುದ್ರೆ ಹೊಂದಿದ ಹತ್ತಿ ಬೀಜಗಳನ್ನ ಬಳಕೆ ಮಾಡಬೇಕು ಎಂದು ಶ್ರೀ ಹೈಯ್ಯಾಳ ಲಿಂಗೇಶ್ವರ ಆಗ್ರೋ ಏಜೆನ್ಸಿ ಮಾಲೀಕರಾದ ದೇವೇಂದ್ರಪ್ಪ ಖಾನಾಪುರ ಹೇಳಿದರು. ತಾಲ್ಲೂಕಿನ ಹೊರಟರು ಗ್ರಾಮದಲ್ಲಿ ಕಾವೇರಿ ಸೀಡ್ಸ್ ಕಂಪನಿ ಲಿಮಿಟೆಡ್ ಹಾಗೂ ಖಾನಾಪುರ ಗ್ರಾಮದ ಶ್ರೀ ಹೈಯ್ಯಾಳ ಲಿಂಗೇಶ್ವರ ಆಗ್ರೋ ಏಜೆನ್ಸಿ ಸಂಯೋಗದಲ್ಲಿ ಹಮ್ಮಿಕೊಂಡಿದ್ದ ರೈತರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ರೈತ ಬಂಧುಗಳು ತೆಲಂಗಾಣ ಆಂಧ್ರ ಹಾಗೂ ಇನ್ನಿತರ ಕಡೆ ನಕಲಿ ಬೀಜಗಳ ಹಾವಳಿ ಹೆಚ್ಚಾಗಿದ್ದು ನಕಲಿ ಬೀಜಗಳಿಂದ ರೈತರು ಮೋಸ ಹೋಗಬಾರದು ಕಾವೇರಿ ಸೀಡ್ಸ್ ಕೆಸಿಎಚ್ 144 ತಳಿಯ ಹತ್ತಿಯು ರೈತರ ನಂಬಿಕೆಗೆ ಅರ್ಹರವಾಗಿದೆ ಉತ್ತಮ ಗುಣಮಟ್ಟದ ಇಳುವರಿ ಕೂಡಾ ಬರುತ್ತದೆ ಎಂದು ಹೇಳಿದರು. ಕಾವೇರಿ ಸಿಡ್ಸ್ ಕಂಪನಿ ಲಿಮಿಟೆಡ್ ಅಧಿಕಾರಿ ರಮೇಶ ಹೂಗಾರ



ಉದಯವಾಹಿನಿ ಚಿತ್ರ

ಮಾತನಾಡಿ ಕಾವೇರಿ ಸೀಡ್ಸ್ ತಳಿಯ ಬೀಜಗಳು ಉತ್ತಮವಾಗಿವೆ ಈ ಬೀಜಗಳು ಉತ್ತಮವಾದ ಇಳುವರಿ ಕೊಡುತ್ತವೆ ಮತ್ತು ರೋಗವು ಕೂಡ ಬಹಳ ಕಡಿಮೆ ಅತ್ಯಂತ ಎತ್ತರ ಬೆಳೆಯುತ್ತದೆ ಕಾಯಿಗಳು ಕೂಡಾ ಹೆಚ್ಚು ಹಿಡಿಯುತ್ತವೆ ಹೆಚ್ಚಾಗಿ ಈ ಭಾಗದ ರೈತರು ಕಾವೇರಿ ಸೀಡ್ಸ್ ಬಿಜಗಳನ್ನು ಬಿತ್ತನೆ ಮಾಡುತ್ತಿದ್ದು ನಮ್ಮ ಕಂಪನಿಯ ಬೀಜಗಳು ಉತ್ತಮವಾಗಿದೆ ಎಂದು ಹೇಳಿದರು. ನಂದಪ್ಪ ಗೌಡ ಹೊರಟರು , ದೇವೇಂದ್ರಪ್ಪ ಊಳ್ಳೆಸೂಗುರ, ಬಸವರಾಜ ಕಾವಲಿ, ಗೋವಿಂದಪ್ಪ, ಹುಸೇನಿ ಸಾಹುಕಾರ, ಹಬ್ಬಣ್ಣ ರಂಗಾಪುರ, ಕಂಪನಿಯ ಸಿಬ್ಬಂದಿ, ರೈತಾಪಿ ವರ್ಗದವರು ಉಪಸ್ಥಿತರಿದ್ದರು.

## ಬಾಗಿ ನಿಂತ ವಿದ್ಯುತ್ ಕಂಬ ತಂತಿಗಳ ದುರಸ್ತಿಗೆ ಒತ್ತಾಯ

• ಉದಯವಾಹಿನಿ ವಡಗೇರಾ

ಪಟ್ಟಣದಲ್ಲಿ ಜೊತು ಬಿದ್ದ ವಿದ್ಯುತ್ ತಂತಿ ಕಂಬಗಳನ್ನು ಸರಿಪಡಿಸುವಂತೆ ರಾಜ್ಯ ರೈತ ಸಂಘ ಹಸಿರು ಸೇನೆ ವಡಗೇರಾ ತಾಲ್ಲೂಕು ಅಧ್ಯಕ್ಷ ವಿದ್ಯಾಧರ್ ಜಾಕಾ ಆಗ್ರಹಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಅವರು ಪಟ್ಟಣದ ಬಜಾರನ ಹನುಮಾನ ದೇವಸ್ಥಾನದ ಹತ್ತಿರವಿರುವ ಕಂಬವೊಂದು ಬಾಗಿದ್ದು ಯಾವಾಗ ಬೀಳುತ್ತೂ ಗೊತ್ತಿಲ್ಲ ಇದು ಜನಬಿಡಿನ ಪ್ರದೇಶವಾಗಿದ್ದು ಸಾರ್ವಜನಿಕರು ಜೀವ ಕೈಯಲ್ಲಿ ಹಿಡಿದು ಕೊಂಡು ತಿರುಗಾಡುವಂತಾಗಿದೆ.

ಅದೇ ರೀತಿ ತುಮಕೂರು ಮುಖ್ಯ ರಸ್ತೆಯ ಸಾಯಿ ದಾಬಾ ಹತ್ತಿರವು ವಿದ್ಯುತ್ ತಂತಿ ಜೊತು ಬಿದ್ದಿದ್ದು ಅಪಾಯಕ್ಕೆ ಆಹ್ವಾನ ನೀಡುತ್ತಿದೆ ಆದರೆ ಜೆಸ್ಕಾಂ ಅಧಿಕಾರಿಗಳು ಸಿಬ್ಬಂದಿ ಮಾತ್ರ ದಿವ್ಯ ನಿರ್ಲಕ್ಷ ವಯಿಸುತ್ತಿರುವುದು ಸರಿಯಲ್ಲ ಈಗಾಗಲೇ ತೀವ್ರ ಗಾಳಿ ಮಳೆಗೆ ಅಲ್ಲಲ್ಲಿ ವಿದ್ಯುತ್ ತಂತಿ ಕಂಬಗಳು ಸಂಪೂರ್ಣವಾಗಿ ಭಾಗಿ ನಿಂತು ಜೀವ ಬಲಿಗಾಗಿ


ಉದಯವಾಹಿನಿ ಚಿತ್ರ

ಬಾಯಿ ತೆರೆದು ನಿಂತಿವೆ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತುಕೊಂಡು ವಿದ್ಯುತ್ ತಂತಿ ಕಂಬಗಳು ದುರಸ್ತಿಗೊಳಿಸುವಂತೆ ರಾಜ್ಯ ರೈತ ಸಂಘದ ಶರಣು ಜಡಿ, ಸತೀಶ್ ಪೂಜಾರಿ, ನಾಗರಾಜ ಸ್ವಾಮಿ ಹಿರೇಮಠ, ವೆಂಕಟೇಶ್ ಇಟಗಿ ,ನಿಂಗು ಕುರ್ಕಳಿ, ದರ್ಶನ್ ಗುತ್ತೇದಾರ್, ಮಲ್ಲು ನಾಟೇಕಾರ ಹಾಗೂ ಇನ್ನಿತರರು ಒತ್ತಾಯಿಸಿದ್ದಾರೆ

## ಚರಂಡಿ ನಿರ್ಮಿಸಲು ವಿಳಂಬವೇಕೆ? ಪಂಚಾಯತ್ ಅವ್ಯವಸ್ಥೆ ಕಂಡು ಬೇಸರ ವ್ಯಕ್ತಪಡಿಸಿದ ಗ್ರಾಮೀಣ ಜನರು

• ಉದಯವಾಹಿನಿ ಕಮಲನಗರ

ತಾಲ್ಲೂಕಿನ ಹೋಳಸಮುದ್ರ ಗ್ರಾಮ ಪಂಚಾಯತ್ ದಲ್ಲಿ ಬರುವ ಮೂರನೇ ವಾರ್ಡಿನ ಜ್ಞಾನೇಶ್ವರ ಕಾಲೋನಿ ಮಂದಿರದ ಹತ್ತಿರ ನಾಲ್ಕು ದಿಕ್ಕಿನ ಕಡೆಗೆ ಹಾದಿ ಬೀದಿಗಳಿದ್ದು ಈ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿಯ ಕಡೆ ಹೋಗುವುದು ಮತ್ತು ಇಲ್ಲಿಂದ ಸರ್ಕಾರಿ ಆಸ್ಪತ್ರೆಗೆ ಮುಟ್ಟಬಹುದು.

ಇದೆ ರಸ್ತೆಯಲ್ಲಿ ವಾಮನರಾವ ಆಳಂದೆ ಮನೆ ಹತ್ತಿರ ಕೆಲ ದಿನಗಳಿಂದ ನೆನೆಗುದ್ದಿಗೆ ಬಿದ್ದಿರುವ ಚರಂಡಿ ವ್ಯವಸ್ಥೆ ದಿಕ್ಕು ಕಾಣದೆ ಹರಿಯುವ ನೀರು ಕರಿ ಬಣ್ಣಕ್ಕೆ ಪರಿವರ್ತನೆಯಾಗಿದೆ, ನಿಂತಲ್ಲೇ ಮುಂದೆ ದಾರಿ ಇಲ್ಲದೆ ಜನತೆಗೆ ಹಾದಿ ಇಲ್ಲದೆ ಜನರು ಭಯದಿಂದ ಬದುಕುವಂತಾಗಿದೆ. ಚರಂಡಿ ಇಲ್ಲದೇ ಹಾದಿ ಬೀದಿಗಳಿಲ್ಲದೆ ರಸ್ತೆ ಮೇಲೆ ನಡೆದಾಡುವ ಗ್ರಾಮೀಣ ಜನರು ಪಂಚಾಯತಿಗೆ ಸಂಬಂಧಪಟ್ಟವರ ಮೇಲೆ ಹಿಡಿ ಶಾಪ ಹಾಕುತ್ತಿದ್ದಾರೆ. ಇಲ್ಲಿಯವರೆಗೆ ಗ್ರಾಮಸ್ಥರು ನಾವು ಗ್ರಾಮ ಪಂಚಾಯಿತಿಗೆ ಈ ಸಮಸ್ಯೆಯನ್ನು ಪರಿಹರಿಸುವಂತೆ ಕೇಳಿದರೆ ಮಾಡಿಸಿ ಕೊಡುತ್ತೇವೆ ಎಂದು ಖುಷಿ ಭರವಸೆಯನ್ನು ಕೊಡುತ್ತಲೇ ಬಂದಿದ್ದಾರೆ.

ವಾರ್ಡಿಗೆ ಭೇಟಿ ನೀಡಿ ಬಡಾವಣೆಯಲ್ಲಿ ಸುತ್ತಾಡಿ ಇಲ್ಲಿನ ಅವ್ಯವಸ್ಥೆ ನೋಡುವರಿಗೆ ಗೊತ್ತಾಗುತ್ತದೆ. ಪಂಚಾಯತದಿಂದ ಸುಧಾರಣೆ ಯಾಗುವ ಗ್ರಾಮೀಣ ಭಾಗವು ನಿರ್ಲಕ್ಷ


ಉದಯವಾಹಿನಿ ಚಿತ್ರ

**ನಾವು ನಿತ್ಯ ಸಮಸ್ಯೆ ಅನುಭವಿಸುವಂತಾಗಿದೆ ಎಂದು ಬಡಾವಣೆ ನಿವಾಸಿಗಳು ಅಳಲು ತೋಡಿಕೊಂಡಿದ್ದಾರೆ. ಸಂಬಂಧಪಟ್ಟವರು ಸಮಸ್ಯೆಗೆ ಪರಿಹಾರ ಕಲ್ಪಿಸಿದೆ ಇದ್ದರೆ ಪಂಚಾಯತಿಗೆ ಬೀಗ ಜಡಿದು ಪ್ರತಿಭಟನೆ ನಡೆಸುತ್ತೇವೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.**

ಧೋರಣೆಯನ್ನ ಸರಿಪಡಿಸಬೇಕೆಂಬ ತಾಕಿದ್ದು ಮಾಡಿದರು. ಎಷ್ಟು ಸಲ ಹೇಳಿದರು. ಪಂಚಾಯತಿಯವರು ಈ ಕಡೆ ಮುಖ ಹಾಕುತ್ತಿರಲಿಲ್ಲ ಚರಂಡಿ ನಿರ್ಮಿಸಲು ವಿಳಂಬವೇಕೆ ಗ್ರಾಮ ಪಂಚಾಯತಿಯಿಂದ ಕೆಲಸವಾಗುವುದಿಲ್ಲವೇ ಎಂಬುದನ್ನು ಇಲ್ಲಿನ ಜನ ಕಳವಳ ವ್ಯಕ್ತಪಡಿಸುತ್ತಾರೆ.

## ಬಸವಣ್ಣನವರ ತತ್ವಾದರ್ಶ ಅಳವಡಿಸಿಕೊಳ್ಳಿ

• ಉದಯವಾಹಿನಿ, ಬ್ಯಾಡಗಿ

ವಿಶ್ವಗುರು ಬಸವಣ್ಣನವರು 12ನೇ ಶತಮಾನದಲ್ಲಿ ಭಕ್ತಿಯ ಮರ ಅಭಾಸ್ಕರ ಬೆಳೆವಯವನ್ನು ಪ್ರಚಾರ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರು ಲಿಂಗಾಯತ ಸಮುದಾಯದ ಸ್ಥಾಪಕರಾಗಿದ್ದಾರೆ ಎಂದು ಬಿಇಎಸ್ ಸಂಸ್ಥೆಯ ನಿರ್ದೇಶಕ ಡಾ.ಎಸ್.ಎನ್.ನಿಡಗುಂದಿ ಹೇಳಿದರು.

ಪಟ್ಟಣದ ಬಿಇಎಸ್‌ಎಂ ಪದವಿ ಕಾಲೇಜು ಸಭಾ ಭವನದಲ್ಲಿ ಅಖಿಲ ಭಾರತ ವೀರಶೈವ ಹಿಂದೂ ಸಭಾ ತಾಲ್ಲೂಕು ಘಟಕ ಮಂಗಳವಾರ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಸವಣ್ಣನವರು ಅನುಭವ ಮಂಟಪವನ್ನು ಸ್ಥಾಪಿಸುವ ಮೂಲಕ ಎಲ್ಲಾ ವರ್ಗದ ಜನರಿಗೆ ಅವಕಾಶ ಕಲ್ಪಿಸುವ ಮೂಲಕ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಶ್ರಮದ ಪ್ರಾಮುಖ್ಯತೆ ತಿಳಿಸಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಭಾದ ತಾಲ್ಲೂಕು ಘಟಕದ ಅಧ್ಯಕ್ಷ ವಿಶ್ವನಾಥ ಅಂಕಲಕೋಟಿ ಮಾತನಾಡಿ, ಬಸವಣ್ಣನವರು ತಮ್ಮ ವಚನಗಳ ಮೂಲಕ ಸಮಾಜ ಸುಧಾರಣೆಗೆ ಸಾಕಷ್ಟು ಶ್ರಮಿಸಿದ್ದಾರೆ. ಅವರ ತತ್ವಾದರ್ಶಗಳನ್ನು ಇಂದಿನ ಯುವ ಪೀಳಿಗೆ ಪಾಲಿಸಬೇಕಾಗಿದೆ ಎಂದರು. ಪ್ರಾಚಾರ್ಯ ಎಸ್.ಜಿ.ವೈದ್ಯ, ನಿವೃತ್ತ ಉಪನ್ಯಾಸಕ ಪಿ.ಟಿ.ಲಕ್ಕಣ್ಣವರ, ಶಿವನಗೌಡ ಪಾಟೀಲ ಬಸವೇಶ್ವರರ ಜೀವನ ಚರಿತ್ರೆ ಕುರಿತು ಮಾತನಾಡಿದರು. ಸಮಾಜದ ಮುಖಂಡರಾದ ವೀರಭದ್ರಪ್ಪ ಗೊಡಚಿ, ಚಂದ್ರಣ್ಣ ಶೆಟ್ಟರ, ಗೀತಕ್ಕ ಕಟ್ಟೂರು ಇದ್ದರು.

## ಕುವೆಂಪು ಸಾಹಿತ್ಯ ಸರ್ವ ಶ್ರೇಷ್ಠ: ಚನ್ನಪ್ಪ ಕಟ್ಟಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ವಿಜಯಪುರ

ಸಮಾಜದಲ್ಲಿ ಅಂಚಿಗೆ ತಳ್ಳಲಾಗಿದ್ದ ಮಹಿಳೆಯರು ಮತ್ತು ರೈತರನ್ನು ಕೇಂದ್ರವನ್ನಾಗಿಟ್ಟುಕೊಂಡು ರಾಷ್ಟ್ರ ಕವಿ ಕುವೆಂಪು ರಚಿಸಿದ ಸಾಹಿತ್ಯ ಸರ್ವಶ್ರೇಷ್ಠವಾಗಿದೆ ಎಂದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಚನ್ನಪ್ಪ ಕಟ್ಟಿ ಅಭಿಪ್ರಾಯಪಟ್ಟರು.

ಇಲ್ಲಿಯ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗ ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವತಿಯಿಂದ ಹಮ್ಮಿಕೊಂಡಿರುವ ಎರಡು ದಿನಗಳ 'ಕುವೆಂಪು ಓದು' ಕಮ್ಮಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪಠ್ಯವು ಶ್ರೇಷ್ಠವಾಗಿದ್ದಲ್ಲಿ ಅದು ಮತ್ತೇ ಮತ್ತೇ ಓದಿಸಿ ಕೊಳ್ಳುತ್ತದೆ. ಕುವೆಂಪು ರಚಿಸಿದ ಸಾಹಿತ್ಯ ಮತ್ತೆ ಮತ್ತೆ ಓದಿಸಿಕೊಳ್ಳುವುದರಿಂದ ಆ ಕವಿ ಜೀವಂತವಾಗಿರುತ್ತಾನೆ. ರಾಷ್ಟ್ರಕವಿ ಜಿ. ಎಸ್ ಶಿವರುದ್ರಪ್ಪನವರ ಕವಿತೆಯ ಸಾಲುಗಳಂತೆ ಕವಿಗೆ ವಯಸ್ಸಾಗುತ್ತದೆ ಆದರೆ ಕಾವ್ಯಕ್ಕೆ ಅಲ್ಲಾ ಎಂದರು.

**ಕುವೆಂಪುರವರ ಸಾಹಿತ್ಯ ಓದಲೇಬೇಕು**

ಕುವೆಂಪು ಅವರು ಕನ್ನಡ ಕವಿಗಳಲ್ಲಿಯೇ ಅಗ್ರಗಣ್ಯರು. ಅವರ ಸುದೀರ್ಘವಾದ ಸಾಹಿತ್ಯ ಮಾನವೀಯ ಮೌಲ್ಯವನ್ನು ಸಾರುತ್ತದೆ.

ಮನುಷ್ಯ ಮನುಷತ್ವವನ್ನು ಹೊಂದಲು ಕುವೆಂಪುರವರ ಸಾಹಿತ್ಯ ಓದಲೇಬೇಕು ಎಂದು ಅವರು ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿದ್ದ ಸಿಂಡಿಕೇಟ್ ಸದಸ್ಯ ಡಾ. ನಟರಾಜ ಬೂದಾಳು ಅವರು ಮಾತನಾಡಿ, ಕುವೆಂಪು ಅವರ ಸಾಹಿತ್ಯ ಮಾನವೀಯ ಒಲುಮೆಯ ಆಗರ. ಈ ನಿಟ್ಟಿನಲ್ಲಿ ಮಹಿಳೆಯರನ್ನು ಕುವೆಂಪುರವರ ಓದಿಗೆ ಸ್ಪಂದಿಸುವುದು ಅತ್ಯಂತ ಅವಶ್ಯಕವಾಗಿದೆ. ಓದು ಸಹಜವಾದ ಓದಾಗಿರದೇ ವ್ಯಕ್ತಿತ್ವ ವಿಕಸನವನ್ನು ಮಾಡುವ ಓದಾಗಬೇಕು. ಅಂತಹ ಓದನ್ನು ಕುವೆಂಪುರವರ ಸಾಹಿತ್ಯದಿಂದ ಪಡೆಯಬಹುದಾಗಿದೆ ಎಂದರು.

## ಸಂಜೀವಕುಮಾರ ಪಾಟೀಲಗೆ ಕರ್ನಾಟಕ ಯುವ ರತ್ನ ಪ್ರಶಸ್ತಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂಚೋಳಿ

ಬೆಂಗಳೂರಿನ ಕನ್ನಡ ಭವನ ನಯನ ಸಭಾಂಗಣದಲ್ಲಿ ಕರ್ನಾಟಕ ಪ್ರೆಸ್ ಕ್ಲಬ್ ವತಿಯಿಂದ ಹಮ್ಮಿಕೊಂಡ 2025ನೇ ವಾರ್ಷಿಕ ಪ್ರಶಸ್ತಿ ಸಮಾರಂಭದಲ್ಲಿ ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ವೀರಶೈವ ಲಿಂಗಾಯತ ಸಮಾಜದ ತಾಲ್ಲೂಕಾಧ್ಯಕ್ಷರು ಮತ್ತು ಪತ್ರಕರ್ತ ಸಂಜೀವಕುಮಾರ ಪಾಟೀಲರ ಸಮಾಜ ಸೇವೆ ಗುರುತಿಸಿ ಕರ್ನಾಟಕ ರಾಜ್ಯ ಯುವ ರತ್ನ ಪ್ರಶಸ್ತಿಯನ್ನು ಕನ್ನಡ ಚಲನಚಿತ್ರದ ಹಿರಿಯ ನಟಿರಾದ ಶೃತಿ ಅವರು ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಪಾಲನಹಳ್ಳಿ ಮಠದ ಪೂಜ್ಯ ಡಾ.ಸಿದ್ದರಾಜು ಸ್ವಾಮೀಜಿಗಳು,ದೇವರಾಜ ಅರಸು ನಿಗಮದ ರಾಜ್ಯ ಅಧ್ಯಕ್ಷ ಕೀರ್ತಿ ಗಣೇಶ, ಬೆಂಗಳೂರಿನ ಸಮಾಜ ಸೇವಕರದ ಮಹೇಂದ್ರ ಮುನ್ನೋಟ್,ರವಿ ಮಾಹಾದೇವ,ಕರ್ನಾಟಕ ಪ್ರೆಸ್ ಕ್ಲಬ್ ನ ರಾಜ್ಯಾಧ್ಯಕ್ಷ ದಯಾನಂದ ಎಂ,ಪ್ರೆಸ್ ಕ್ಲಬ್ ನ ಪ್ರಧಾನ ಕಾರ್ಯದರ್ಶಿ ರಮೇಶ ಎಸ್.ಜಿ, ಪ್ರೆಸ್ ಕ್ಲಬ್ ಮುಖ್ಯಸ್ಥ ಗಂಗಾಧರ, ಸೇರಿದಂತೆ ಅನೇಕ ಗಣ್ಯಮಾನ್ಯರಿದ್ದರು.

### ಪರಿಶಿಷ್ಟ ಜಾತಿ ಒಳ ಮೀಸಲಾತಿಗೆ ಮೇ 5ರಿಂದ ಗಣತಿ

## ಮೂರು ಹಂತಗಳಲ್ಲಿ ಪರಿಶಿಷ್ಟ ಜಾತಿ ಕುಟುಂಬಗಳ ಸಮೀಕ್ಷೆ

• ಉದಯವಾಹಿನಿ ಚಿತ್ರದುರ್ಗ

ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿ ಸಂಬಂಧ ಮೇ 05 ರಿಂದ ಪರಿಶಿಷ್ಟ ಜಾತಿ ಕುಟುಂಬಗಳ ಸಮೀಕ್ಷೆ ಕೈಗೊಳ್ಳಲಿದ್ದು, ಈ ಸಮೀಕ್ಷೆಯು ಮೂರು ಹಂತಗಳಲ್ಲಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದ್ದಾರೆ.



ಮೊದಲ ಹಂತದ ಸಮೀಕ್ಷೆಯನ್ನು ಮೇ 05 ರಿಂದ 17 ರವರೆಗೆ ಮನೆ-ಮನೆ ಭೇಟಿ ನೀಡಿ ಸಮೀಕ್ಷಾ ಕಾರ್ಯ ಕೈಗೊಳ್ಳುವುದು. ಎರಡನೇ ಹಂತವು ಮೇ 19 ರಿಂದ 21 ರವರೆಗೆ ಸಮೀಕ್ಷೆ ಬ್ಲಾಕ್‌ಗಳಲ್ಲಿ ವಿಶೇಷ ಶಿಬಿರಗಳನ್ನು ಕೈಗೊಂಡು, ಮನೆ ಭೇಟಿಯಲ್ಲಿ ಬಿಟ್ಟುಹೋದ ಪರಿಶಿಷ್ಟ ಜಾತಿ ಕುಟುಂಬಗಳ ಮಾಹಿತಿಯನ್ನು ಸಂಗ್ರಹಿಸುವುದು. ಮೂರನೇ ಹಂತ ಮೇ 19 ರಿಂದ 21 ರವರೆಗೆ ಸ್ವಯಂ ಘೋಷಣೆ (ಆನ್‌ಲೈನ್ ಮೂಲಕ) ಸಮೀಕ್ಷೆಗೆ ಮಾಹಿತಿ ಒದಗಿಸಬಹುದಾಗಿದೆ.

**ಸಮನ್ವಯ ಸಮಿತಿಗಳನ್ನು ರಚಿಸಿ**

ಸಮೀಕ್ಷಾ ಕಾರ್ಯದ ಪೂರ್ವಭಾವಿಯಾಗಿ ರಾಜ್ಯ ಮಟ್ಟದಲ್ಲಿ ನಡೆದ ತರಬೇತಿಗೆ ಚಿತ್ರದುರ್ಗ ಜಿಲ್ಲಾ ಹಂತದಿಂದ 03 ಮಾಸ್ಟರ್ ಟ್ರೈನರ್ಗಳನ್ನು ನಿಯೋಜಿಸಲಾಗಿದ್ದು, ಈ ಟ್ರೈನರ್ಗಳು 2025ರ ಏಪ್ರಿಲ್ 25ರಂದು ಬೆಂಗಳೂರಿನಲ್ಲಿ ನಡೆದ ತರಬೇತಿಯಲ್ಲಿ ಭಾಗವಹಿಸಿ, ಸಮೀಕ್ಷಾ ಕಾರ್ಯಗಳ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು 2025ರ ಏಪ್ರಿಲ್ 28ರಂದು ನಡೆದ ಜಿಲ್ಲಾ ಮಟ್ಟದ ತರಬೇತಿ ಕಾರ್ಯದಲ್ಲಿ 06 ತಾಲ್ಲೂಕುಗಳಿಂದ ನಿಯೋಜಿಸಿರುವ ತಾಲ್ಲೂಕು ಮಟ್ಟದ 30 ಮಾಸ್ಟರ್ ಟ್ರೈನರ್ಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ. ಮೇ 02ರಂದು ತಾಲ್ಲೂಕು ಹಂತದಲ್ಲಿ ತಾಲ್ಲೂಕು ಮಟ್ಟದ ಮಾಸ್ಟರ್ ಟ್ರೈನರ್ಗಳಿಂದ ಸಮೀಕ್ಷಾ ಕಾರ್ಯವನ್ನು ಕೈಗೊಳ್ಳುವ ಗಣತೀದಾರರಿಗೆ ಮತ್ತು ಮೇಲ್ವಿಚಾರಕರುಗಳಿಗೆ ತಹಶೀಲ್ದಾರ್ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳನ್ನೊಳಗೊಂಡ ತಾಲ್ಲೂಕು ಸಮನ್ವಯ ಸಮಿತಿಯ ನೇತೃತ್ವದಲ್ಲಿ ತರಬೇತಿಯನ್ನು ಆಯೋಜಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಪರಿಶಿಷ್ಟ ಜಾತಿ ಒಳ ಮೀಸಲಾತಿಯನ್ನು ಜಾರಿಗೊಳಿಸುವ ಸಂಬಂಧ ಕರ್ನಾಟಕ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಹೆಚ್.ಎನ್.ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಏಕ ಸದಸ್ಯ ಆಯೋಗವು 2025ರ ಮಾರ್ಚ್ 27ರಂದು ಮುಖ್ಯ ಮಂತ್ರಿಗಳಿಗೆ ಮಧ್ಯಂತರ ವರದಿಯನ್ನು ಸಲ್ಲಿಸಿದ್ದು. ಈ ವರದಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿರುವ ಉಪಜಾತಿಗಳ ವೈಜ್ಞಾನಿಕ ವರ್ಗೀಕರಣ ಮಾಡಲು ಹೊಸದಾಗಿ ಸಮೀಕ್ಷೆ ನಡೆಸಿ ದತ್ತಾಂಶವನ್ನು ಸಂಗ್ರಹಿಸುವ ಸಲುವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಅವರು ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮನ್ವಯ ಸಮಿತಿಗಳನ್ನು ರಚಿಸಿ ಆದೇಶಿಸಿದ್ದಾರೆ.

ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿ ವೇಳಾಪಟ್ಟಿಯನ್ವಯ ಸಮೀಕ್ಷಾ ಕಾರ್ಯವನ್ನು ಹಮ್ಮಿಕೊಳ್ಳಲಾಗಿದ್ದು, ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವ ಎಲ್ಲಾ ಪರಿಶಿಷ್ಟ ಜಾತಿ ಜನಾಂಗದವರು ಗಣತೀದಾರರಿಗೆ ಅಗತ್ಯ ಮಾಹಿತಿಯನ್ನು ನೀಡಿ ಸಮೀಕ್ಷಾ ಕಾರ್ಯ ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಸಮನ್ವಯ ಸಮಿತಿ ಅಧ್ಯಕ್ಷ ಟಿ.ವೆಂಕಟೇಶ್ ತಿಳಿಸಿದ್ದಾರೆ.

### ಅಧಿಕಾರಿಗಳ ನಿರ್ಲಕ್ಷ್ಯ, ಬಸ್ ಸಂಚಾರ ಇಲ್ಲದಿರುವುದರಿಂದ ಸಾರ್ವಜನಿಕರು ಪರದಾಟ

## ಹೊಸ ಬಸ್ ಮಾರ್ಗಗಳ ಸಂಚಾರಕ್ಕೆ ಸಾರ್ವಜನಿಕ ಒತ್ತಾಯ

• ಉದಯವಾಹಿನಿ ಸಾವಳಗಿ

ಸಾವಳಗಿ ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮದ ಬಹುದಿನಗಳ ಬೇಡಿಕೆಯಾದ ಸಾವಳಗಿ ಬಸ್ಸ ನಿಲ್ದಾಣ ಮಾಜಿ ಶಾಸಕರಾದ ಆನಂದ ನ್ಯಾಮಗೌಡರ ಸತತ ಪ್ರಯತ್ನದಿಂದ ಸಹಕಾರ ಗೊಂಡು ಇದರ ಸಂಪೂರ್ಣ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಂಡಿದ್ದಾರೆ.

ಸಾವಳಗಿ ಹೋಬಳಿಯ ಅನೇಕ ಗ್ರಾಮಸ್ಥರು ಸಾವಳಗಿಯಿಂದ ವಿಜಯಪುರ, ಬಾಗಲಕೋಟ, ಅಥಣಿ, ಜಮಖಂಡಿ, ಮಿರಜ ಹಾಗೂ ಇನ್ನಿತರೇ ಊರುಗಳಿಗೆ ಹೋಗಲು ಸಾವಳಗಿ ಬಸ್ಸ ನಿಲ್ದಾಣವನ್ನು ನೆಚ್ಚಿಕೊಂಡಿದ್ದಾರೆ. ಪ್ರತಿದಿನ ನೂರಾರು ಜನರಿಂದ ಬಸ್ ನಿಲ್ದಾಣ ಜನಜಂಗುಳಿಯಿಂದ ಕೂಡಿರುತ್ತದೆ. ಇನ್ನೂ ಸರಿಯಾದ ಬಸ್ ಸಂಚಾರ ಇಲ್ಲದಿರುವುದರಿಂದ ಸಾರ್ವಜನಿಕರು ಪರದಾಡುವಂತಾಗಿದ್ದಾರೆ.

ರಾತ್ರಿ ಎಂಟು ಗಂಟೆಯ ನಂತರ ಚಿಕ್ಕಲಕಿ ಕ್ರಾಸ್ ಹಾಗೂ ಜಮಖಂಡಿಯಿಂದ ಬಸ್ ಇರುವುದಿಲ್ಲ ಇದರಿಂದ ದೂರದ ಊರಿಗೆ ಹೋದ ಪ್ರಯಾಣಿಕರು ಹಿಂತಿರುಗಿ ಬರಬೇಕಾದರೇ ಪರದಾಡುವಂತಾಗಿದೆ ಆದಕಾರಣ ರಾತ್ರಿ 9:30 ಗಂಟೆಯವರೆಗೆ ಜಮಖಂಡಿ ಹಾಗೂ ಚಿಕ್ಕಲಕಿ ಕ್ರಾಸವರೆಗೆ ಬಸ್ಸುಗಳನ್ನು ಸಂಚರಿಸಬೇಕೆಂದು ಸಾರ್ವಜನಿಕರ ಒತ್ತಾಯವಾಗಿದೆ.

ಜಮಖಂಡಿಯಿಂದ ಸಾವಳಗಿ ಮಾರ್ಗವಾಗಿ ವಿಜಯಪುರ, ಮಿರಜ, ಪಂಢರಪುರದ ಹಾಗೂ ಜತ್ತ ಮಾರ್ಗದ ಬಸ್ಸಗಳನ್ನು ಮತ್ತು ಸ್ಥಳೀಯವಾಗಿ ಜಮಖಂಡಿಯಿಂದ- ಸಾವಳಗಿ- ತೆಲಸಂಗ, ಜಮಖಂಡಿಯಿಂದ ಸಾವಳಗಿ- ಬಬಲೇಶ್ವರ ಮತ್ತು ಸಾವಳಗಿ



ಉದಯವಾಹಿನಿ ಚಿತ್ರ

**ಹೊಸ ಮಾರ್ಗ ಸಂಚಾರಕ್ಕೆ ಒತ್ತಾಯ**

**ನಿಲ್ದಾಣ ಸದುಪಯೋಗ ಪಡೆದುಕೊಳ್ಳಬೇಕಾದರೇ ಹೊಸ ಮಾರ್ಗಗಳ ಸಂಚಾರ ಪ್ರಾರಂಭಿಸಬೇಕಾಗಿದೆ, ಈಗಾಗಲೇ ಸರ್ಕಾರದ ವತಿಯಿಂದ ಸಾವಳಗಿಯಿಂದ ಧರ್ಮಸ್ಥಳಕ್ಕೆ ಹೊಸ ಬಸ್ ಅನುಮೋದನೆ ಕೊಂಡಿದೆ ಆದರೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಇದುವರೆಗೂ ಪ್ರಾರಂಭಗೊಂಡಿಲ್ಲಾ. ಇನ್ನೂ ಆಸ್ಪತ್ರೆ ಚಿಕಿತ್ಸೆಗಾಗಿ ಪಕ್ಕದ ರಾಜ್ಯದ ಮಿರಜ ಹಾಗೂ ಸಾಂಗಲಿಗಳಿಗೆ ಮತ್ತು ಬೆಂಗಳೂರು ಹಾಗೂ ಪಕ್ಕದ ಜಿಲ್ಲೆಯಾದ ವಿಜಯಪುರಿಗೆ ಈ ಭಾಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಸ್ಸುಗಳನ್ನು ನೆಚ್ಚಿ ಪ್ರಯಾಣಿಸುತ್ತಾರೆ. ಆದರೆ ಮಿರಜಗೆ ಬೇರೆ ಜಿಲ್ಲೆಯ ಎರಡು ಬಸ್ಸಗಳು ಇದ್ದರೂ ಸಾರ್ವಜನಿಕ ಪರದಾಡುವಂತಾಗಿದೆ. ಇನ್ನೂ ಇಲ್ಲಿಂದ ನೇರವಾಗಿ ಬೆಂಗಳೂರು, ವಿಜಯಪುರ ಹಾಗೂ ಮಿರಜಗೆ ಬಸ್ಸುಗಳು ಇರುವುದಿಲ್ಲ.**

ಯಿಂದ ಸತತವಾಗಿ 2-3 ಬಸ್ಸುಗಳನ್ನು ಬಾಗಲಕೋಟ, ವಿಜಯಪುರ ಹಾಗೂ ಧಾರವಾಡಗೆ ಹೋಗುವಂತಾಗಬೇಕು ಇನ್ನೂ ಧಾರ್ಮಿಕ ಕ್ಷೇತ್ರಗಳಾದ ಫಂಡರಪುರ, ಸವದತ್ತಿ, ಧರ್ಮಸ್ಥಳ, ತುಳಜಾಪುರ, ಶ್ರೀಶೈಲಗೆ ಈ ಭಾಗದ ಜನರು ಹೆಚ್ಚಿನ ಸಂಖ್ಯೆಯ ಹೋಗುವುದರಿಂದ ಈ ಧಾರ್ಮಿಕ ಕ್ಷೇತ್ರಗಳಿಗೂ ಪ್ರಾಯೋಗಿಕವಾಗಿ ಬಸ್ ಸಂಚಾರ ಪ್ರಾರಂಭಿಸಿಬೇಕು ಯಶಸ್ವಿಯಾದರೇ ಮುಂದುವರಿಸಬೇಕೆಂದು ಸಾರ್ವಜನಿಕರ ಒತ್ತಾಯವಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸಾರ್ವಜನಿಕ ಒತ್ತಾಯಕ್ಕೆ ಸ್ಪಂದಿಸಿ ಹೊಸ ಮಾರ್ಗದ ಬಸ್ಸುಗಳನ್ನು ಸಂಚರಿಸಿ ಸಾರ್ವಜನಿಕರಿಗೆ ಅನುವು ಮಾಡಿಕೊಡಬೇಕೆಂದು ಸಾರ್ವಜನಿಕರ ಒತ್ತಾಯವಾಗಿದೆ.

# ಕೆನಡಾ ಚುನಾವಣೆ ಫಲಿತಾಂಶ: ಜಯಭೇರಿ ಬಾರಿಸಿದ ಮಾರ್ಕ್ ಕಾರ್ನಿ

- ಕೆನಡಾ ಸಾರ್ವತ್ರಿಕ ಚುನಾವಣೆಯಲ್ಲಿ ಮಾರ್ಕ್ ಕಾರ್ನಿ ನೇತೃತ್ವದ ಲಿಬರಲ್ ಪಕ್ಷಕ್ಕೆ ಜಯ
- ಡೊನಾಲ್ಡ್ ಟ್ರಂಪ್ ಸುಂಕ ಯುದ್ಧ ವಿರೋಧಿ ನಾಯಕನಿಗೆ ಮಣೆ ಹಾಕಿದ ಕೆನಡಾದ ಜನತೆ
- ಖಲಿಸ್ತಾನ್ ಪರ ಹೋರಾಟಗಾರ ಜಗಮೀತ್ ಸಿಂಗ್‌ಗೆ ಕೆನಡಾ ಚುನಾವಣೆಯಲ್ಲಿ ಹೀನಾಯ ಸೋಲು

**ಒಟ್ಟಾವಾ:** ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದ್ದ ಕೆನಡಾ ಸಾರ್ವತ್ರಿಕ ಚುನಾವಣೆ 2025ರ ಫಲಿತಾಂಶ ಘೋಷಣೆಯಾಗಿದ್ದು, ಪ್ರಧಾನಮಂತ್ರಿ ಮಾರ್ಕ್ ಕಾರ್ನಿ ನೇತೃತ್ವದ ಲಿಬರಲ್ ಪಕ್ಷ ಜಯಭೇರಿ ಬಾರಿಸಿದೆ. ಮಾರ್ಕ್ ಕಾರ್ನಿ ಅವರ ಗೆಲುವು ನಿರೀಕ್ಷಿತವಾಗಿದ್ದು, ಡೊನಾಲ್ಡ್ ಟ್ರಂಪ್ ಅವರ ಸುಂಕ ಯುದ್ಧವನ್ನು ಅತ್ಯುಗ್ರವಾಗಿ ವಿರೋಧಿಸುತ್ತಿರುವ ನಾಯಕನೋರ್ವ ಕೆನಡಾವನ್ನು ಮುನ್ನಡೆಸಲಿದ್ದಾರೆ.

**ಜಗಮೀತ್ ಸಿಂಗ್ ಸೋಲು**

**ಇನ್ನು ಕೆನಡಾದ ಸಾರ್ವತ್ರಿಕ ಚುನಾವಣೆಯಲ್ಲಿ ಖಲಿಸ್ತಾನ ಪರ ಹೋರಾಟಗಾರ ಮತ್ತು ಎನ್‌ಡಿಪಿ ಪಕ್ಷದ ಮುಖ್ಯಸ್ಥ ಜಗಮೀತ್ ಸಿಂಗ್ ಸೋಲು ಕಂಡಿದ್ದಾರೆ. ತಮ್ಮ ಚುನಾವಣಾ ಸೋಲನ್ನು ಆಘಾತಕಾರಿ ಎಂದು ಕರೆದಿರುವ ಜಗಮೀತ್ ಸಿಂಗ್, ಕೆನಡಾದ ಸಿಖ್ ಸಮುದಾಯದ ವಿಶ್ವಾಸಗಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇವೆ ಎಂದು ಹೇಳಿದ್ದಾರೆ. ಸದ್ಯ ಜಗಮೀತ್ ಸಿಂಗ್ ಅವರು ಎನ್‌ಡಿಪಿ ಮುಖ್ಯಸ್ಥ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಅವರ ಪಕ್ಷ ಈ ಬಾರಿಯ ಚುನಾವಣೆಯಲ್ಲಿ ಕೇವಲ ಏಳು ಸ್ಥಾನಗಳನ್ನ ಗೆಲ್ಲುವ ನಿರೀಕ್ಷೆ ಇದೆ. ಇದರಿಂದ ಎನ್‌ಡಿಪಿಯು ಕೆನಡಾದಲ್ಲಿ ಪಕ್ಷದ ಸ್ಥಾನಮಾನವನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ.**

ಕೆನಡಾದ ಸಿಟಿವಿ ನ್ಯೂಸ್ ಮತ್ತು ಸಿಬಿಸಿ ಅಂದಾಜಿನ ಪ್ರಕಾರ, 165 ಚುನಾವಣಾ ಜಿಲ್ಲೆಗಳಲ್ಲಿ ಲಿಬರಲ್ ಪಕ್ಷ ಸ್ಪಷ್ಟ ಮುನ್ನಡೆ ಸಾಧಿಸಿದೆ. ಆದರೆ ಪ್ರತಿಸ್ಪರ್ಧಿ ಕನ್ಸರ್ವೇಟಿವ್ ಪಕ್ಷ ಕೇವಲ 147 ಸ್ಥಾನಗಳನ್ನು ಗಳಿಸುವಲ್ಲಿ ಯಶಸ್ವಿಯಾಗಿದೆ. ವೈವ್ಸ್-ಫ್ರಾಂಕೋಯಿಸ್ ಬ್ಲಾಂಚೆಟ್ ನೇತೃತ್ವದ ಬ್ಲಾಕ್ ಕ್ವಿಬೆಕೊಯಿಸ್ 23 ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆಯಿದ್ದು, ಖಲಿಸ್ತಾನ್ ಪರ ಹೋರಾಟಗಾರ ಜಗ್‌ಮೀತ್ ಸಿಂಗ್ ಅವರ ಎನ್‌ಡಿಪಿ ಕೇವಲ 7 ಸ್ಥಾನಗಳಿಗೆ ತೃಪ್ತಿಪಡಬೇಕಾಗಬಹುದು. ಅಲ್ಲದೇ ಈ ಅಂಕಿಸಂಖ್ಯೆಯಗಳಲ್ಲಿ ಅಂತಿಮ ಫಲಿತಾಂಶ ಘೋಷಣೆ ಬಳಿಕ ಹೆಚ್ಚು-ಕಡಿಮೆಯಾಗಬಹುದು ಎಂದೂ ಸ್ಪಷ್ಟಪಡಿಸಲಾಗಿದೆ. ಪ್ರಧಾನಿ ಮಾರ್ಕ್ ಕಾರ್ನಿ ನೇತೃತ್ವದ ಲಿಬರಲ್ ಪಕ್ಷದ ಜಯ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಅಪಥ್ಯವಾಗಲಿದೆ ಎಂದು ಚುನಾವಣಾ ತಜ್ಞರು ಅಂದಾಜಿಸಿದ್ದಾರೆ.




ಏಕೆಂದರೆ ಮಾರ್ಕ್ ಕಾರ್ನಿ ಅವರು ಡೊನಾಲ್ಡ್ ಟ್ರಂಪ್ ಅವರ ಸುಂಕ ಸಮರದ ಕಟು ಟೀಕಾಕಾರರಾಗಿದ್ದು, ಸುಂಕ ಸಮರದಲ್ಲಿ ಅಮೆರಿಕದ ಮುಂದೆ ಕೆನಡಾ ತಲೆಬಾಗುವುದಿಲ್ಲ ಎಂದು ಘೋಷಿಸಿದ್ದಾರೆ. ಕೆನಡಾ ಚುನಾವಣೆಯಲ್ಲಿ ಗೆಲುವಿನ ನಗೆ ಬೀರುತ್ತಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಕಠಿಣ ಸಂದೇಶ ರವಾನಿಸಿರುವ ಮಾರ್ಕ್ ಕಾರ್ನಿ, ಅಮೆರಿಕದ ದ್ರೋಹದ ಪಾಠಗಳನ್ನು ಕೆನಡಾ ಎಂದಿಗೂ ಮರೆಯುವುದಿಲ್ಲ ಎಂದು ಸೂಚ್ಯವಾಗಿ ಹೇಳಿದ್ದಾರೆ.

ಕಾರ್ನಿ ಇದುವರೆಗೂ ಯಾವುದೇ ಚುನಾವಣೆಯನ್ನು ಎದುರಿಸಿದ ಅನುಭವ ಹೊಂದಿಲ್ಲ. ಲಿಬರಲ್ ಪಕ್ಷ ಕೇವಲ ಜಸ್ಟಿನ್ ಟ್ರುಡೋ ಅವರ ರಾಜೀನಾಮೆಯಿಂದ ತೆರವಾದ ಪ್ರಧಾನಿ ಸ್ಥಾನಕ್ಕೆ ಮಾರ್ಕ್ ಕಾರ್ನಿ ಅವರನ್ನು ನೇಮಿಸಿತ್ತು. ಆದರೆ ಮಾರ್ಕ್ ಕಾರ್ನಿ ಇದೀಗ ಪಕ್ಷವನ್ನು ಸತತ ನಾಲ್ಕನೇ ಜಯದತ್ತ ಕೊಂಡೊಯ್ದಿದ್ದು, ತಮ್ಮ ಮೊದಲ ಚುನಾವಣಾ ಸ್ಪರ್ಧೆಯಲ್ಲೇ ಭಾರೀ ಯಶಸ್ಸು ಗಳಿಸಿದ್ದಾರೆ. ಆದಾಗ್ಯೂ, ಸರಳ ಬಹುಮತಕ್ಕೆ ಬೇಕಾದ 172 ಜಿಲ್ಲೆಗಳ ಗೆಲುವನ್ನು ಮಾರ್ಕ್ ಕಾರ್ನಿ ನೇತೃತ್ವದ ಲಿಬರಲ್ ಪಕ್ಷ ಇನ್ನೂ ಗಳಿಸಿಲ್ಲ. ಆಡಳಿತಾರೂಢ ಪಕ್ಷ ಈ ಬಹುಮತವನ್ನು ಗಳಿಸುವ ನೀರಕ್ಷೆ ಕಡಿಮೆ ಇದೆಯಾದರೂ, ಸರ್ಕಾರ ರಚನೆಗೆ ತೊಂದರೆ ಇಲ್ಲ ಎಂದು ಚುನಾವಣಾ ವಿಶ್ಲೇಷಕರು ಹೇಳಿದ್ದಾರೆ.

**ಡೊನಾಲ್ಡ್ ಟ್ರಂಪ್‌ಗೆ ಸಂಕಷ್ಟ?**

ಸದ್ಯ ಮಾರ್ಕ್ ಕಾರ್ನಿ ಅವರು ಲಿಬರಲ್ ಪಕ್ಷದ ಪ್ರಧಾನಿಯಾಗಿ ಕೆನಡಾವನ್ನು ಮುನ್ನಡೆಸಲಿರುವುದು ಬಹುತೇಕ ಖಚಿತವಾಗಿದ್ದು, ಮಾರ್ಕ್ ಕಾರ್ನಿ ಅವರ ಆಡಳಿತಾವಧಿಯಲ್ಲಿ ಕೆನಡಾ-ಭಾರತ ನಡುವಿನ ಸಂಬಧ ಸುಧಾರಣೆಯಾಗಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ. ಡೊನಾಲ್ಡ್ ಟ್ರಂಪ್ ತಮ್ಮ ಭಾಷಣದಲ್ಲಿ ಅಮೆರಿಕಕ್ಕೆ 'ಡ್ರಿಲ್ ಬೇಬಿ ಡ್ರಿಲ್' ಎಂದು ಕರೆ ಕೊಟ್ಟಿದ್ದರು.

ಆ ಮೂಲಕ ತೈಲವನ್ನು ಬಗೆದು ತೆಗೆಯುವ ಕಾರ್ಯಾಚರಣೆಗೆ ಕೈಹಾಕಿದ್ದರು. ಈಗ ಮಾರ್ಕ್ ಕಾರ್ನಿ ಬಿಲ್ಡ್ ಬೇಬಿ ಬಿಲ್ಡ್' ಎಂದು ಕರೆ ಕೊಟ್ಟಿದ್ದಾರೆ. ಕೆನಡಾ ಜನರು ಒಗ್ಗಟ್ಟಾಗಿ ದೇಶವನ್ನು ಕಟ್ಟೋಣ ಎಂದಿದ್ದಾರೆ. ಅಮೆರಿಕಕ್ಕೆ ನಮ್ಮ ನೆಲ, ನೀರು ಬೇಕಿದೆ. ಆದರೆ, ಟ್ರಂಪ್ ಆಸೆ ಯಾವತ್ತಿಗೂ ನೆರವೇರೋದಿಲ್ಲ ಎಂದು ದೊಡ್ಡ ದನಿಯಲ್ಲಿ ಹೇಳಿದರು. ಅವರ ಮಾತುಗಳಿಗೆ ಲಿಬರಲ್ ಪಾರ್ಟಿಯ ಬೆಂಬಲಿಗರ ಉದ್ಘಾರ ಮೊಳಗಿಸಿದರು.

## ಮಿನಿ ನ್ಯೂಸ್

### ಮನೆ ಕೆಡವಿದವರನ್ನು ಸುಮ್ಮನೆ ಬಿಡಲ್ಲ ಟಿಆರ್‌ಎಫ್ ಪ್ರತಿಕಾರದ ಎಚ್ಚರಿಕೆ

**ಶ್ರೀನಗರ:** ನಮ್ಮ ಮನೆಗಳನ್ನು ನಾಶಮಾಡ್ತೀರಾ, ಇದಕ್ಕೆ ತಕ್ಕ ಪ್ರತೀಕಾರ ತೀರಿಸಿಕೊಳ್ಳುತ್ತೇವೆ ಎಂದು ಟಿಆರ್‌ಎಫ್ ಉಗ್ರರು ಭಾರತಕ್ಕೆ ಎಚ್ಚರಿಕೆ ನೀಡಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಅನಂತ್‌ನಾಗ್ ಜಿಲ್ಲೆಯಲ್ಲಿರುವ ಪಹಲ್ಗಾಮ್‌ನಲ್ಲಿ ಉಗ್ರರು ದಾಳಿ ನಡೆಸಿ 26 ಮಂದಿಯನ್ನು ಹತ್ಯೆಗೈದಿದ್ದರು. ಅವರೆಲ್ಲರೂ ಹಿಂದೂಗಳ ಮೇಲೆ ದಾಳಿ ನಡೆಸಿದ್ದರು.

ಮೊದಲು ಟಿಆರ್‌ಎಫ್ ಈ ದಾಳಿಯ ಹೊಣೆ ಹೊತ್ತುಕೊಂಡು ನಂತರ ಉಲ್ಟಾ ಹೊಡೆದಿತ್ತು. ಯಾರೋ ನಮ್ಮ ವೆಬ್‌ಸೈಟ್ ಹ್ಯಾಕ್ ಮಾಡಿದ್ದಾರೆ. ನಮಗೂ ದಾಳಿಗೂ ಸಂಬಂಧವೇ ಇಲ್ಲ ಎಂದು ಹೇಳಿತ್ತು. ಇದೀಗ ಅದರ ಕಮಾಂಡರ್ ಅಹ್ಮದ್ ಸಲಾರ್ ಅವರ ಸಂದೇಶವೊಂದು ಸಾಮಾಜಿಕ ಜಾಲತಾಣಗಳಲ್ಲಿ ಕಾಣಿಸಿಕೊಂಡಿದ್ದು, ಕಾಶೀರದಲ್ಲಿ ನಮ್ಮ ಮನೆಗಳನ್ನು ನಾಶ ಮಾಡುತ್ತಿರುವ ಸೇನೆ ಮತ್ತು ಜಮ್ಮು ಕಾಶ್ಮೀರ ಪೊಲೀಸರ ವಿರುದ್ಧ ಸೇಡು ತೀರಿಸಿಕೊಳ್ಳುತ್ತೇವೆ ಅವರನ್ನು ಸುಮ್ಮನೆ ಬಿಡುವುದಿಲ್ಲ ಎಂದು ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ.

### ಗಡಿಯಲ್ಲಿ ಪಾಕ್‌ನಿಂದ ಅಪ್ರಚೋದಿತ ದಾಳಿ

**ಜಮ್ಮು:** ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆ ಬಳಿ ಪಾಕಿಸ್ತಾನ ಪಡೆಗಳು ಸತತ ಐದನೇ ರಾತ್ರಿ ಕದನ ವಿರಾಮವನ್ನು ಉಲ್ಲಂಘಿಸಿದ್ದು, ಜಮ್ಮು ಜಿಲ್ಲೆಯ ಅಖ್ನೂರ್ ಸೆಕ್ಟರ್ ವರೆಗೆ ಕದನ ವಿರಾಮವನ್ನು ವಿಸ್ತರಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳೆದ ವಾರ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ನವದೆಹಲಿ ಮತ್ತು ಇಸ್ಲಾಮಾಬಾದ್ ನಡುವಿನ ಉದ್ವಿಗ್ನತೆಯ ಮಧ್ಯೆ ಪಾಕಿಸ್ತಾನವು ನಿಯಂತ್ರಣ ರೇಖೆ ಉದ್ದಕ್ಕೂ ಸತತ ಐದನೇ ರಾತ್ರಿ ಅಪ್ರಚೋದಿತ ಗುಂಡಿನ ದಾಳಿ ನಡೆಸಿದೆ. ಏಪ್ರಿಲ್ 28-29 ರ ರಾತ್ರಿ, ಪಾಕಿಸ್ತಾನ ಸೇನೆಯು ಕುಪ್ವಾರಾ ಮತ್ತು ಬಾರಾಮುಲ್ಲಾ ಜಿಲ್ಲೆಗಳ ಎದುರಿನ ಪ್ರದೇಶಗಳಲ್ಲಿ ಮತ್ತು ಅಖ್ನೂರ್ ಸೆಕ್ಟರ್‌ನಲ್ಲಿ ನಿಯಂತ್ರಣ ರೇಖೆಯ ಉದ್ದಕ್ಕೂ ಅಪ್ರಚೋದಿತ ಸಣ್ಣ ಶಸ್ತ್ರಾಸ್ತ್ರ ಗುಂಡಿನ ದಾಳಿ ನಡೆಸಿತು ಎಂದು ರಕ್ಷಣಾ ವಕ್ತಾರರು ತಿಳಿಸಿದ್ದಾರೆ. ಪ್ರಚೋದನೆಗೆ ಭಾರತೀಯ ಸೇನೆಯು ಅಳೆಯುವ ಮತ್ತು ಪರಿಣಾಮಕಾರಿ ರೀತಿಯಲ್ಲಿ ಪ್ರತಿಕ್ರಿಯಿಸಿದೆ ಎಂದು ಅವರು ಹೇಳಿದರು.

### ಭಾರತ-ಪಾಕ್ ನಡುವಿನ ಮಾತುಕತೆಗೆ ನೆರವು: ವಿಶ್ವಸಂಸ್ಥೆ ಮುಖ್ಯಸ್ಥ ಗುಟೇರಸ್

**ವಿಶ್ವಸಂಸ್ಥೆ:** ಭಾರತ ಮತ್ತು ಪಾಕಿಸ್ತಾನದ ನಡುವಿನ ಪರಿಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ವಿಶ್ವಸಂಸ್ಥೆಯ ಮುಖ್ಯಸ್ಥ ಆಂಟೋನಿಯೊ ಗುಟೆರೆಸ್ ಅವರು ಉಭಯ ರಾಷ್ಟ್ರಗಳ ನಡುವಿನ ಶಾಂತಿ ಮಾತುಕತೆಗೆ ನಾವು ಮಧ್ಯಸ್ಥಿಕೆ ವಹಿಸಲು ಸಿದ್ಧ ಎಂದು ಘೋಷಿಸಿದ್ದಾರೆ. ಪ್ರಧಾನ ಕಾರ್ಯದರ್ಶಿ ಗುಟೆರೆಸ್ ಅವರು, ಭಾರತ ಮತ್ತು ಪಾಕಿಸ್ತಾನದ ನಡುವಿನ ಪರಿಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಗರಿಷ್ಠ ಸಂಯಮವನ್ನು ಕಾಪಾಡಿಕೊಳ್ಳಲು ಮತ್ತು ಯಾವುದೇ ಉಲ್ಬಣವನ್ನು ತಪ್ಪಿಸಲು ಅವರು ಎರಡೂ ಸರ್ಕಾರಗಳನ್ನು ಬಲವಾಗಿ ಒತ್ತಾಯಿಸುತ್ತಾರೆ ಎಂದು ಅವರ ವಕ್ತಾರರ ಕಚೇರಿಯ ಹೇಳಿಕೆ ತಿಳಿಸಿದೆ. ಅತ್ಯಂತ ಸವಾಲಿನ ಸಮಸ್ಯೆಗಳನ್ನು ಸಹ ಅರ್ಥಪೂರ್ಣ ಮತ್ತು ರಚನಾತ್ಮಕ ಮಾತುಕತೆಯ ಮೂಲಕ ಶಾಂತಿಯುತವಾಗಿ ಪರಿಹರಿಸಬಹುದು ಎಂಬ ತಮ್ಮ ದೃಢ ನಂಬಿಕೆಯನ್ನು ಗುಟೆರೆಸ್ ಪುನರುಚ್ಚರಿಸುತ್ತಾರೆ.

### ಪಹಲ್ಗಾಮ್ ದಾಳಿಯಲ್ಲಿ ಮೃತಪಟ್ಟವರಿಗೆ ರಷ್ಯಾದಲ್ಲಿ ಶ್ರದ್ಧಾಂಜಲಿ

**ಮಾಸ್ಕೋ:** ರಷ್ಯಾ ಒಕ್ಕೂಟದ ಭಾರತೀಯ ರಾಯಭಾರಿ ವಿನಯ್ ಕುಮಾರ್ ಅವರ ನೇತೃತ್ವದಲ್ಲಿ ಮಾಸ್ಕೋ ಮೂಲದ ಭಾರತೀಯ ವಲಸಿಗರು ಪಹಲ್ಗಾಮ್ ದಾಳಿಯಲ್ಲಿ ಮೃತಪಟ್ಟ 26 ಮಂದಿಗೆ ಒಂದು ನಿಮಿಷ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು.

ಭಾರತೀಯ ರಾಯಭಾರ ಕಚೇರಿಯ ಕಿಕ್ಕಿರಿದ ಡಿಪಿ ಧಾರ್ ಹಾಲ್‌ನ್ನಲ್ಲಿ, ಪದ್ಮಶ್ರೀ ಪುರಸ್ಕೃತ ಮತ್ತು ಇನ್ಸ್ಟಿಟ್ಯೂಟ್ ಆಫ್ ಓರಿಯಂಟಲ್ ಸ್ಟಡೀಸ್ ಅಂಡ್ ರಿಸರ್ಚ್ನ ಭಾರತ ಕೇಂದ್ರದ ಮುಖ್ಯಸ್ಥೆ ಟಟಿಯಾನಾ ಶೌಮ್ಯಾನ್ ಅವರು ಭಯೋತ್ಪಾದನೆಯನ್ನು ಎದುರಿಸುವಲ್ಲಿ ಭಾರತದ ಜನರೊಂದಿಗೆ ಒಗ್ಗಟ್ಟನ್ನು ವ್ಯಕ್ತಪಡಿಸಿದರು.


ಕಳೆದ ವಾರ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ 26 ಜನರು ಸಾವನ್ನಪ್ಪಿದ್ದರು. ರಾಯಭಾರಿ ಕುಮಾರ್ ಅವರು ನಾಗರಿಕರ ಮೇಲೆ ನಡೆದ ಭೀಕರ ಭಯೋತ್ಪಾದಕ ದಾಳಿಯ ಬಗ್ಗೆ ದುಃಖ ವ್ಯಕ್ತಪಡಿಸಿದರು.

ಭಾರತದಂತಹ ಬಹುತ್ವದ ಸಮಾಜವನ್ನು ಹೊಂದಿರುವ ಪ್ರಜಾಪ್ರಭುತ್ವ ದೇಶದಲ್ಲಿ, ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿರುವುದು ಸಹಜ ಎಂದು ಅವರು ಹೇಳಿದರು.

## ತನ್ನ ಕಾಲಿನ ಮೇಲೆ ತಾನೇ ಕಲ್ಲು ಹಾಕಿಕೊಂಡ ಪಾಕಿಸ್ತಾನ

### ಏರ್‌ಸ್ಪೇಸ್ ಮುಚ್ಚಿ ಭಾರತಕ್ಕೆ ಶಾಕ್ ನೀಡಲು ಹೋಗಿ ಪಾಪರ್ ಆದ ಪಾಕ್

- ಭಾರತಕ್ಕೆ ಶಾಕ್ ನೀಡಲು ಹೋಗಿ ಪಾಪರ್ ಆಗುವತ್ತ ಪಾಕಿಸ್ತಾನ
- ಏರ್‌ಸ್ಪೇಸ್ ಮುಚ್ಚಿ ಬರುವ ಆದಾಯಕ್ಕೆ ಕಲ್ಲು ಹಾಕಿಕೊಂಡ ಪಾಕ್
- ಪಹಲ್ಗಾಮ್ ದಾಳಿಯ ಬಳಿಕ ಭಾರತೀಯ ವಿಮಾನಗಳಿಗೆ ಪಾಕ್ ಏರ್ ಸ್ಪೇಸ್ ಕ್ಲೋಸ್



**ಹೊಸದಿಲ್ಲಿ :** ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ಸಂಬಂಧಿಸಿದಂತೆ ಭಾರತ ಪಾಕಿಸ್ತಾನದ ವಿರುದ್ಧ ಹಲವು ಪ್ರತೀಕಾರದ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಇದಕ್ಕೆ ಪ್ರತಿಯಾಗಿ ಏನಾದ್ರೂ ಮಾಡ್ಬೇಕಲ್ಲ ಎಂದು ಪಾಕಿಸ್ತಾನ ಕೂಡ ಹಲವು ಕ್ರಮಗಳನ್ನು ಕೈಗೊಂಡಿದೆ. ಇದರಲ್ಲಿ ಭಾರತದ ವಿಮಾನಯಾನ ವಲಯಕ್ಕೆ ನಷ್ಟವನ್ನುಂಟು ಮಾಡುವ ಉದ್ದೇಶದಿಂದ ಭಾರತೀಯ ವಿಮಾನಗಳಿಗೆ ತನ್ನ ಏರ್‌ಸ್ಪೇಸ್ ಅನ್ನು ಪಾಕಿಸ್ತಾನ ಮುಚ್ಚಿದೆ. ಆದರೆ, ಇದು ಭಾರತಕ್ಕೆ ತೊಂದರೆ ಸೃಷ್ಟಿಸುವ ಬದಲು ಪಾಕಿಸ್ತಾನಕ್ಕೆ ಭಾರೀ ನಷ್ಟವನ್ನುಂಟು ಮಾಡುತ್ತಿದೆ. ಈ ಮೂಲಕ ಪಾಕಿಸ್ತಾನ ತನ್ನ ಕಾಲಿಗೆ ತಾನೇ ಗುಂಡು ಹಾರಿಸಿಕೊಂಡಿದೆ.

ಹೌದು, ಭಾರತೀಯ ವಿಮಾನಗಳಿಗೆ ತನ್ನ ಏರ್ ಸ್ಪೇಸ್ ಮುಚ್ಚಿರುವ ಪಾಕಿಸ್ತಾನ ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿಕೊಂಡಿದ್ದು, ಓವರ್‌ಫ್ಲೈಟ್ ಶುಲ್ಕದಿಂದ ಗಳಿಸುವ ಆದಾಯಕ್ಕೆ ಕೊಕ್ಕೆ ಬಿದ್ದಿದೆ. ವಿಶ್ವದ ಮೂರನೇ ಅತಿದೊಡ್ಡ ಮತ್ತು ವೇಗವಾಗಿ ಬೆಳೆಯುತ್ತಿರುವ ವಾಯುಯಾನ ಮಾರುಕಟ್ಟೆಯಾದ ಭಾರತದಿಂದ ಬರುತ್ತಿದ್ದ ಓವರ್‌ಫ್ಲೈಟ್ ಶುಲ್ಕದ ಆದಾಯ ಈಗ ಪಾಕಿಸ್ತಾನಕ್ಕೆ ಸಿಗುತ್ತಿಲ್ಲ. ಇದರಿಂದ ಪಾಕಿಸ್ತಾನಕ್ಕೆ ಲಕ್ಷಾಂತರ ಡಾಲರ್ ನಷ್ಟವಾಗುತ್ತಿದೆ.

ಈ ಮೂಲಕ ಭಾರತಕ್ಕೆ ಎಂದು ತೋಡಿದ್ದ ಹಳ್ಳದಲ್ಲಿ ಪಾಕಿಸ್ತಾನ ತಾನೇ ಬಿದ್ದಿದೆ. ಓವರ್‌ಫ್ಲೈಟ್ ಶುಲ್ಕದಿಂದ ಪ್ರತಿವರ್ಷ ಪಾಕಿಸ್ತಾನ ನೂರಾರು ಮಿಲಿಯನ್ ಡಾಲರ್ ಗಳಿಸುತ್ತಿತ್ತು. ಆದರೆ, ಈಗ ತನ್ನ ಮೂರ್ಖತನದಿಂದ ಅದನ್ನು ಕಳೆದುಕೊಂಡು ಮತ್ತಷ್ಟು ಬಿಕಾರಿಯಾಗುವ ಕಡೆ ವಾಲಿದೆ.

**ಓವರ್‌ಫ್ಲೈಟ್ ಶುಲ್ಕದಿಂದ ಬರುತ್ತಿದ್ದ ಆದಾಯಕ್ಕೆ ಕೊಕ್ಕೆ:** ಭಾರತದಿಂದ ಯುರೋಪ, ಅಮೆರಿಕ ಸೇರಿ ಪಶ್ಚಿಮ ರಾಷ್ಟ್ರಗಳ ಕಡೆ ಹೆಚ್ಚಿನ ಸಂಖ್ಯೆಯ ವಿಮಾನಗಳು ಹಾರಾಡುತ್ತಿವೆ. ಇವೆಲ್ಲಾ ಪಾಕಿಸ್ತಾನದ ಮೇಲೆಯೇ ಹೋಗುತ್ತಿದ್ದವು. ಈ ವೇಳೆ ಅವೆಲ್ಲಾ ಓವರ್‌ಫ್ಲೈಟ್ ಶುಲ್ಕವನ್ನು ಪಾಕಿಸ್ತಾನಕ್ಕೆ ಪಾವತಿಸುತ್ತಿದ್ದವು. ಆದರೆ, ಈಗ ಭಾರತೀಯ ವಿಮಾನಯಾನ ಸಂಸ್ಥೆಗಳಿಗೆ ತನ್ನ ಏರ್‌ಸ್ಪೇಸ್ ಅನ್ನು ನಿರ್ಬಂಧಿಸಿರುವುದು ಪಾಕ್‌ನ ಆದಾಯ ಕುಸಿತಕ್ಕೆ ಕಾರಣವಾಗಿದೆ. ಏವಿಯೇಷನ್‌ನಲ್ಲಿ ಭಾರತವಷ್ಟೇ ಇಲ್ಲ. ವಿದೇಶಿ ಸಂಸ್ಥೆಗಳು ಕೂಡ ಇದ್ದು, ಅವುಗಳಿಂದ ಪಾಕಿಸ್ತಾನ ಆದಾಯ ಗಳಿಸುತ್ತದೆ ಎಂಬುದು ಕೂಡ ವಾದ ಇದೆ. ಆದರೆ, ಭಾರತದಿಂದ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಏರ್ ಇಂಡಿಯಾ ಹಾಗೂ ಇಂಡಿಗೋದಂತಹ ಭಾರತೀಯ ವಿಮಾನಯಾನ ಸಂಸ್ಥೆಗಳೇ ಹೆಚ್ಚಿನ ಸೇವೆನೀಡುತ್ತಿರುವುದರಿಂದ ಪಾಕಿಸ್ತಾನ ಓವರ್‌ಫ್ಲೈಟ್ ಆದಾಯದಲ್ಲಿ ಪ್ರಮುಖ ಪಾಲನ್ನು ಕಳೆದುಕೊಂಡಿದೆ.

## ಪಾಕ್ ತಂದೆ, ಭಾರತೀಯ ತಾಯಿ: ಮಕ್ಕಳ ಪಾಡೇನು?



**ಭೋಪಾಲ್:** ಪಾಕಿಸ್ತಾನಿ ತಂದೆ ಮತ್ತು ಭಾರತೀಯ ತಾಯಿಗೆ ಜನಿಸಿದ ಮಕ್ಕಳನ್ನು ಏನು ಮಾಡುವುದು ಎನ್ನುವ ಗೊಂದಲದಲ್ಲಿ ಮಧ್ಯಪ್ರದೇಶದ ಅಧಿಕಾರಿಗಳು ಹೆಣಗಾಡುತ್ತಿದ್ದಾರೆ. ನಡೆದ ಪಹಲ್ಗಾಮ್ ದಾಳಿಯ ಬಳಿಕ ಕೇಂದ್ರ ಸರಕಾರವು ದೇಶ ಬಿಟ್ಟು ತೊಲಗಿ ಎಂಬ ಕಠಿಣ ಆದೇಶದ ನಡುವೆಯೇ ಮಧ್ಯಪ್ರದೇಶದ ಅಧಿಕಾರಿಗಳು ರಾಜ್ಯದಲ್ಲಿ ಪಾಕಿಸ್ತಾನಿ ತಂದೆ ಮತ್ತು ಭಾರತೀಯ ತಾಯಂದಿರಿಗೆ ಜನಿಸಿದ ಒಂಬತ್ತು ಮಕ್ಕಳ ಬಗ್ಗೆ ಗೊಂದಲದಲ್ಲಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಆದೇಶಕ್ಕೆ ಸ್ವಲ್ಪ ಮೊದಲು ಏಪ್ರಿಲ್ 25 ರಂದು ಭೋಪಾಲ್‌ನ್ನಲ್ಲಿ ದೀರ್ಘಾವಧಿ ವೀಸಾ (ಎಲ್‌ಟಿವಿ) ಗಾಗಿ ಅರ್ಜಿ ಸಲ್ಲಿಸಿದ ಪಾಕಿಸ್ತಾನಿ ವ್ಯಕ್ತಿಯ ಪ್ರಕರಣದಲ್ಲಿ ಅವರು ಪರಿಹಾರವನ್ನು ಹುಡುಕುತ್ತಿದ್ದಾರೆ ಎಂದು ಅಧಿಕಾರಿ ಮಾಹಿತಿ ನೀಡಿದರು. ಭಾರತೀಯ ತಾಯಂದಿರು ಮತ್ತು ಪಾಕಿಸ್ತಾನಿ ತಂದೆಯರಿಗೆ ಜನಿಸಿದ ಒಂಬತ್ತು ಮಕ್ಕಳ ಬಗ್ಗೆ ನಾವು ಕೇಂದ್ರದಿಂದ ಸಲಹೆ ಕೇಳಿದ್ದೇವೆ. ಇಂದೋರ್‌ನಲ್ಲಿ ನಾಲ್ಕು ಮಕ್ಕಳು, ಜಬಲ್ಪುರದಲ್ಲಿ ಮೂವರು ಮತ್ತು ಭೋಪಾಲ್‌ನಲ್ಲಿ ಇಬ್ಬರು ತಮ್ಮ ತಾಯಂದಿರೊಂದಿಗೆ ಇದ್ದಾರೆ. ಏಪ್ರಿಲ್ 25 ರಂದು ಎಲ್‌ಟಿವಿಗೆ ಅರ್ಜಿ ಸಲ್ಲಿಸಿದ ವ್ಯಕ್ತಿಯ ಬಗ್ಗೆಯೂ ನಾವು ಸಲಹೆ ಕೋರಿದ್ದೇವೆ ಎಂದು ಉನ್ನತ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಈ ಒಂಬತ್ತು ಮಕ್ಕಳು ಸೇರಿದಂತೆ ಮಧ್ಯಪ್ರದೇಶದಲ್ಲಿ ಕನಿಷ್ಠ 14 ಜನರು ದೇಶವನ್ನು ತೊರೆಯಬೇಕಿತ್ತು ಎಂದು ಅವರು ಹೇಳಿದರು. ಅವರಲ್ಲಿ ಮೂವರು ಭಾರತವನ್ನು ತೊರೆದು ಪಾಕಿಸ್ತಾನವನ್ನು ತಲುಪಿದ್ದಾರೆ. ಒಬ್ಬ ವ್ಯಕ್ತಿ ದೆಹಲಿಯಲ್ಲಿದ್ದಾರೆ. ಕೆಲವು ವಿಷಯಗಳಿಗೆ, ಇದನ್ನು ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ ಪರಿಶೀಲಿಸುತ್ತಿದೆ ಎಂದು ಅವರು ಹೇಳಿದರು. ಮತ್ತೊಬ್ಬ ಅಧಿಕಾರಿಯ ಪ್ರಕಾರ, ಮಧ್ಯಪ್ರದೇಶದಲ್ಲಿ ವಿವಿಧ ರೀತಿಯ ವೀಸಾಗಳಲ್ಲಿ 228 ಪಾಕಿಸ್ತಾನಿ ಪ್ರಜೆಗಳಿದ್ದಾರೆ. ಏತನ್ಮಧ್ಯೆ, ನಿಗದಿತ ಗಡುವಿನ ಪ್ರಕಾರ ಭಾರತವನ್ನು ತೊರೆಯಲು ವಿಫಲವಾದ ಯಾವುದೇ ಪಾಕಿಸ್ತಾನಿಯನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರ ಹೇಳಿದೆ.

## ಅಕ್ರಮ ವಲಸಿಗರ ವಿರುದ್ಧ ಬೃಹತ್ ಕಾರ್ಯಾಚರಣೆ



**ಅಹ್ಮದಾಬಾದ್:** ಕಾಶ್ಮೀರದ ಪೆಹಲ್ಗಾಮ್ ಉಗ್ರ ದಾಳಿ ಬಳಿಕ ದೇಶಾದ್ಯಂತ ಅಕ್ರಮ ವಲಸಿಗರ ವಿರುದ್ಧದ ಕಾರ್ಯಾಚರಣೆ ವ್ಯಾಪಕವಾಗಿದ್ದು, ಗುಜರಾತ್ ರಾಜಧಾನಿ ಅಹ್ಮದಾಬಾದ್‌ನಲ್ಲಿ ಬರೊಬ್ಬರಿ 6500ಕ್ಕೂ ಅಧಿಕ ಅಕ್ರಮ ಬಾಂಗ್ಲಾದೇಶಿಯರನ್ನು ವಶಕ್ಕೆ ಪಡೆಯಲಾಗಿದೆ.

ಮಂಗಳವಾರ ಅಹಮದಾಬಾದ್‌ನಲ್ಲಿ ಪಾಲಿಕೆ ಅಧಿಕಾರಿಗಳು ಮತ್ತು ಪೊಲೀಸರು ಜಿಲ್ಲೆಯಾದ್ಯಂತ ಬೃಹತ್ ಕಾರ್ಯಾಚರಣೆ ನಡೆಸಿ ಈವರೆಗೂ 6500 ಅಕ್ರಮ ಬಾಂಗ್ಲಾದೇಶಿಗರನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೆ ಅವರು ನಿವಾಸಿಸುತ್ತಿದ್ದ ಚಂದೋಲಾ ಕೆರೆಯ ಸಮೀಪದ ಮುಸ್ಲಿಂ ಬಹುಸಂಖ್ಯಾತ ಪ್ರದೇಶದಲ್ಲಿ ಬೃಹತ್ ನೆಲಸಮ ಮತ್ತು ಅಕ್ರಮ ಒತ್ತುವರಿ ಕಾರ್ಯಾಚರಣೆ ಪ್ರಾರಂಭಿಸಿದ್ದು, ಅಕ್ರಮ ಕಟ್ಟಡಗಳನ್ನು ನೆಲಸಮ ಮಾಡುತ್ತಿದ್ದಾರೆ.

ಅಹ್ಮದಾಬಾದ್ ಮಹಾನಗರ ಪಾಲಿಕೆಯು ಅಕ್ರಮ ಒತ್ತುವರಿ ಕಾರ್ಯಾಚರಣೆಯನ್ನು ಮುನ್ನಡೆಸುತ್ತಿದ್ದರೆ, ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಜಂಟಿ ಪೊಲೀಸ್ ಆಯುಕ್ತ-ಅಪರಾಧ ಶರದ್ ಸಿಂಘಾಲ್ ನೇತೃತ್ವದಲ್ಲಿ ಸುಮಾರು 2,000 ಪೊಲೀಸರನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ ಎಂದು ಪೊಲೀಸ್ ಆಯುಕ್ತ ಜಿ.ಎಸ್. ಮಲಿಕ್ ಹೇಳಿದರು.

ಎಎಂಸಿ ಮಂಗಳವಾರ ಮುಂಜಾನೆಯೇ 50 ತಂಡಗಳೊಂದಿಗೆ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಪ್ರತೀ ತಂಡದಲ್ಲೂ ತಲಾ ಒಂದೊಂದು ಜೆಸಿಬಿ ಯಂತ್ರಗಳೊಂದಿಗೆ ಕಾರ್ಯಾಚರಣೆ ನಡೆಸಲಾಯಿತು. ಚಂದೋಲಾ ಕೆರೆ ಆವರಣದಲ್ಲಿ ಕೊನೆಯದಾಗಿ ಅಕ್ರಮ ಒತ್ತವರಿ ತೆರವು ಕಾರ್ಯಾಚರಣೆಯನ್ನು 2009 ರಲ್ಲಿ ನಡೆಸಲಾಗಿತ್ತು. ಇದೀಗ ನಡೆಸಿದ ಸಮೀಕ್ಷೆಯಲ್ಲಿ ಸರ್ಕಾರಿ ಭೂಮಿಯನ್ನು ಮತ್ತೆ ಅತಿಕ್ರಮಿಸಲಾಗಿದೆ ಮತ್ತು ಸರೋವರದ ಸುತ್ತಲೂ ಗುಡಿಸಲುಗಳನ್ನು ನಿರ್ಮಿಸಲಾಗಿದೆ ಎಂದು ತಿಳಿದುಬಂದಿದೆ.

## ಪಾಕ್‌ಗೆ ಯಾವುದೇ ಶಸ್ತಾಸ್ತ್ರ ಕಳಿಸಿಲ್ಲ : ಟರ್ಕಿ



**ಸ್ಪಷ್ಟನೆ ನೀಡಿರುವ ಟರ್ಕಿ**

**ನವದೆಹಲಿ:** ಜಮ್ಮು ಮತ್ತು ಕಾಶೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರ ದಾಳಿ ಬಳಿಕ ಭಾರತ-ಪಾಕಿಸ್ತಾನ ನಡುವಿನ ಸಂಬಂಧ ಮತ್ತಷ್ಟು ಹಳಸಿದ್ದು, ಯಾವುದೇ ಕ್ಷಣದಲ್ಲಿ ಏನು ಬೇಕಾದರೂ ಯುದ್ಧ ಸಂಭವಿಸಬಹುದು ಎಂಬ ಪರಿಸ್ಥಿತಿ ನಿರ್ಮಾಣವಾಗಿರುವ ಬೆನ್ನಲ್ಲೇ, ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಕಳುಹಿಸಲು ಟರ್ಕಿ ತಿರಸ್ಕರಿಸಿದೆ. ಈ ಬೆಳವಣಿಗೆಯಿಂದಾಗಿ ಯುದ್ಧೋತ್ಸಾಹ ತೋರುತ್ತಿರುವ ಪಾಕಿಸ್ತಾನಕ್ಕೆ ಭಾರೀ ಹಿನ್ನಡೆಯುಂಟಾಗಿದೆ. ಭಾರತದೊಂದಿಗಿನ ಯುದ್ಧದ ಭೀತಿ ನಡುವೆಯೇ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುವುದಿಲ್ಲ ಎಂದು ಟರ್ಕಿ ಹೇಳಿದೆ.

ಪಾಕಿಸ್ತಾನಕ್ಕೆ ಆರು ಶಸ್ತ್ರಾಸ್ತ್ರ ವಿಮಾನಗಳನ್ನು ಟರ್ಕಿ ಕಳುಹಿಸಿದೆ ಎಂಬ ಹೇಳಿಕೆಯನ್ನು ಪಾಕ್ ಅಧ್ಯಕ್ಷೀಯ ಸಂವಹನ ನಿರ್ದೇಶನಾಲಯ ನಿರಾಕರಿಸಿದೆ. ಟರ್ಕಿಯಿಂದ ಬಂದ ಸರಕು ವಿಮಾನವು ಇಂಧನ ತುಂಬಿಸಲು ಪಾಕಿಸ್ತಾನದಲ್ಲಿ ಇಳಿಯಿತು. ನಂತರ ಅದು ತನ್ನ ಮಾರ್ಗದಲ್ಲಿ ಮುಂದುವರಿಯಿತು. ಅಧಿಕೃತ ಸಂಸ್ಥೆಗಳು ಬಿಟ್ಟು ಬೇರೆ ಯಾರಿಂದಲಾದರೂ ಊಹಾತ್ಮಕ ಹೇಳಿಕೆಗಳು, ಸುದ್ದಿಗಳು ಬಂದರೆ ಅವುಗಳನ್ನು ಪರಿಗಣಿಸಬಾರದು ಎಂದು ಟರ್ಕಿ ರಕ್ಷಣಾ ಸಚಿವಾಲಯ ತಿಳಿಸಿದೆ.

ಟರ್ಕಿ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಕಳುಹಿಸುತ್ತಿದೆ ಎಂದು ಹಲವಾರು ಸುದ್ದಿವಾಹಿನಿಗಳು ವರದಿ ಮಾಡಿದ್ದವು. ಬಳಿಕ ಟರ್ಕಿ ಸರಕು ವಿಮಾನದ ಚಿತ್ರವನ್ನು ಪೋಸ್ಟ್ ಮಾಡಿ ಸ್ಪಷ್ಟನೆ ನೀಡಿದೆ. ಟರ್ಕಿಯಲ್ಲಿ ಭೂಕಂಪ ಸಂಭವಿಸಿದ ಸಂದರ್ಭದಲ್ಲಿ ಭಾರತವು ಸಾಕಷ್ಟು ಸಹಾಯ ಮಾಡಿತ್ತು ಆದರೆ, ಭಾರತದ ರಕ್ತ ಹರಿಸಲು ಟರ್ಕಿಯು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಕಳುಹಿಸಿದೆ ಎನ್ನುವ ವಿಚಾರ ಎಲ್ಲೆಡೆ ಹರಿದಾಡಿತ್ತು. ಶಸ್ತ್ರಾಸ್ತ್ರಗಳನ್ನು ಹೊತ್ತ ಟರ್ಕಿಶ್ ವಾಯುಪಡೆಯ ಸಿ-130 ಹಕ್ಯುಲಸ್ ಮಿಲಿಟರಿ ಸಾರಿಗೆ ವಿಮಾನ ಭಾನುವಾರ ಕರಾಚಿಗೆ ಬಂದಿಳಿದಿತ್ತು ಎನ್ನಲಾಗಿತ್ತು, ಆದರೆ, ಈ ಬಗ್ಗೆ ಸ್ಪಷ್ಟನೆ ನೀಡಿರುವ ಟರ್ಕಿ, ನಾವು ಯಾವುದೇ ಶಸ್ತ್ರಾಸ್ತ್ರಗಳನ್ನು ಕಳುಹಿಸಿಲ್ಲ. ಟರ್ಕಿಯಿಂದ ಹೊರಟ ಸರಕು ವಿಮಾನ ಇಂಧನ ತುಂಬಲು ಪಾಕಿಸ್ತಾನದಲ್ಲಿ ಇಳಿದಿತ್ತು, ಯಾವುದೇ ಊಹಾಪೋಹಗಳಿಗೂ ಕಿವಿಗೊಡಬೇಡಿ ಎಂದು ಹೇಳಿದೆ.

ಕಳೆದ ವಾರ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಪ್ರದೇಶದಲ್ಲಿ ನಡೆದ ಭೀಕರ ಭಯೋತ್ಪಾದಕ ದಾಳಿಯನ್ನು ಅಂಕಾರಾ ಖಂಡಿಸಿತ್ತು. ಈ ದಾಳಿಯಲ್ಲಿ 26 ನಾಗರಿಕರು ಸಾವನ್ನಪ್ಪಿದ್ದರು, ಅನೇಕರು ಗಾಯಗೊಂಡಿದ್ದರು. ಜಮು ಮತ್ತು ಕಾಶ್ಮೀರದ ಮುಸ್ಲಿಂ ಬಹುಸಂಖ್ಯಾತ ಪ್ರದೇಶವು ಬಹಳ ಹಿಂದಿನಿಂದಲೂ ಭಾರತ ಮತ್ತು ಪಾಕಿಸ್ತಾನದ ನಡುವಿನ ಕಹಿ ಪ್ರಾದೇಶಿಕ ವಿವಾದದ ಕೇಂದ್ರಬಿಂದುವಾಗಿದೆ. ಪರಮಾಣು ಶಸ್ತ್ರಸಜ್ಜಿತ ಪ್ರತಿಸ್ಪರ್ಧಿಗಳ ನಡುವಿನ ಸಂಬಂಧಗಳು ಹದಗೆಟ್ಟಿದೆ. ಸಂಭಾವ್ಯ ಮಿಲಿಟರಿ ಕ್ರಮದ ಬಗ್ಗೆ ಕಳವಳ ಹುಟ್ಟುಹಾಕಿದೆ.

## ಜಮ್ಮು ಕಾಶ್ಮೀರದ 48 ಪ್ರವಾಸಿ ತಾಣಗಳು ಬಂದ್

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರ ಸರ್ಕಾರವು ಭದ್ರತಾ ದೃಷ್ಟಿಯಿಂದ 48 ಪ್ರವಾಸಿ ತಾಣಗಳನ್ನು ಬಂದ್ ಮಾಡಿದೆ. ಇತ್ತೀಚಿಗೆ ಪ್ರಗತಿಯತ್ತ ಸಾಗುತ್ತಿತ್ತು. ಪ್ರವಾಸಿ ತಾಣಗಳು, ಅಲ್ಲಿನ ಯುವಕರಿಗೆ ಉದ್ಯೋಗಾವಕಾಶ, ಉತ್ತಮ ಆದಾಯಗಳು ಅವರ ಕೈ ಸೇರುತ್ತಿತ್ತು.

ಇಂತಹ ಪರಿಸ್ಥಿತಿಯಲ್ಲಿ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿ ಅವರ ಅನ್ನಕ್ಕೆ ಕಲ್ಲು ಹಾಕಿದೆ. ಕಾಶೀರದಾದ್ಯಂತ ಇರುವ ಪ್ರವಾಸಿತಾಣಗಳ ಪೈಕಿ ಅರ್ಧಕ್ಕರ್ಧ ತಾಣಗಳನ್ನು ಬಂದ್ ಮಾಡಲಾಗಿದೆ.

**ಅರ್ಧಕ್ಕರ್ಧ ತಾಣಗಳು ಬಂದ್**

ಮುಚ್ಚಲಾದ ಕೆಲವು ಸ್ಥಳಗಳೆಂದರೆ ಯೂಸ್ಮಾರ್ಗ್, ತೌಸಿ ಮೈದನ್, ಧೂದ್ಪತ್ರಿ, ಅಹರ್ಬಲ್, ಕೌಸರ್ನಾಗ್, ಬಂಗುಸ್, ಕರಿವಾನ್ ಡೈವರ್ ಚಂಡಿಗಮ್, ಬಂಗುಸ್ ವ್ಯಾಲಿ, ವುಲ್ಲರ್/ವಾಟ್ಲಾಬ್, ರಾಂಪೋರಾ ಮತ್ತು ರಾಜ್ಪೋರಾ ಮತ್ತು ಚೀಹಾರರ್, ಇತರೆ ಪ್ರದೇಶಗಳು ಸೇರಿದೆ. ಅಲ್ಲದೇ ತೆರೆದಿರುವ ಇತರ ಪ್ರವಾಸಿ ತಾಣಗಳನ್ನು ಹೆಚ್ಚಿನ ಭದ್ರತೆಯಲ್ಲಿ ಇರಿಸಲಾಗಿದೆ ಎಂದು ಅಭಿವೃದ್ಧಿಯ ಬಗ್ಗೆ ಪರಿಚಿತವಾಗಿರುವ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



- ಡೊನಾಲ್ಡ್ ಟ್ರಂಪ್ ಸೂಚನೆಯಂತೆ ವಲಸೆ ಮತ್ತು ವೀಸಾ ನೀತಿಗಳಲ್ಲಿ ಕಠಿಣ ನಿಯಮಗಳನ್ನು ತರಲಾಗಿದೆ

## ಭಾರತೀಯರ ವೀಸಾ ವಂಚನೆ ಪಟ್ಟಿ ಬ್ರಿಟನ್, ಕೆನಡಾಗೂ ಶೇರ್

**ಅಮೆರಿಕ :** ಹೆಂಗಾದ್ರೂ ಸರಿ ಆದಷ್ಟು ಬೇಗ ಅಮೆರಿಕಕ್ಕೆ ಹೋಗಿ ಬಿಡಬೇಕು ಅಂತ ಸಿಕ್ಕ ಸಿಕ್ಕ ಏಜೆಂಟ್‌ಗಳಿಗೆ, ಮಧ್ಯವರ್ತಿಗಳಿಗೆ ದುಡ್ಡು ಕೊಟ್ಟರೋ... ನಿಮ್ಮ ಸ್ಥಿತಿ ಕೆಟ್ಟಂತೆಯೇ! ಬಾಟ್‌ಗಳು ಅಥವಾ ಅಧಿಕೃತವಲ್ಲದ ಸಾಫ್ಟ್‌ವೇರ್‌ಗಳನ್ನು ಬಳಸಿಕೊಂಡು ಏಜೆಂಟ್‌ಗಳು ವೀಸಾ ಸಂದರ್ಶನಕ್ಕೆ ಅಪಾಯಿಂಟ್ಮೆಂಟ್ ಫಿಕ್ಸ್ ಮಾಡಿರೋದನ್ನು ಈಗಾಗ್ಲೇ ಅಮೆರಿಕದ ಧೂತವಾಸ ಕಚೇರಿಯು ಪತ್ತೆ ಹಚ್ಚಿದೆ. ಅಂಥ 2000 ಅಭ್ಯರ್ಥಿಗಳ ವೀಸಾ ಸಂದರ್ಶನವನ್ನು ಕ್ಯಾನ್ಸಲ್ ಮಾಡಿ, ಅಮೆರಿಕಕ್ಕೆ ಹಾರಲು ತುದಿಗಾಲಲ್ಲಿ ನಿಂತಿದ್ದ ಭಾರತೀಯರಿಗೆ ಶಾಕ್ ಕೊಟ್ಟಿದೆ. ಆ ಕಥೆ ಅಷ್ಟಕ್ಕೇ ಮುಗಿದಿಲ್ಲ. ಮುಂದೆಯೂ ಅಮೆರಿಕದ ವೀಸಾ ಪಟ್ಟಿಯಲ್ಲಿ ಬ್ಲ್ಯಾಕ್‌ಲಿಸ್ಟ್‌ಗೆ ಸೇರೋ ಸಾಧ್ಯತೆ ಇರುತ್ತೆ. ಅದರ ಜೊತೆಗೆ ಅಮೆರಿಕದ ಅಧಿಕಾರಿಗಳು ತಮ್ಮ ಮಿತ್ರ ರಾಷ್ಟ್ರಗಳಾದ ಬ್ರಿಟನ್, ಕೆನಡಾ, ಆಸ್ಟ್ರೇಲಿಯಾ ಸೇರಿದಂತೆ ಹಲವು ದೇಶಗಳ ಜೊತೆಗೆ ಆ ಅಭ್ಯರ್ಥಿಗಳ ಹೆಸರನ್ನೂ ಹಂಚಿಕೊಳ್ಳುತ್ತದೆ.

ಮೊದಲೇ ಅಮೆರಿಕದಲ್ಲಿ ಅಧಿಕೃತವಾದ ವೀಸಾ ಇದ್ರೂ, ಗ್ರೀನ್ ಕಾರ್ಡ್ ಇದ್ರೂ ಕೂಡ ಯಾವಾಗ ಬೇಕಾದ್ರೂ ಅದನ್ನು ರದ್ದುಪಡಿಸಿ, ದೇಶದಿಂದ ಗಡಿ ಪಾರು ಮಾಡುವಂಥ ಘಟನೆಗಳು ನಡೆಯುತ್ತಿವೆ. ಡೊನಾಲ್ಡ್ ಟ್ರಂಪ್ ಸೂಚನೆಯಂತೆ ವಲಸೆ ಮತ್ತು ವೀಸಾ ನೀತಿಗಳಲ್ಲಿ ಕಠಿಣ ನಿಯಮಗಳನ್ನು ತರಲಾಗಿದೆ.

ಹಾಗೇ ವಿದ್ಯಾರ್ಥಿಗಳ ಎಫ್1 ವೀಸಾ ಸೇರಿದಂತೆ ಹಲವು ವೀಸಾಗಳ ಮೇಲೆ ಅಮೆರಿಕದ ಹೋಂಲ್ಯಾಂಡ್ ಅಧಿಕಾರಿಗಳು ಕಣ್ಣಿಟ್ಟಿದ್ದಾರೆ. ಸಿಗ್ನಲ್ ಜಂಪ್, ವೇಗವಾಗಿ ವಾಹನ ಚಾಲನೆ, ಸೋಶಿಯಲ್ ಮೀಡಿಯಾದಲ್ಲಿ ಗಾಜಾ ಪರವಾಗಿ ಪೋಸ್ಟ್...ಇಂಥ ಯಾವುದೇ ಒಂದು ಸಣ್ಣ ತಪ್ಪು ಮಾಡಿದ್ರೂ, ವೀಸಾ ರದ್ದು ಆಗೋ ಆತಂಕವು ಅಮೆರಿಕದಲ್ಲಿರೋ ವಿದೇಶಿ ವಿದ್ಯಾರ್ಥಿಗಳಿಗೆ ಇದೆ. ಇನ್ನೂ ದಾಖಲೆಗಳು ಸರಿ ಇಲ್ಲದಿದ್ರೆ, ಅಧಿಕೃತ ಅನುಮತಿ ಇಲ್ಲದೇ ಅಕ್ರಮವಾಗಿ ಅಮೆರಿಕಕ್ಕೆ ಪ್ರವೇಶ ಮಾಡಿದ್ರೆ, ಅಂಥವರನ್ನು ಬಂಧಿಸಿ, ಅವರ ದೇಶಕ್ಕೆ ವಾಪಸ್ ಕಳಿಸೋದು ಮುಂದುವರಿದಿದೆ. ಹೀಗಿರೋವಾಗ, ಭಾರತದಿಂದ ಹೋಗೋವಾಗ್ಲೇ ಎಡವಟ್ಟು ಮಾಡಿಕೊಂಡು, ಏನೇನೋ ಮಾಡಿ ವೀಸಾ ತಗೊಂಡು ಹೋದ್ರೂ, ಎಷ್ಟು ದಿನ ಉಳೀಬಹುದು?

ವೀಸಾ ಸಂದರ್ಶನಕ್ಕೆ ವಂಚನೆಯ ಮಾರ್ಗ ಬಳಕೆ ಮಾಡಿರೋದನ್ನು ಪತ್ತೆ ಮಾಡಿ, ಆ ಸಂದರ್ಶನಗಳನ್ನು ರದ್ದು ಮಾಡಿದ್ದ ಭಾರತದಲ್ಲಿರುವ ಅಮೆರಿಕದ ಧೂತವಾಸ ಕಚೇರಿಯು, ವಂಚನೆ ನಡೆಸಿದ ಅಭ್ಯರ್ಥಿಗಳ ಪಟ್ಟಿಯನ್ನು ಬೇರೆ ದೇಶಗಳ ಜೊತೆಗೂ ಹಂಚಿಕೊಳ್ಳುತ್ತಿದೆ. ಅದ್ರಿಂದಾಗಿ ವಂಚನೆಯ ಮಾರ್ಗ ತುಳಿದಿದ್ದ ಭಾರತದ ಅಭ್ಯರ್ಥಿಗಳು ಅಮೆರಿಕ ಅಷ್ಟೇ ಅಲ್ಲದೇ ಯುಕೆ, ಕೆನಡಾ, ಆಸ್ಟ್ರೇಲಿಯಾದಲ್ಲೂ ಕಪ್ಪು ಪಟ್ಟಿಗೆ ಸೇರುತ್ತಾರೆ. ಆಗ ಉನ್ನತ ವ್ಯಾಸಂಗಕ್ಕೆ, ಕೆಲಸಕ್ಕೆ ಅಥವಾ ಪ್ರವಾಸಕ್ಕೂ ಹೆಚ್ಚಿನ ದೇಶಗಳಿಗೆ ಪ್ರಯಾಣ ಮಾಡುವ ಅವಕಾಶವೇ ಬಂದ್ ಆಗುತ್ತದೆ.




### ಏಪ್ರಿಲ್-ಮೇ ತಿಂಗಳಲ್ಲೇ ಅಮೆರಿಕಕ್ಕೆ ಹೆಚ್ಚು ಪ್ರಯಾಣ

**ಅಮೆರಿಕದ ಧೂತವಾಸ ಕಚೇರಿಯು ಈವರೆಗೂ ವಿದ್ಯಾರ್ಥಿ ವರ್ಗಕ್ಕೆ ವೀಸಾ ರದ್ದತಿಯ ಕ್ರಮಗಳನ್ನು ಕೈಗೊಳ್ಳುತ್ತಿತ್ತು. ಈಗ ಪ್ರವಾಸಿ ವೀಸಾಗಳ ಕಡೆಗೂ ಹೆಚ್ಚಿನ ಗಮನ ಕೊಡಲಾಗುತ್ತಿದೆ. ಇದೇ ವರ್ಷ ಮಾರ್ಚ್‌ನಲ್ಲಿ ರದ್ದಾಗಿರುವ 2000 ವೀಸಾ ಅಪಾಯಿಂಟ್ಮೆಂಟ್‌ಗಳ ಪೈಕಿ ಹೆಚ್ಚಿನವರು ವಿದ್ಯಾರ್ಥಿ ವೀಸಾಗಾಗಿ ಅರ್ಜಿ ಸಲ್ಲಿಸಿದ್ದವರು. ಆದ್ರೆ, ಈಗ ಟೂರಿಸ್ಟ್ ವೀಸಾಗಳಲ್ಲೂ ವಂಚನೆ ನಡೆದಿರುವ ಬಗ್ಗೆ ಗುರುತಿಸಲಾಗ್ತಿದೆ ಅಂತ ವರದಿಯಾಗಿದೆ. ಸಂದರ್ಶನವನ್ನು ಬೇಗ ಮುಗಿಸಿಕೊಳ್ಳಲು ವಂಚನೆಯ ಹಾದಿ ಹಿಡಿಯೋದು ದೊಡ್ಡ ಅಪರಾಧ ಎಂದು ಅಮೆರಿಕದ ಧೂತವಾಸ ಕಚೇರಿಯು ಹೇಳುತ್ತಿದೆ. ಇದು ನೇರವಾಗಿ ಅಭ್ಯರ್ಥಿಯ ಮೇಲೆ ಪರಿಣಾಮ ಬೀರುತ್ತದೆ.**

### ವೀಸಾ ವಂಚನೆ ಪಟ್ಟಿ ಬ್ರಿಟನ್, ಕೆನಡಾಗೂ ಶೇರ್

**ಅಮೆರಿಕದ ವೀಸಾ ಮತ್ತು ವಲಸೆ ಇಲಾಖೆ ಕೇಳಿರೋ ಹತ್ತಾರು ಪ್ರಶ್ನೆಗಳಿಗೆ ಉತ್ತರಿಸೋಕೆ ಗೊಂದಲ ಆಗಿ, ಆ ಎಲ್ಲಕ್ಕೂ ಉತ್ತರಿಸೋ ತಾಳ್ಮೆ ಇಲ್ಲದೇ ಅಥವಾ ಅರ್ಜಿ ಭರ್ತಿ ಮಾಡೋಕೆ ಗೊತ್ತಾಗದೇ ವೀಸಾ ಅಪ್ಲೈ ಮಾಡೋಕೆ ಪ್ರತಿ ವರ್ಷವೂ ಸಾವಿರಾರು ಭಾರತೀಯರು ಏಜೆಂಟ್‌ಗಳು, ಇಲ್ಲವೇ ಮಧ್ಯವರ್ತಿಗಳಿಗೆ ಮೊರೆ ಹೋಗುತ್ತಾರೆ. ಅಂಥ ಏಜೆಂಟ್‌ಗಳು ಮಾಡೋ ಎಡವಟ್ಟಿನಿಂದಾಗಿ ಸಾವಿರಾರು ಮಂದಿ ಭಾರತೀಯರ ಅಮೆರಿಕದ ಕನಸಿಗೆ ಕೊಳ್ಳಿ ಇಟ್ಟಂತಾಗುತ್ತದೆ. ಅಭ್ಯರ್ಥಿಯ ಪರವಾಗಿ ಏಜೆಂಟ್‌ಗಳೇ ಅರ್ಜಿ ಭರ್ತಿ ಮಾಡಿ, ವೈಯಕ್ತಿಕ ಮಾಹಿತಿಯಲ್ಲಿ ತಪ್ಪು ಅಥವಾ ಸುಳ್ಳು ವಿಚಾರಗಳನ್ನು ಹಂಚಿಕೊಂಡರೆ ಅದಕ್ಕೆ ಅಭ್ಯರ್ಥಿಗಳೇ ಹೊಣೆಯಾಗುತ್ತಾರೆ. ಬೇಗ ಸಂದರ್ಶನ ಮುಗಿಸಿ, ಆದಷ್ಟು ಬೇಗ ಅಮೆರಿಕದ ಪ್ರಯಾಣಕ್ಕೆ ವೀಸಾ ಅನುಮತಿ ಸಿಗಲಿ ಅನ್ನೋ ಕಾರಣಕ್ಕೆ ಏಜೆಂಟ್‌ಗಳಿಂದ ತುರ್ತು ಅಪಾಯಿಂಟ್ಮೆಂಟ್ ಫಿಕ್ಸ್ ಮಾಡಿಸಿಕೊಳ್ಳೋದು ಕೂಡ ವಂಚನೆಯಾಗ್ತಿದೆ.**

ಕೋವಿಡ್ ಸಾಂಕ್ರಾಮಿಕದ ಅವಧಿಯ ಬಳಿಕ ಅಮೆರಿಕಕ್ಕೆ ತೆರಳಲು ವೀಸಾ ಅಪ್ಲಿಕೇಷನ್‌ಗಳ ಸಂಖ್ಯೆಯಲ್ಲಿ ಭಾರೀ ಹೆಚ್ಚಳವಾಗಿದೆ. ಹೊಸದಿಲ್ಲಿಯಲ್ಲಿರುವ ರಾಯಭಾರ ಕಚೇರಿ, ಚೆನ್ನೈ, ಹೈದರಾಬಾದ್, ಮುಂಬೈ ಹಾಗೂ ಕೋಲ್ಕತ್ತಾದಲ್ಲಿನ ಕಾನ್ಸುಲೇಟ್‌ಗಳಲ್ಲಿ ಸಂದರ್ಶನಕ್ಕೆ ಹಾಜರಾಗುವವರ ಪಟ್ಟಿ ಬೆಳೆಯುತ್ತಿದೆ. ಟೂರಿಸ್ಟ್ ವೀಸಾ ಬಿ1/ ಬಿ2 ಸಂದರ್ಶನಕ್ಕಾಗಿ ಕಾಯುವಿಕೆಯ ಅವಧಿ ಕನಿಷ್ಠ 140 ದಿನಕ್ಕೂ ಅಧಿಕ. ಹೀಗಿರೋವಾಗ ಆದಷ್ಟು ಬೇಗ ಅಮೆರಿಕಕ್ಕೆ ಹಾರಿಬಿಡಬೇಕು ಅಂದ್ಕೊಳ್ಳೋದು ವಂಚಕರ ಬಲೆಗೆ ಬೀಳುತ್ತಿದ್ದಾರೆ. ವರದಿಯೊಂದರ ಪ್ರಕಾರ, 2023ರ ಅಕ್ಟೋಬರ್‌ನಿಂದ 2024ರ ಸೆಪ್ಟೆಂಬರ್ ವರೆಗೂ ಭಾರತದಲ್ಲಿನ ಅಮೆರಿಕದ ಎಂಬೆಸಿಯಿಂದ ಒಟ್ಟು ಸುಮಾರು 13.75 ಲಕ್ಷ ಭಾರತೀಯರ ಅಪ್ಲಿಕೇಷನ್‌ಗಳಿಗೆ ವೀಸಾ ಮಂಜೂರು ಮಾಡಲಾಗಿದೆ. ಇವರಲ್ಲಿ ಸುಮಾರು ಒಂಭತ್ತು ಲಕ್ಷ ಜನರು ಟೂರಿಸ್ಟ್ ವೀಸಾದ ಅಡಿಯಲ್ಲಿ ಅಮೆರಿಕಕ್ಕೆ ಹೋಗಿ ಬಂದಿದ್ದಾರೆ.




# ನೀಲ್–ಎನ್‌ಟಿಆರ್ ಚಿತ್ರಕ್ಕೆ ಡೇಟ್ ಫಿಕ್ಸ್

## ವಿಚಾರ ಕೇಳಿ ಫ್ಯಾನ್ಸ್ ಥ್ರಿಲ್

ಪ್ರಶಾಂತ್ ನೀಲ್ ಮತ್ತು ಜೂನಿಯರ್ ಎನ್‌ಟಿಆರ್ ಅವರ ಮುಂಬರುವ ಚಿತ್ರದ ಬಿಡುಗಡೆ ದಿನಾಂಕ ರಿವೀಲ್ ಆಗಿದೆ. ಹಲವು ವರ್ಷಗಳ ಕಾಯುವಿಕೆಯ ನಂತರ, ಚಿತ್ರೀಕರಣ ಭರದಿಂದ ಸಾಗುತ್ತಿದೆ. ಈ ಪ್ಯಾನ್ ಇಂಡಿಯಾ ಚಿತ್ರಕ್ಕೆ ಇನ್ನೂ ಶೀರ್ಷಿಕೆ ಇಲ್ಲದಿದ್ದರೂ, #NTRNeel ಎಂಬ ಹೆಸರಿನಲ್ಲಿ ಚರ್ಚೆಯಾಗುತ್ತಿದೆ. 'ಡ್ರ್ಯಾಗನ್' ಎಂಬ ಇಂಗ್ಲಿಷ್ ಶೀರ್ಷಿಕೆಯೂ ಸಹ ಕೇಳಿಬಂದಿದೆ.

ಪ್ರಶಾಂತ್ ನೀಲ್ ಹಾಗೂ ಜೂನಿಯರ್ ಎನ್‌ಟಿಆರ್ ಸಿನಿಮಾ ಘೋಷಣೆ ಆಗಿ ಕೆಲವು ವರ್ಷಗಳೇ ಕಳೆದು ಹೋಗಿವೆ. ಆದರೆ, ಸಿನಿಮಾ ಇಷ್ಟು ದಿನ ಸೆಟ್ಟೇರಿರಲಿಲ್ಲ. ಈಗ ಚಿತ್ರದ ಶೂಟ್ ಭರದಿಂದ ಸಾಗುತ್ತಿದೆ. ಈಗ ಸಿನಿಮಾದ ರಿಲೀಸ್ ದಿನಾಂಕದ ಬಗ್ಗೆಯೂ ಮಾಹಿತಿ ಹೊರ ಬಿದ್ದಿದೆ. ಈ ವಿಚಾರ ಕೇಳಿ ಫ್ಯಾನ್ಸ್ ಥ್ರಿಲ್ ಆಗಿದ್ದಾರೆ.

ಅಂದಹಾಗೆ ಈ ಸಿನಿಮಾ ವೀಕ್ಷಿಸಬೇಕು ಎಂದರೆ ಇನ್ನೂ ಒಂದು ವರ್ಷಗಳಿಗೂ ಅಧಿಕ ಕಾಲ ನೀವು ಕಾಯಲೇಬೇಕು. ಪ್ರಶಾಂತ್ ನೀಲ್ ಅವರು 'ಸಲಾರ್' ಸಿನಿಮಾ ಬಳಿಕ ಒಂದು ಬ್ರೇಕ್ ಪಡೆದರು. ಅವರು ಮುಂಬರುವ ತಮ್ಮ ಚಿತ್ರದ ಕೆಲಸಗಳಲ್ಲಿ ತೊಡಗಿಕೊಂಡರು. ಅವರು 'ಸಲಾರ್ 2' ಎತ್ತಿಕೊಳ್ಳುತ್ತಾರಾ ಅಥವಾ 'ಕೆಜಿಎಫ್ 3' ಮಾಡುತ್ತಾ ಎನ್ನುವ ಪ್ರಶ್ನೆ ಇತ್ತು. ಆದರೆ, ಹಳೆಯ ಕಮಿಟ್‌ಮೆಂಟ್‌ಗಳಲ್ಲಿ ಒಂದಾದ ಜೂನಿಯರ್ ಎನ್‌ಟಿಆರ್ ಜೊತೆಗಿನ ಚಿತ್ರವನ್ನು ಅವರು ಘೋಷಣೆ ಮಾಡಿದರು. ಈ ಸಿನಿಮಾ 2026ರ ಜೂನ್ 25ರಂದು ರಿಲೀಸ್ ಆಗಲಿದೆ.



## ದ್ವೇಷ ಕಾರಿದವರಿಗೆ ನಟಿ ಇಮಾನ್ವಿ ಸ್ಪಷ್ಟನೆ



# ಪಾಕಿಸ್ತಾನಿ ನಟ-ನಟಿಯರ ಮೇಲೆ ಭಾರತದಲ್ಲಿ ನಿಷೇಧ

## ಪಾಕಿಸ್ತಾನ ನಟಿ ಹನಿಯಾ ಔಟ್


ಪಾಕಿಸ್ತಾನಿ ನಟ-ನಟಿಯರು ನಟಿಸಿರುವ ಸಿನಿಮಾಗಳನ್ನು ನಿಷೇಧಿಸಲಾಗುತ್ತಿದೆ. ಈಗಾಗಲೇ ಫಹಾದ್ ಖಾನ್ ನಟನೆಯ 'ಅಬಿರ್ ಗುಲಾಲ್' ಸಿನಿಮಾಕ್ಕೆ ನಿಷೇಧದ ಭೀತಿ ಎದುರಾಗಿದೆ. ಅದರ ಬೆನ್ನಲ್ಲೆ ಪಾಕಿಸ್ತಾನಿ ನಟಿಯನ್ನು ನಾಯಕಿಯನ್ನಾಗಿ ಹಾಕಿಕೊಳ್ಳಲಿದ್ದ ಹಿಂದಿ ಸಿನಿಮಾವೊಂದು ನಿರ್ಧಾರದಿಂದ ಹಿಂದೆ ಸರಿದಿದೆ. ಪಹಲ್ಗಾಮ್ ದಾಳಿಯ ಬಳಿಕ ಪಾಕಿಸ್ತಾನದ ವಿರುದ್ಧ ತೀವ್ರ ಆಕ್ರೋಶ ಭಾರತೀಯರಿಂದ ವ್ಯಕ್ತವಾಗುತ್ತಿದೆ.

ಪಾಕಿಸ್ತಾನದ ಮೇಲೆ ಯುದ್ಧ ಮಾಡಿಯೇ ತೀರಬೇಕೆಂಬ ಒತ್ತಾಯ ಸಾಮಾನ್ಯ ನಾಗರೀಕರಿಂದ ಕೇಳಿ ಬರುತ್ತಿದೆ. ಪಾಕಿಸ್ತಾನದ ವಿರುದ್ಧ ಸಂಘಟಿತ ಆಕ್ರೋಶ ವ್ಯಕ್ತವಾಗುತ್ತಿದೆ, ಪಾಕಿಸ್ತಾನಿ ನಟ ಫಹಾದ್ ಖಾನ್ ನಟಿಸಿರುವ 'ಅಬಿರ್ ಗುಲಾಲ್' ಸಿನಿಮಾ ಬಿಡುಗಡೆಗೆ ನಿಷೇಧ ಹೇರಲಾಗಿದೆ. ಅದರ ಬೆನ್ನಲ್ಲೆ ಇದೀಗ ಭಾರತದ ಮತ್ತೊಂದು ಹೊಸ ಸಿನಿಮಾದಿಂದ ಪಾಕಿಸ್ತಾನಿ ನಟಿಯನ್ನು ಹೊರಗಿಡಲಾಗಿದೆ. ದಿಲ್ಜಿತ್ ದುಸ್ಸಾಂಜ್ ನಟನೆಯ 'ಸರ್ದಾರ್ ಜಿ 3' ಸಿನಿಮಾದ ಚಿತ್ರೀಕರಣ ಪ್ರಾರಂಭ ಆಗಿದ್ದು. 'ಸರ್ದಾರ್ ಜಿ 3' ಸಿನಿಮಾನಲ್ಲಿ ಪಾಕಿಸ್ತಾನಿ ಖ್ಯಾತ ನಟಿ, ಗಾಯಕಿ ಹಾನಿಯಾ ಆಮಿರ್ ಅವರು ನಾಯಕಿಯಾಗಿ ನಟಿಸಲಿದ್ದರು.

# ಭಾರತದ ಬಳಿಕ ಪಾಕ್‌ನಲ್ಲೂ ಸಿನಿಮಾ ನಿಷೇಧ

ಪಾಕಿಸ್ತಾನಿ ನಟ ಫಹಾದ್ ಖಾನ್ ನಟಿಸಿರುವ ಕಾರಣಕ್ಕೆ ಭಾರತದಲ್ಲಿ ಬಿಡುಗಡೆ ನಿಷೇಧ ಹೇರಲಾಗಿದೆ. ಇದೀಗ ಈ ಸಿನಿಮಾವನ್ನು ಪಾಕಿಸ್ತಾನದಲ್ಲಿಯೂ ಸಹ ಬ್ಯಾನ್ ಮಾಡಲಾಗಿದೆ. ಭಾರತದ ನಟಿ ವಾಣಿ ಕಪೂರ್ ಸಿನಿಮಾದ ನಾಯಕಿ ಆಗಿರುವ ಕಾರಣಕ್ಕೆ ಪಾಕಿಸ್ತಾನದಲ್ಲಿ ಸಿನಿಮಾ ಬಿಡುಗಡೆಗೆ ಅವಕಾಶ ನೀಡಲಾಗುತ್ತಿಲ್ಲ.

ಪಹಲ್ಗಾಮ್ ದಾಳಿಯ ಬಳಿಕ ಪಾಕಿಸ್ತಾನದ ಜೊತೆಗೆ ರಾಜತಾಂತ್ರಿಕ ಯುದ್ಧವನ್ನು ಭಾರತ ಆರಂಭಿಸಿದೆ. ಪಾಕಿಸ್ತಾನಕ್ಕೆ ಹರಿಯುವ ಸಿಂಧು ನದಿಯ ನೀರನ್ನು ನಿಲ್ಲಿಸಲಾಗುತ್ತಿದೆ. ಪಾಕಿಸ್ತಾನಿ ನಟರು, ತಂತ್ರಜ್ಞರು ಭಾರತದ ಸಿನಿಮಾಗಳಲ್ಲಿ ಕೆಲಸ ಮಾಡುವುದಕ್ಕೆ ನಿಷೇಧ ಹೇರಲಾಗಿದೆ. ಪಾಕಿಸ್ತಾನಿ ನಟ ಫಹಾದ್ ಖಾನ್ ನಟಿಸಿರುವ ಭಾರತದ ಸಿನಿಮಾ 'ಅಬಿರ್ ಗುಲಾಲ್' ಸಿನಿಮಾದ ಬಿಡುಗಡೆಗೆ ಅವಕಾಶ ನೀಡುವುದಿಲ್ಲ ಎಂದು ಮಾಹಿತಿ ಮತ್ತು ಪ್ರಸಾರ ಖಾತೆ ಇಲಾಖೆ ಈಗಾಗಲೇ ಹೇಳಿದರು. ಇದು ಚಿತ್ರತಂಡಕ್ಕೆ ಭಾರಿ ದೊಡ್ಡ ಪೆಟ್ಟು ನೀಡಿದೆ. ಇದೀಗ ಈ ಸಿನಿಮಾ ಅನ್ನು ಪಾಕಿಸ್ತಾನವೂ ಸಹ ನಿಷೇಧಿಸಿದೆ! ಪಾಕಿಸ್ತಾನದ ಸಿನಿಮಾ ವಿತರಕ ಸತೀಶ್ ಆನಂದ್ ಈ ಬಗ್ಗೆ ತಿಳಿಸಿದ್ದಾರೆ.



# ಮಲ್ಟಿಪ್ಲೆಕ್ಸ್‌ಗಳ ಮುಂದೆ ಭಿಕ್ಷೆ ಬೇಡುವ ಪರಿಸ್ಥಿತಿ ಇದೆ

## ಅಜಯ್ ಗರಂ

ಅಜಯ್ ರಾವ್ ನಟನೆಯ 'ಯುದ್ಧಕಾಂಡ' ಸಿನಿಮಾ ಕಳೆದ ವಾರವಷ್ಟೆ ಬಿಡುಗಡೆ ಆಗಿದೆ. ಸಿನಿಮಾ ಉತ್ತಮ ಪ್ರದರ್ಶನ ಕಾಣುತ್ತಿದೆ. ಆದರೆ ಇದೀಗ ಮಲ್ಟಿಪ್ಲೆಕ್ಸ್‌ನಿಂದ ಸಿನಿಮಾಕ್ಕೆ ಸಮಸ್ಯೆ ಎದುರಾಗಿದೆ. ಈ ಬಗ್ಗೆ ವಿಡಿಯೋ ಮಾಡಿರುವ ಅಜಯ್ ರಾವ್, ಕನ್ನಡ ಸಿನಿಮಾಗಳಿಗೆ ಮಲ್ಟಿಪ್ಲೆಕ್ಸ್ ಮುಂದೆ ಭಿಕ್ಷೆ ಬೇಡುವಂತಾಗಿದೆ ಎಂದಿದ್ದಾರೆ. ಅಜಯ್ ರಾವ್ ನಟನೆಯ 'ಯುದ್ಧಕಾಂಡ' ಸಿನಿಮಾ ಕಳೆದ ವಾರ ಬಿಡುಗಡೆ ಆಗಿದ್ದು, ಸಿನಿಮಾದ ಬಗ್ಗೆ ಧನಾತ್ಮಕ ಅಭಿಪ್ರಾಯ ವ್ಯಕ್ತವಾಗಿತ್ತು. ಸಿನಿಮಾ ಸಹ ಉತ್ತಮ ಗಳಿಕೆಯನ್ನು ಬಾಕ್ಸ್ ಆಫೀಸ್‌ನಲ್ಲಿ ಮಾಡುತ್ತಿದೆ. ಆದರೆ ಇದೀಗ ಸಿನಿಮಾಕ್ಕೆ ಸಂಕಷ್ಟ ಎದುರಾಗಿದೆ. ಈ ವಾರ ಪರಭಾಷೆಯ ಕೆಲ ಸ್ಟಾರ್ ನಟರ ಸಿನಿಮಾಗಳು ಬಿಡುಗಡೆ ಆಗುತ್ತಿದ್ದು, ಉತ್ತಮ ಪ್ರದರ್ಶನ ಕಾಣುತ್ತಿರುವ 'ಯುದ್ಧಕಾಂಡ' ಸಿನಿಮಾ ಮಂಡಿಯೂರುವ ಪರಿಸ್ಥಿತಿ ಬಂದಿದೆ. ಇದೀಗ ಸಿನಿಮಾದ ನಿರ್ಮಾಪಕ ಹಾಗೂ ನಟರೂ ಆಗಿರುವ ಅಜಯ್ ರಾವ್ ಅವರು ಈ ಬಗ್ಗೆ ಆಕ್ರೋಶ ಹೊರಹಾಕಿದ್ದಾರೆ. ಇನ್‌ಸ್ಟಾಗ್ರಾಂನಲ್ಲಿ ವಿಡಿಯೋ ಹಂಚಿಕೊಂಡಿರುವ ಅಜಯ್ ರಾವ್, ಮಲ್ಟಿಪ್ಲೆಕ್ಸ್‌ಗಳ ಮುಂದೆ ಭಿಕ್ಷೆ ಬೇಡುವ ಪರಿಸ್ಥಿತಿ ಕನ್ನಡ ಸಿನಿಮಾಗಳಿಗೆ ಎದುರಾಗಿದೆ. ಮಲ್ಟಿಪ್ಲೆಕ್ಸ್‌ಗಳು ಕನ್ನಡ ಸಿನಿಮಾಗಳಿಗೆ ಅನುಕೂಲಕರವಲ್ಲದ ಶೋ ಟೈಂಗಳನ್ನು ನೀಡುತ್ತಿವೆ. ಒಳ್ಳೆಯ ಶೋ ಟೈಂ ಕೊಡಿ ಎಂದು ನಾವು ಭಿಕ್ಷೆ ಬೇಡಬೇಕಾಗಿದೆ. ನಮ್ಮ ಸಿನಿಮಾಕ್ಕೆ ಈ ಮುಂಚೆಯೂ ಅನಾನುಕೂಲಕರವಾದ ಶೋ ಟೈಂ ಕೊಟ್ಟಿದ್ದರು.



# ಗನ್ ಹಿಡಿದ ಕಿಲ್ಲರ್ ಜ್ಯೋತಿ ರೈ

## ಮೇನಲ್ಲಿ ಶೂಟಿಂಗ್ ಶುರು

ಕನ್ನಡದ ಜೋಗುಳ, ಗೆಜ್ಜೆಪೂಜೆ ಸೀರಿಯಲ್ ಮೂಲಕ ಗಮನ ಸೆಳೆದಿದ್ದ ಕುಡ್ಲದ ಬೆಡಗಿ ಜ್ಯೋತಿ ರೈ ಅವರು ಸೌತ್‌ನಲ್ಲಿ ಬ್ಯುಸಿಯಾಗಿದ್ದಾರೆ. ಈ ಬಾರಿ ಗನ್ ಹಿಡಿದು ಕಿಲ್ಲರ್ ಕಥೆ ಹೇಳೋಕೆ ಅವರು ರೆಡಿಯಾಗಿದ್ದಾರೆ. 'ಕಿಲ್ಲರ್' ಎಂಬ ಸಿನಿಮಾದಲ್ಲಿ ಜ್ಯೋತಿ ರೈ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಈ ಚಿತ್ರಕ್ಕೆ ನಟಿಯ ಪತಿ ಪೂರ್ವಜ್ ಅವರೇ ನಿರ್ದೇಶನ ಮಾಡಿದ್ದಾರೆ. ಕ್ರೈಮ್ ಥ್ರಿಲ್ಲರ್ ಕಥೆ ಹೇಳಲು ರೆಡಿಯಾಗಿದ್ದಾರೆ. ಕನ್ನಡ ಹಾಗೂ ತೆಲುಗಿನಲ್ಲಿ ಸಿನಿಮಾ ಮೂಡಿ ಬರಲಿದೆ. ಈ ಚಿತ್ರದ ಮೊದಲ ಗ್ಲಿಂಪ್ಸ್ ಏ.30ರಂದು ರಿವೀಲ್ ಆಗಲಿದೆ. 'ಕಿಲ್ಲರ್' ಚಿತ್ರದ ಜೊತೆ 'ಮಾಸ್ಟರ್ ಪೀಸ್' ಎಂಬ ಚಿತ್ರ ಕೂಡ ಜ್ಯೋತಿ ಮಾಡುತ್ತಿದ್ದಾರೆ. ಅದನ್ನು ಪೂರ್ವಜ್ ಅವರೇ ನಿರ್ದೇಶನ ಮಾಡುತ್ತಿದ್ದು, ಮೇನಲ್ಲಿ ಶೂಟಿಂಗ್ ಶುರುವಾಗಲಿದೆ. ಸದ್ಯ ನಟಿಯ ಸಿನಿಮಾ ಸುದ್ದಿ ಕೇಳಿ ಫ್ಯಾನ್ಸ್ ಥ್ರಿಲ್ ಆಗಿದ್ದಾರೆ.




# ಎಡಗೈ ದಾಂಡಿಗರ ಸಿಡಿಲಬ್ಬರಕ್ಕೆ ಆರ್‌ಸಿಬಿ ದಾಖಲೆ ಧೂಳೀಪಟ

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18 ರಲ್ಲಿ ಹೊಸ ಇತಿಹಾಸ ನಿರ್ಮಾಣವಾಗಿದೆ. ಅದು ಕೂಡ ಅತೀ ಕಡಿಮೆ ಓವರ್‌ಗಳಲ್ಲಿ 200+ ರನ್‌ಗಳ ಚೇಸ್ ಮಾಡುವ ಮೂಲಕ. ಹೀಗೆ ಚೇಸ್ ಮಾಡಿ ಹೊಸ ಇತಿಹಾಸ ನಿರ್ಮಿಸಿದ್ದು ರಾಜಸ್ಥಾನ್ ರಾಯಲ್ಸ್ ತಂಡ. ಈ ಮೂಲಕ ಆರ್‌ಸಿಬಿ ತಂಡದ ಹೆಸರಿನಲ್ಲಿದ್ದ ದಾಖಲೆಯನ್ನು ಆರ್‌ಆರ್ ಪಡೆ ಮುರಿದಿದೆ.

ಜೈಪುರದ ಸವಾಯಿ ಮಾನ್‌ಸಿಂಗ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ರಾಜಸ್ಥಾನ್ ರಾಯಲ್ಸ್ ತಂಡವು ಬೌಲಿಂಗ್ ಆಯ್ದುಕೊಂಡಿತು. ಅದರಂತೆ ಮೊದಲು ಬ್ಯಾಟ್ ಮಾಡಿದ ಗುಜರಾತ್ ಟೈಟಾನ್ಸ್ ಪರ ನಾಯಕ ಶುಭ್‌ಮನ್ ಗಿಲ್ (84) ಅರ್ಧಶತಕ ಬಾರಿಸಿದರು. ಈ ಹಾಫ್ ಸೆಂಚುರಿಯ ನೆರವಿನೊಂದಿಗೆ ಗುಜರಾತ್ ಟೈಟಾನ್ಸ್ 20 ಓವರ್‌ಗಳಲ್ಲಿ 209 ರನ್ ಕಲೆಹಾಕಿತು.

ಈ ಗುರಿಯನ್ನು ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ ತಂಡಕ್ಕೆ ಎಡಗೈ ದಾಂಡಿಗರಾದ ಯಶಸ್ವಿ ಜೈಸ್ವಾಲ್ ಹಾಗೂ ವೈಭವ್ ಸೂರ್ಯವಂಶಿ ಸ್ಫೋಟಕ ಆರಂಭ ಒದಗಿಸಿದ್ದರು.



# ತಾಯಿಯ ತ್ಯಾಗ ತಂದೆಯ ಪರಿಶ್ರಮ ನನ್ನೆಲ್ಲಾ ಸಾಧನೆಗೆ ಹೆತ್ತವರೇ ಕಾರಣ..!

ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಹೊಸ ತಾರೋದಯವಾಗಿದೆ. ಅದು ಸಹ 14 ವರ್ಷದ ಹದಿ ಹರೆಯದ ದಾಂಡಿಗನ ರೂಪದಲ್ಲಿ ಎಂಬುದು ವಿಶೇಷ. ಹೌದು, ರಾಜಸ್ಥಾನ್ ರಾಯಲ್ಸ್ ಪರ ಕಣಕ್ಕಿಳಿಯುತ್ತಿರುವ ವೈಭವ್ ಸೂರ್ಯವಂಶಿ ಐಪಿಎಲ್‌ನಲ್ಲಿ ಸಂಚಲನ ಸೃಷ್ಟಿಸಿದ್ದಾರೆ. ಜೈಪುರದ ಸವಾಯಿ ಮಾನ್‌ಸಿಂಗ್ ಸ್ಟೇಡಿಯಂನಲ್ಲಿ ನಡೆದ ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಸ್ಫೋಟಕ ಸೆಂಚುರಿ ಸಿಡಿಸಿ ಇದೀಗ ವೈಭವ್ ಮನೆಮಾತಾಗಿದ್ದಾರೆ.

> **ಇನ್ನು ಐಪಿಎಲ್ ಆಡಲು ನಾನು ಬಹಳ ಸಮಯದಿಂದ ತಯಾರಿ ನಡೆಸುತ್ತಿದ್ದೆ. ಇದೀಗ ನಾನು ಬಯಸಿದ ರೀತಿಯಲ್ಲಿ ಶತಕ ಮೂಡಿಬಂದಿರುವುದು ನನಗೆ ಸಂತೋಷ ತಂದಿದೆ.**

ಅಲ್ಲದೆ ಚೊಚ್ಚಲ ಸೆಂಚುರಿಯೊಂದಿಗೆ ವಿಶ್ವ ದಾಖಲೆಯನ್ನು ತನ್ನದಾಗಿಸಿಕೊಂಡಿರುವ ಯುವ ದಾಂಡಿಗ ಇಡೀ ವಿಶ್ವವೇ ತನ್ನತ್ತ ತಿರುಗಿ ನೋಡುವಂತೆ ಮಾಡಿದ್ದಾನೆ. ಈ ಸಾಧನೆಯ ಬೆನ್ನಲ್ಲೇ ಮಾತನಾಡಿದ ವೈಭವ್ ಸೂರ್ಯವಂಶಿ, ಇದಕ್ಕೆಲ್ಲಾ ತನ್ನ ಹೆತ್ತವರ ತ್ಯಾಗವೇ ಕಾರಣ ಎಂದಿದ್ದಾರೆ. ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದ ಬಳಿಕ ಮಾತನಾಡಿದ ವೈಭವ್, ಇಂದು ನಾನು ಏನಾಗಿದ್ದೇನೋ ಅದಕ್ಕೆ ನನ್ನ ಹೆತ್ತವರೇ ಕಾರಣ. ನನ್ನ ಅಭ್ಯಾಸಕ್ಕಾಗಿ, ನನ್ನ ತಾಯಿ ರಾತ್ರಿ 11 ಗಂಟೆಗೆ ಮಲಗಿ, ಬೆಳಿಗ್ಗೆ 2 ಗಂಟೆಗೆ ಎದ್ದೇಳುತ್ತಿದ್ದರು. ಅಂದರೆ ನನಗಾಗಿ ಅವರು ಕೇವಲ ಮೂರು ಗಂಟೆಗಳ ಕಾಲ ಮಾತ್ರ ನಿದ್ರಿಸುತ್ತಿದ್ದರು. ಹಾಗೆಯೇ ತಂದೆ ನನ್ನ ಬೆಂಬಲಕ್ಕೆ ನಿಂತಿದ್ದರು. ಇದಕ್ಕಾಗಿ ಅವರು ತಮ್ಮ ಕೆಲಸವನ್ನು ಸಹ ತೊರೆದಿದ್ದರು. ನನ್ನ ಅಣ್ಣ ಕೆಲಸ ಮಾಡುತ್ತಾ ಮನೆಯ ಜವಾಬ್ದಾರಿ ವಹಿಸಿಕೊಂಡಿದ್ದರು. ಇದರಿಂದ ಆರ್ಥಿಕ ಸಮಸ್ಯೆಯೊಂದಿಗೆ ಕುಟುಂಬ ನಿರ್ವಹಿಸಬೇಕಾದ ಪರಿಸ್ಥಿತಿ ಎದುರಾಗಿತ್ತು. ಇದಾಗ್ಯೂ ತಂದೆ ನನಗೆ ಸಂಪೂರ್ಣ ಬೆಂಬಲ ನೀಡುತ್ತಿದ್ದರು. ಹೀಗಾಗಿ ಇಂದಿನ ನನ್ನೆಲ್ಲಾ ಸಾಧನೆಗೆ ತಂದೆ-ತಾಯಿಯೇ ಕಾರಣ ಎಂದು ವೈಭವ್ ಸೂರ್ಯವಂಶಿ ಹೇಳಿದ್ದಾರೆ. ಕಷ್ಟಪಟ್ಟರೆ, ದೇವರು ಎಂದಿಗೂ ಕೈ ಬಿಡಲ್ಲ. ಅದು ಇಂದು ಸಾಬೀತಾಗಿದೆ. ನಾವು ನೋಡುತ್ತಿರುವ ಫಲಿತಾಂಶಗಳು ಮತ್ತು ನಾನು ಸಾಧಿಸುತ್ತಿರುವ ಯಶಸ್ಸು ನನ್ನ ಹೆತ್ತವರಿಂದಾಗಿದೆ. ಹೀಗಾಗಿ ಎಲ್ಲಾ ಶ್ರೇಯಸ್ಸು ನನ್ನ ಹೆತ್ತವರಿಗೆ ಸಲ್ಲಬೇಕು ಎಂದು ವೈಭವ್ ಸೂರ್ಯವಂಶಿ ಹೇಳಿದ್ದಾರೆ.

ಇದೇ ವೇಳೆ ತನ್ನ ಇನಿಂಗ್ಸ್ ಬಗ್ಗೆ ಮಾತನಾಡಿದ ವೈಭವ್, ಐಪಿಎಲ್‌ನಲ್ಲಿ ಆಡುವುದು ನನಗೆ ಸಾಮಾನ್ಯ ವಿಷಯವಾಗಿತ್ತು. ನಾನು ಭಾರತದ ಪರ 19 ವರ್ಷದೊಳಗಿನವರ ತಂಡದಲ್ಲಿ ಆಡಿದ್ದೇನೆ. ದೇಶೀಯ ಮಟ್ಟದಲ್ಲಿಯೂ ಸಹ ಮೊದಲ ಎಸೆತದಲ್ಲಿ ಸಿಕ್ಸರ್ ಬಾರಿಸಿದ್ದೇನೆ. ಮೊದಲ 10 ಎಸೆತಗಳನ್ನು ಆಡುವ ಒತ್ತಡ ನನಗಿರಲಿಲ್ಲ. ಚೆಂಡು ನನ್ನ ಕಣ್ಣಿಗೆ ಬಿದ್ದರೆ ನಾನು ಅದನ್ನು ಹೊಡೆಯುತ್ತೇನೆ ಎಂದು ನನ್ನ ಮನಸ್ಸಿನಲ್ಲಿ ಸ್ಪಷ್ಟವಾಗಿತ್ತು.

ಹೀಗಾಗಿ ನಾನು ಚೊಚ್ಚಲ ಪಂದ್ಯವನ್ನು ನನ್ನ ಮೊದಲ ಮ್ಯಾಚ್ ಎಂದೂ ಭಾವಿಸುತ್ತಿರಲಿಲ್ಲ. ಒಬ್ಬ ಅಂತರರಾಷ್ಟ್ರೀಯ ಬೌಲರ್ ನನ್ನ ಮುಂದೆ ಇದ್ದದ್ದು ನಿಜ. ವೇದಿಕೆ ಕೂಡ ದೊಡ್ಡದಾಗಿತ್ತು. ಇದಾಗ್ಯೂ ನಾನು ನನ್ನ ಆಟವನ್ನು ಆಡುತ್ತಿದ್ದೆ. ಹೀಗಾಗಿ ಎದುರಾಳಿ ಯಾರೇ ಆಗಿದ್ದರೂ ನಾನು ಚಿಂತಿತನಾಗುತ್ತಿರಲಿಲ್ಲ ಎಂದು ವೈಭವ್ ಸೂರ್ಯವಂಶಿ ಹೇಳಿದ್ದಾರೆ. ಸದ್ಯ ನನ್ನ ಗುರಿ ಟೀಮ್ ಇಂಡಿಯಾ ಪರ ಆಡುವುದು. ನಾನು ಭಾರತಕ್ಕೆ ಕೊಡುಗೆ ನೀಡಲು ಬಯಸುತ್ತೇನೆ. ಅದಕ್ಕಾಗಿ ನಾನು ಶ್ರಮಿಸಬೇಕು. ಆ ಮಟ್ಟವನ್ನು ತಲುಪುವವರೆಗೆ ನನ್ನ ಶ್ರಮ ನಿಲ್ಲುವುದಿಲ್ಲ. ದೇಶಕ್ಕಾಗಿ ಒಳ್ಳೆಯದನ್ನು ಮಾಡಲು ಪ್ರಯತ್ನಿಸುತ್ತೇನೆ ಎಂದರು.

# ಕೆಎಲ್ ರಾಹುಲ್‌ಗೆ ತಿರುಗೇಟು ನೀಡಲು ಪ್ಲ್ಯಾನ್ ರೂಪಿಸಿದ್ದ ವಿರಾಟ್ ಕೊಹ್ಲಿ

ಏಪ್ರಿಲ್ 11, ಐಪಿಎಲ್ ಸೀಸನ್ 18ರ 24ನೇ ಪಂದ್ಯ. ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದ ಈ ಮ್ಯಾಚ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ 20 ಓವರ್‌ಗಳಲ್ಲಿ 163 ರನ್ ಕಲೆಹಾಕಿತು.

ಈ ಗುರಿಯನ್ನು ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ ಪರ ಕನ್ನಡಿಗ ಕೆಎಲ್ ರಾಹುಲ್ 53 ಎಸೆತಗಳಲ್ಲಿ ಅಜೇಯ 93 ರನ್ ಬಾರಿಸಿದ್ದರು. ಅಲ್ಲದೆ 17.5 ಓವರ್‌ಗಳಲ್ಲಿ ತಂಡವನ್ನು ಗೆಲುವಿನ ದಡ ಸೇರಿ 6 ವಿಕೆಟ್‌ಗಳ ಜಯ ತಂದುಕೊಟ್ಟರು. ಈ ಗೆಲುವಿನ ಬಳಿಕ ಕೆಎಲ್ ರಾಹುಲ್ ಬ್ಯಾಟ್‌ನಿಂದ ವೃತ್ತ ಬರೆದು ಇದು ನನ್ನ ಮೈದಾನ ಎಂದು ಕಾಂತಾರಾ ಸಿನಿಮಾ ಶೈಲಿಯಲ್ಲಿ ಸಂಭ್ರಮಿಸಿದ್ದರು. ಕನ್ನಡಿಗ ಈ ಸಂಭ್ರಮ ಸಿಕ್ಕಾಪಟ್ಟೆ ವೈರಲ್ ಆಗಿತ್ತು.

ಹೀಗಾಗಿಯೇ ದೆಹಲಿಯಲ್ಲಿ ನಡೆಯಲಿರುವ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಇದಕ್ಕೆ ತಿರುಗೇಟು ನೀಡಲಿದ್ದಾರೆ ಎಂದು ಅಭಿಮಾನಿಗಳು ಊಹಿಸಿದ್ದರು. ಈ ಊಹೆಯು ನಿಜವಾಗಿತ್ತು. ಆದರೆ ಕೊನೆಯ ಕ್ಷಣದಲ್ಲಿ ವಿರಾಟ್ ಕೊಹ್ಲಿ ಔಟ್ ಆಗಿದ್ದರಿಂದ ಎಲ್ಲಾ ಪ್ಲ್ಯಾನ್‌ಗಳು ತಲೆಕೆಳಗಾದವು.



## ಕಾಂತಾರಾ ಶೈಲಿಯಲ್ಲಿ ಸಂಭ್ರಮಿಸಲು ಪ್ಲ್ಯಾನ್

ಈ ಬಗ್ಗೆ ಮಾತನಾಡಿದ ವಿರಾಟ್ ಕೊಹ್ಲಿ, ದೆಹಲಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸೋಲಿಸಿ, ಕೆಎಲ್ ರಾಹುಲ್ ಮುಂದೆ ಕಾಂತಾರಾ ಶೈಲಿಯಲ್ಲಿ ಸಂಭ್ರಮಿಸಬೇಕೆಂದು ಪ್ಲ್ಯಾನ್ ರೂಪಿಸಿದ್ದೆ ಎಂದಿದ್ದಾರೆ. ಆದರೆ ದುರಾದೃಷ್ಟವಶಾತ್ ಈ ಪ್ಲ್ಯಾನ್ ನಡೆಯಲಿಲ್ಲ. ಈ ಪಂದ್ಯದ 18ನೇ ಓವರ್‌ನಲ್ಲಿ ವಿರಾಟ್ ಕೊಹ್ಲಿ ಔಟಾಗಿದ್ದರು. ಒಂದು ವೇಳೆ ವಿರಾಟ್ ಕೊಹ್ಲಿ ಅಜೇಯರಾಗಿ ಉಳಿದಿದ್ದರೆ, ಕೆಎಲ್ ರಾಹುಲ್ ಮುಂದೆ ಇದು ನನ್ನ ಗ್ರೌಂಡ್ ಎಂದು ವೃತ್ತ ಬರೆದು ಸಂಭ್ರಮಿಸುತ್ತಿದ್ದರು.


ಆದರೆ ಕೊನೆಯ ಹಂತದಲ್ಲಿ ಔಟಾಗಿದ್ದರಿಂದ ವಿರಾಟ್ ಕೊಹ್ಲಿಯ ಎಲ್ಲಾ ಪ್ಲ್ಯಾನ್‌ಗಳು ತಲೆಕೆಳಗಾದವು. ಇದಾಗ್ಯೂ ಪಂದ್ಯದ ಬಳಿಕ ಕೆಎಲ್ ರಾಹುಲ್ ಬಳಿ ಹೋಗಿ ವಿರಾಟ್ ಕೊಹ್ಲಿ ಇದು ನನ್ನ ಮೈದಾನ ಎಂದು ಅಣಕಿಸಿದ್ದಾರೆ. ಈ ವಿಡಿಯೋ ಇದೀಗ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಇನ್ನು ಈ ಮ್ಯಾಚ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು 20 ಓವರ್‌ಗಳಲ್ಲಿ 162 ರನ್ ಕಲೆಹಾಕಿದ್ದರು. ಈ ಗುರಿಯನ್ನು ಆರ್‌ಸಿಬಿ ತಂಡ 18.3 ಓವರ್‌ಗಳಲ್ಲಿ ಚೇಸ್ ಮಾಡಿ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು.

# ಕೆಕೆಆರ್‌ಗೆ ರೋಚಕ ಗೆಲುವು ತಂದುಕೊಟ್ಟ ಸ್ಪಿನ್ನರ್ಸ್

## ಡುಪ್ಲೆಸಿಸ್, ಅಕ್ಷರ್ ಆಟ ವ್ಯರ್ಥ! | ಪ್ಲೇ ಆಫ್ ಆಸೆ ಜೀವಂತ

206ರನ್‌ಗಳ ಗುರಿ ಬೆನ್ನಟ್ಟಿದ ಅತಿಥೇಯ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 190ರನ್‌ಗಳಿಸಷ್ಟೇ ಶಕ್ತವಾಗಿ ಸೋಲೊಪ್ಪಿಕೊಂಡಿತು.

ಪ್ಲೇ ಆಫ್ ಪ್ರವೇಶಿಸಲು ಗೆಲ್ಲಲೇಬೇಕಾದ ಪಂದ್ಯದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡ 14 ರನ್‌ಗಳ ರೋಚಕ ಜಯ ಸಾಧಿಸುವ ಮೂಲಕ ಅದ್ಭುತ ಕಮ್‌ಬ್ಯಾಕ್ ಮಾಡಿದೆ. 206ರನ್‌ಗಳ ಗುರಿ ಬೆನ್ನಟ್ಟಿದ ಅತಿಥೇಯ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 190ರನ್‌ಗಳಿಸಷ್ಟೇ ಶಕ್ತವಾಗಿ ಸೋಲೊಪ್ಪಿಕೊಂಡಿತು. ಫಾಫ್ ಡುಪ್ಲೆಸಿಸ್ (62), ನಾಯಕ ಅಕ್ಷರ್ ಪಟೇಲ್ (43) ಹಾಗೂ ವಿಪ್ರಜ್ ನಿಗಮ್ (38) ಗೆಲುವಿಗಾಗಿ ನಡೆಸಿದ ಹೋರಾಟ ವ್ಯರ್ಥವಾಯಿತು. ಡೆಲ್ಲಿ ಕ್ಯಾಪಿಟಲ್ಸ್‌ಗೆ ಇದು 4ನೇ ಸೋಲಾಗಿದೆ. ಟಾಸ್ ಸೋತು ಬ್ಯಾಟಿಂಗ್ ಇಳಿದ ಕೆಕೆಆರ್ ಉತ್ತಮ ಆರಂಭ ಪಡೆದುಕೊಂಡಿತು. ಆರಂಭಿಕರಾದ ರೆಹ್ಮಾನುಲ್ಲಾ ಗುರ್ಬಜ್ ಹಾಗೂ ನರೈನ್ ಮೊದಲ ವಿಕೆಟ್ ಜೊತೆಯಾಟದಲ್ಲಿ 3 ಓವರ್‌ಗಳಲ್ಲೇ 48 ರನ್ ಸೇರಿಸಿದರು. ಗುರ್ಬಜ್ 12 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಸಹಿತ 26 ರನ್‌ಗಳಿಸಿದರೆ, ನರೈನ್ 16 ಎಸೆತಗಳಲ್ಲಿ ತಲಾ 2 ಬೌಂಡರಿ, 2 ಸಿಕ್ಸರ್ ಸಹಿತ 27 ರನ್‌ಗಳಿಸಿದರು. ನಾಯಕ ಅಜಿಂಕ್ಯಾ ರಹಾನೆ 14 ಎಸೆತಗಳಲ್ಲಿ 4 ಬೌಂಡರಿ, 1 ಸಿಕ್ಸರ್ ಸಹಿತ 26 ರನ್ ಗಳಿಸಿದರು. ಉತ್ತಮ ಆರಂಭ ಪಡೆದಿದ್ದ ಕೆಕೆಆರ್ ಕೆಲವು ರನ್‌ಗಳ ಅಂತರದಲ್ಲಿ ವಿಕೆಟ್ ಕಳೆದುಕೊಂಡಿತು. 23 ಕೋಟಿ ಪಡೆದಿರುವ ವೆಂಕಟೇಶ್ ಅಯ್ಯರ್ 5 ಎಸೆತಗಳಲ್ಲಿ ಕೇವಲ 7 ರನ್‌ಗಳಿಸಿ ಔಟ್ ಆದರು. ಆದರೆ ಯುವ ಆಟಗಾರ ಅಂಗ್‌ಕ್ರಿಸ್ ರಘುವಂಶಿ 32 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್ ಸಹಿತ 44 ರನ್‌ಗಳಿಸಿದರು. ಇದು ತಂಡದ ಗರಿಷ್ಠ ಸ್ಕೋರ್ ಆಯಿತು. ರಿಂಕು ಸಿಂಗ್ 25 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ 36 ರನ್‌ಗಳಿಸಿದರು. ಕೊನೆಯಲ್ಲಿ ಅಬ್ಬರಿಸಿದ ಆಯಂಡ್ರೆ ರಸೆಲ್ 8 ಎಸೆತಗಳಲ್ಲಿ 2 ಬೌಂಡರಿ, 1 ಸಿಕ್ಸರ್ ಸಹಿತ ಅಜೇಯ ರನ್‌ಗಳಿಸಿದರೆ, ಪೊವೆಲ್ ಅಜೇಯ ರನ್ ಗಳಿಸಿದರು.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966